
ಬೆಲೆ : 4 ರೂ.

ಕಲ್ಯಾಣ ಕಿರಣ

ಜುಲೈ, 1996

ಶರಣಗಣಮಣಿ ಬಸವಣ್ಣನವರು



ಕಲ್ಯಾಣ ಕಿರಣ

ಮಾಸಪತ್ರಿಕೆ, ಜೂನ್–ಜುಲೈ, 1996 ಬಿಡಿ ಸಂಚಿಕೆ 4 ರೂ.

ಸಂಪುಟ : 26 ಸಂಚಿಕೆ : 2 ಬಸವ ಶಕೆ : 863.

ವಾರ್ಷಿಕ ಚಂದಾ : 40 ರೂ. ಆಜೀವ ಸದಸ್ಯತ್ವ : 400 ರೂ.

ಕಿರಣಗನ್ನಡಿ

ಮುಖಪುಟ : ಶರಣಗಣಮಣಿ ಬಸವಣ್ಣನವರು.

ಹೊದ್ದಿಕೆಯ 3ನೇ ಪುಟ : ಪೂಜ್ಯ ನೀಲಾಂಬಿಕೆ ತಾಯಿಯವರು.

ಹೊದ್ದಿಕೆಯ 4 ನೇ ಪುಟ : ಬಸವ ಧರ್ಮ ಮಹಾಜಗದ್ಗುರು ಪೀಠದ ದ್ವಿತೀಯ ಪೀಠಾಧ್ಯಕ್ಷರು.

KALYANA KIRANA–Monthly Magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore–560074. Ph : 8437234

ಕಲ್ಯಾಣ ಕಿರಣ

ಸಂಪುಟ 26 ಬಸವ ಶಕೆ : 863 ಆಜೀವ ಸದಸ್ಯತ್ವ 400 ರೂ

ಸಂಚಿಕೆ 2 ಜುಲೈ 1996 ವಾರ್ಷಿಕ ಚಂದಾ 40 ರೂ

ಬಸವ ಚರಣಕೆ ನುಡಿ ನೈವೇದ್ಯ

1\. ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣ
ಮೆಟ್ಟಿದ ಕೆರಹ ಕಳೆದು ಹೋದಾತ ನೀನಲಾ ಬಸವಣ್ಣ
ಕಟ್ಟಿದ ಮುಡಿಯ ಬಿಟ್ಟು ಹೋದಾತ ನೀನಲಾ ಬಸವಣ್ಣ
ಸೀಮೆ ಸಂಬಂಧವ ತಪ್ಪಿಸಿ ಹೋದಾತ ನೀನಲಾ ಬಸವಣ್ಣ
ಲಿಂಗಕ್ಕೆ ಮಾಡಿದುದ ಸೋಂಕದೆ ಹೋದೆಯಲ್ಲಾ ಬಸವಣ್ಣ
ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ ಹಿಡಿದುಕೊಂಡು ಹೋದೆಯಲ್ಲಾ ಬಸವಣ್ಣ
ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣ
ಆ ಬಸವಂಗೆ ಶರಣೆಂಬ ಪಥವನೆ ತೋರು ಕಂಡಾ
ಕಲಿದೇವರದೇವ. (೫೧೮)

2\. ಗುರುಭಕ್ತಿಯಲ್ಲಿಪ್ಪ, ಲಿಂಗಭಕ್ತಿಯಲ್ಲಿಪ್ಪ
ಜಂಗಮಭಕ್ತಿಯಲ್ಲಿಪ್ಪ, ಪ್ರಸಾದದಲ್ಲಿಪ್ಪ
ಜಂಗಮಕ್ಕೆ ಮಾಡುವಲ್ಲಿಪ್ಪ ಮಾಡಿಸಿಕೊಂಬಲ್ಲಿಪ್ಪ
ತನುಮನಧನ ಒಂದಾಗಿ ನಿವೇದಿಸುವಲ್ಲಿಪ್ಪ
ಸಂಪೂರ್ಣಾತ್ಮನೆಂದು ನಿತ್ಯಂಗೆ ನೀವು ಕಾರುಣ್ಯವ ಮಾಡಿದಿರಿ
ನಿಮ್ಮ ಕಾರುಣ್ಯ ಕಟಾಕ್ಷದಲ್ಲಿ ಬಸವಣ್ಣನಲ್ಲದೆ ಮಾಡುವವರಿಲ್ಲ
ಆ ಬಸವಣ್ಣ ಹೇಳಿತ್ತ ಮೀರೆ ಕಾಣಾ, ಕಲಿದೇವರದೇವ. (೧೪೯)

3\. ಆಕಾರ ನಿರಾಕಾರವಾಯಿತ್ತಲ್ಲಾ ಬಸವಣ್ಣ
ಪ್ರಾಣ ನಿಃಪ್ರಾಣವಾಯಿತ್ತಲ್ಲಾ ಬಸವಣ್ಣ
ಲಿಂಗಜಂಗಮದ ಮಾಟ ಸಮಾಪ್ತಿಯಾಯಿತ್ತಲ್ಲಾ ಬಸವಣ್ಣ
ನಿಃಶಬ್ದವೇದ್ಯವಾದೆಯಲ್ಲಾ ಬಸವಣ್ಣ
ಕಲಿದೇವರದೇವನ ಹೃದಯಕಮಲವ ಹೊಕ್ಕು
ದೇವರಿಗೆ ದೇವನಾಗಿ ಹೋದೆಯಲ್ಲಾ ಸಂಗನಬಸವಣ್ಣ (೫೧)

(ಮಡಿವಾಳ ಮಾಚಿದೇವರು ಶ್ರೀ ಗುರುಬಸವಣ್ಣನವರು ಲಿಂಗೈಕ್ಯರಾದ ಪ್ರಸಂಗದಲ್ಲಿ ಸಲ್ಲಿಸಿದ ಶ್ರದ್ಧಾಂಜಲಿಯ ವಚನಗಳು)

ನಳನಾಮ ಸಂವತ್ಸರ ಶ್ರಾವಣಶುದ್ಧ ಪಂಚಮಿ ಮಂಗಳವಾರ, ದಿ 2-7-1196 ರಂದು ವಿಶ್ವಗುರು ಬಸವಣ್ಣನವರು ಲಿಂಗೈಕ್ಯರಾದರು. 800 ವರ್ಷದ ಲಿಂಗೈಕ್ಯ ದಿನಾಚರಣೆಯನ್ನು ಸೋಮವಾರ ದಿ. 19-8-1996 ರಂದು ಶ್ರದ್ಧಾಭಕ್ತಿಯಿಂದ ಆಚರಿಸಿರಿ.

ಎಲ್ಲರಿಗೂ ಬಸವ ಪಂಚಮಿಯ ಶುಭಾಶಯಗಳು

ದಿ. 20-8-1996 ರಂದು ಬಂದಿರುವ ನೀಲಮ್ಮ ಷಷ್ಠಿಯ ಶುಭಾಶಯಗಳು.

|| ಓಂ ಶ್ರೀ ಗುರು ಬಸವಲಿಂಗಾಯನಮಃ ||

ವಿಶ್ವಗುರು ಬಸವಣ್ಣನವರ 800ನೆಯ ಲಿಂಗೈಕ್ಯ ದಿನಾಚರಣೆಗಾಗಿ ಹೃತ್ಪೂರ್ವಕ ಕೋರಿಕೆ

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ,

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ(ಕ್ರಿ.ಶ. 1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣಶುದ್ಧ ಪಂಚಮಿ, ಮಂಗಳವಾರದಂದು ದಿ.2-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಇದೇ 1996ರ ಶ್ರಾವಣಶುದ್ಧ ಪಂಚಮಿಗೆ ಅವರು ಲಿಂಗೈಕ್ಯರಾಗಿ 800 ವರ್ಷ ತುಂಬುತ್ತಿದೆ. ಅವರು ಬಯಲಾದಂದಿನಿಂದಲೂ ಆ ದಿನವು ಬಸವ ಪಂಚಮಿ ಎಂದು ಖ್ಯಾತಿವೆತ್ತಿದೆ. 800ನೆಯ ಲಿಂಗೈಕ್ಯ ದಿನವು ಸೋಮವಾರ ದಿ. 19-8-1996 ರಂದು ಒದಗಿ ಬಂದಿದೆ.

ಪ್ರವಾದಿಗಳು, ಮಹಾಪುರುಷರು, ಧರ್ಮದ ಆದ್ಯರೂ ಆದವರ ಜನ್ಮದಿನ ಲೋಕಕ್ಕೆ ಮಹತ್ವಪೂರ್ಣ. ಅದೇ ರೀತಿ ಅವರು ಹೊಸಧರ್ಮದ ಪರಿಕಲ್ಪನೆ ನೀಡಿದ ದಿನ ಮತ್ತು ಅವರು ಬಯಲಾದ ದಿನ ಧರ್ಮಾನುಯಾಯಿಗಳಿಗೆ ಪರಮ ಪವಿತ್ರ. ಆದ್ದರಿಂದ ತಾವೆಲ್ಲರೂ ಬಸವ ಪಂಚಮಿಯ ದಿನದಂದು ಶ್ರೀಗುರು ಬಸವಣ್ಣನವರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕಾಗಿ ಕೋರುತ್ತೇವೆ. ಧರ್ಮಪಿತರಿಗೆ ಪೂಜೆ ಪ್ರಾರ್ಥನೆ ಸಲ್ಲಿಸುವ ಮೂಲಕ, ಸಭೆ-ಸಮಾರಂಭ-ಉತ್ಸವ ಏರ್ಪಡಿಸುವ ಮೂಲಕ, ಬಸವಣ್ಣನವರ ವಚನಗಳ ವಿವಿಧ ಗಾತ್ರದ ಪುಸ್ತಕಗಳನ್ನು ಮುದ್ರಿಸಿ ರಿಯಾಯಿತಿ ಬೆಲೆ ಅಥವಾ ಉಚಿತವಾಗಿ ಹಂಚುವ ಮೂಲಕ ನಿಮ್ಮ ಭಕ್ತಿ-ಗೌರವಗಳನ್ನು ಸಲ್ಲಿಸಬೇಕೆಂದು ಕೋರುತ್ತೇವೆ.

ವಿಶ್ವಗುರು ಬಸವಣ್ಣನವರು ವಿಶಾಲ ಸದ್ಭಾವಿ, ಮಾತೃಹೃದಯಿ, ವಿಶ್ವಪ್ರೇಮಿ, ಶ್ರೇಷ್ಠ ಸಮಾಜ ಸುಧಾರಕ, ಮಾನವತಾವಾದಿ, ದಲಿತೋದ್ಧಾರಕ, ಸ್ತ್ರೀಕುಲ ವಿಮೋಚಕ,ಬಸವಣ್ಣನವರು ಕನ್ನಡ ನಾಡಿನಲ್ಲಿ ಹುಟ್ಟುವ ಬದಲು ಮಹಾರಾಷ್ಟ್ರ ಬೆಂಗಾಲದಂತಹ ಅಭಿಮಾನಿ ಜನರ ನಾಡಿನಲ್ಲಿ ಹುಟ್ಟಿದ್ದರೆ ಇಷ್ಟು ಹೊತ್ತಿಗೆ ವಿಶ್ವಮಾನ್ಯರಾಗುತ್ತಿದ್ದರು. ಒಂದು ಕಡೆ ನಿರಭಿಮಾನ ಮತ್ತೊಂದು ಕಡೆ ಗೂಂಡಾಗಿರಿಯ ಆಗರವಾಗುತ್ತಿರುವ ಕನ್ನಡನಾಡಿನಲ್ಲಿ ಹುಟ್ಟಿ, ನೆಲದ ಭಾಷೆಯಾದ ಕನ್ನಡ ಭಾಷೆಯನ್ನು ದೇವಭಾಷೆಯನ್ನಾಗಿ ವಿಶ್ವವಿನೂತನವಾದ ಸಾರ್ವಕಾಲಿಕ ಮೌಲ್ಯದ ವಚನ ಸಾಹಿತ್ಯವನ್ನು ಕೊಟ್ಟಿದ್ದರೂ, ಬಸವಣ್ಣನವರು ಕೀರ್ತಿ-ಕೃತಜ್ಞತೆಗಳಿಂದ ವಂಚಿತರಾಗಿದ್ದಾರೆ.

ಇಂಥ ವಿಷಮ ವಾತಾವರಣದಲ್ಲಿಯೂ- ನಾವು ನೀವು ವೈಯಕ್ತಿಕವಾಗಿ ಭಕ್ತಿ-ಗೌರವಗಳನ್ನು ಸಮರ್ಪಣೆ ಮಾಡಿ ಕೃತಜ್ಞತೆ ಸಲ್ಲಿಸೋಣ ಎಂದು ತಮ್ಮಲ್ಲಿ ಅರಿಕೆ ಮಾಡುತ್ತೇವೆ.

ಕೂಡಲ ಸಂಗಮ

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮದ ಮಹಾಜಗದ್ಗುರು ಪೀಠ

---ooo---

ವೀರಶೈವವಲ್ಲ, ಲಿಂಗಾಯತ

ಡಾ|| ಹಿರೇಮಲ್ಲೂರ ಈಶ್ವರನ್,
ಟೊರಂಟೋ ವಿಶ್ವವಿದ್ಯಾಲಯ, ಕ್ಯಾನಡಾ, ಅಮೇರಿಕಾ.

ಕಳೆದ ಹಲವಾರು ತಿಂಗಳಿನಿಂದ 'ವೀರಶೈವವೊ ಲಿಂಗಾಯತವೊ' ಎನ್ನುವ ಬಗೆಗೆ ನಡೆದ ಹೇಳಿಕೆಗಳು, ಚಿಂತನೆಗಳು ಮತ್ತು ತೀರ ಇತ್ತೀಚೆಗೆ ಬಂದ 'ಧಮಿಕಿ' ಮತ್ತು ಬೆದರಿಕೆಗಳು ನನಗೆ ಸೋಜಿಗವನ್ನುಂಟು ಮಾಡಿದೆ. ವಿನಯ ಸೌಜನ್ಯದಿಂದ ಮೇರೆಗಳನ್ನು ಮೀರಿ ಕೆಲವರು ಧಾರ್ಮಿಕ ಸಂಸ್ಕೃತಿ, ಧರ್ಮಕ್ಕೆ ಸಂಬಂಧಿಸಿದ ವಿಚಾರಗಳು ತಮ್ಮ ಸ್ವತ್ತಾಗಿವೆ, ತಾವು ಹೇಳಿದ್ದೆ ಸತ್ಯ ಎನ್ನುವಂತೆ ತಿಳಿದುಕೊಂಡು ಕೊಟ್ಟ ಹಲವಾರು ಸ್ಪಷ್ಟೀಕರಣಗಳು ವಿಜ್ಞಾನವು ಅನುಸರಿಸುವ ವಿಧಾನಗಳಿಗೆ ಹೊರತಾಗಿವೆಯೆಂದು ನನಗೆ ಅನ್ನಿಸುತ್ತದೆ.

ಕಳೆದ ಹನ್ನೆರಡು ವರುಷಗಳಲ್ಲಿ ಕರ್ನಾಟಕ, ಮಹಾರಾಷ್ಟ್ರ ಮತ್ತು ನೆರೆಯ ಪ್ರಾಂತ್ಯಗಳನ್ನು ಸಂಚರಿಸಿ, ಸಮಗ್ರ ಲಿಂಗಾಯತ ಧಾರ್ಮಿಕ ಸಾಹಿತ್ಯ ಸಂಸ್ಕೃತಿಗಳನ್ನು ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಎರಡು ಪುಸ್ತಗಳನ್ನು ಬರೆದು ಯುರೋಪ್, ಅಮೇರಿಕಾ, ಭಾರತದಲ್ಲಿ ಪ್ರಕಟಿಸಿದ್ದೇನೆ. 'ಲಿಂಗಾಯತ, ಜೈನ ಹಾಗೂ ಬ್ರಾಹ್ಮಣ ಧಾರ್ಮಿಕ ಸಂಸ್ಕೃತಿ ಮತ್ತು ಮಠಗಳು' ಕುರಿತು ಬರೆದಿರುವ ನನ್ನ ಮೂರನೆಯ ಗ್ರಂಥ ಇದೀಗ ಮುದ್ರಣಕ್ಕೆ ಹೋಗಲಿದೆ. ನನ್ನ ಅಧ್ಯಯನದಿಂದ ನನಗೆ ತಿಳಿದು ಬಂದ ಸಂಕ್ಷಿಪ್ತ ವಿವರಗಳು ಹೀಗಿವೆ.

ಅಧ್ಯಯನದಿಂದ 'ವೀರಶೈವ' ಪದವು ಲಿಂಗಾಯತನಲ್ಲ, ಬಸವಣ್ಣನದೂ ಅಲ್ಲ, ಅದು ಕಾಶ್ಮೀರ, ತಮಿಳು, ತೆಲುಗು ದೇಶದಲ್ಲಿಂದ ಬಂದ ಶಬ್ದ. ವೈದಿಕ ಹಾಗೂ ಶೈವ ಸಿದ್ಧಾಂತಗಳು 'ಕರ್ಮ'ವನ್ನು ಹೇಳುತ್ತವೆ, ವರ್ಣಾಶ್ರಮವನ್ನು ಪ್ರತಿಪಾದಿಸುತ್ತವೆ. ತಮಿಳುನಾಡಿನ ಶೈವ ಭಕ್ತರು ಶೂದ್ರರನ್ನು, ಮಹಿಳೆಯನ್ನು ಎಂದರೆ ಸಮಾಜದ ಮುಕ್ಕಾಲು ಭಾಗವನ್ನು ತಮ್ಮ ಪ್ರಪಂಚದಿಂದ ದೂರವಾಗಿಸಿ ಅವರನ್ನು ಹೊರಹಾಕಿದ್ದುಂಟು. ಪುರಾತನರು ಶೂದ್ರ ಮತ್ತು ಮಹಿಳೆಯನ್ನು ಕಡೆಗಣಿಸಿ ಅವರನ್ನು ತಮ್ಮ ಸಂಘದಿಂದ ಹೊರ ಹಾಕಿದರು. ಆನಂತರ ಕರ್ನಾಟಕದಲ್ಲಿ ಆ ಕಾಲದಲ್ಲಿ ಊರ್ಜಿತಾವಸ್ಥೆಯಲ್ಲಿದ್ದ ಕಾಳಾಮುಖರು ಇನ್ನಷ್ಟು ಮುಂದೆ ಹೋಗಿ ಶೂದ್ರ ಮತ್ತು ಮಹಿಳೆಯರನ್ನು ನೋಡಲು ಆಗದು, ಅವರು ಧಾರ್ಮಿಕ ಗ್ರಂಥಗಳನ್ನು ಓದಲು ಆಗದು, ಅವರು ಮಲಿನರು; ಅವರನ್ನು ಮುಟ್ಟಿದರೆ

ಮಾಲಿನ್ಯವುಂಟಾಗುವುದರಿಂದ ಸ್ನಾನ ಮಾಡಬೇಕೆನ್ನುವಷ್ಟರ ಮಟ್ಟಿಗೆ ಕಾಳಾಮುಖರು ಶೈವ ಧರ್ಮವನ್ನು ನಡೆಸಿಕೊಂಡು ಬಂದರು ಎನ್ನುವುದನ್ನು ಪಂಡಿತರು ಗಮನಿಸಿದ್ದಾರೆ.

ಆ ಕಾಲದಲ್ಲಿ ಪುಣ್ಯ ಪುರುಷನೊಬ್ಬನನ್ನು ಜಾಗತಿಕ ಮಟ್ಟದಲ್ಲಿ ಪ್ರಜಾಧರ್ಮವೊಂದನ್ನು ಪ್ರಸಾರ ಮಾಡಲಿಕ್ಕೆಂದು ಬರುವ ಪ್ರವಾದಿಯ ಬರವನ್ನು ದಕ್ಷಿಣದ ಈ ಭೂಮಿ ಕಾಯ್ದುಕೊಂಡು ನಿಂತಿತ್ತು. ಆಗ ಕಾಣಿಸಿಕೊಂಡವನು ಬಾಗೇವಾಡಿಯ ಬಸವಣ್ಣ. ಅವರು ನಡೆಸಿದ ಸಾಮಾಜಿಕ ಆಂದೋಲನದಿಂದಾಗಿ ಕೇವಲ ಅರ್ಧಶತಮಾನದ ಅವಧಿಯಲ್ಲಿ ಕಾಳಾಮುಖ ಶೈವ ಮಾತ್ರವಲ್ಲ ಶೈವದ ಸಂಸ್ಕೃತಿಯನ್ನೆ ಲಿಂಗಾಯತ ಧರ್ಮವು ನುಂಗಿತ್ತಲ್ಲದೆ, ಮುಂದಿನ ಎರಡೂವರೆ ಶತಮಾನಗಳಲ್ಲಿ ಶೈವವು ಅದರಲ್ಲಿ ಸಂಪೂರ್ಣ ಕರಗಿ ಹೋದದ್ದನ್ನು 'ನಶಿಸಿದ ಶೈವ ಧರ್ಮಗಳು' ಎಂಬ ಬರ್ಕಲಿ ವಿಶ್ವವಿದ್ಯಾಲಯವು ಪ್ರಕಟಿಸಿರುವ ಗ್ರಂಥದಲ್ಲಿ ವಿವರಿಸಲಾಗಿದೆ.

ಆಗಿನ ಶೈವವು ಲಿಂಗಾಯತದಲ್ಲಿ ಕರಗಿ ಹೋದಂತೆ, ಕಾಳಾಮುಖರು ಲಿಂಗಾಯತನ ಧರ್ಮವನ್ನು ಅಪ್ಪಿಕೊಂಡಿದ್ದಲ್ಲದೆ ಬಸವಣ್ಣನವರಿಂದ ವ್ಯವಸ್ಥಿತವಾಗಿ ಸಂಸ್ಥಾಪಿತವಾದ ಆ ಧರ್ಮದಲ್ಲಿ ಕರಗಿ ಹೋದರು. ಈಗ ನಾವು ಹೆಸರಿಸುವ ವೀರಶೈವವು ಕಾಳಾಮುಖರು ತಮ್ಮ ಹಿಂದೆ ಬಿಟ್ಟು ಹೋದ ಎಲುಬಿನ ಹಂದರದಲ್ಲಿ 'ಚುಕು' 'ಚುಕು' ಎನ್ನುತ್ತ ಆಗೀಗ ಗದ್ದಲ ಮಾಡುತ್ತಿದೆ.

ಲಿಂಗಾಯತ ಧರ್ಮವು 'ವಿಪ್ರ' 'ಅರ್ಚಕ' ಮತ್ತು 'ಅಯ್ಯಪ್ಪ'ನ ಧರ್ಮವಲ್ಲ. ಅದು ಶೈವರ ಅಭಿಷೇಕ, ಮಂತ್ರ ಗಣ್ಯತಾವಾದವನ್ನು ನಾವು ಶ್ರೇಷ್ಠರು ಎಂದು ಹೇಳಿಕೊಳ್ಳುವವರನ್ನು ತಿರಸ್ಕರಿಸುತ್ತದೆ. ಕರ್ಮ, ಪುನರ್ಜನ್ಮ, ಸ್ವರ್ಗನರಕಗಳನ್ನು ಹೊರಗೆ ಹಾಕಿದ ಪ್ರಜಾಧರ್ಮವಾಗಿದೆ. ಇಂದು ಪ್ರಪಂಚಕ್ಕೆ ಪ್ರಪಂಚವೇ ಅಪ್ಪಿಕೊಂಡಿರುವ ಲೌಕಿಕ ಮೌಲ್ಯಗಳನ್ನು ಎಂದರೆ ಸಮತೆ, ಸೋದರಭಾವ ಹಕ್ಕುಗಳನ್ನು ದೇವತ್ವಕ್ಕೇರಿಸಿದ್ದನ್ನು ಜಾಗತಿಕ ಪಂಡಿತರು ಗುರುತಿಸಿದ್ದಾರೆ. ಬಸವಣ್ಣನವರಿಂದ ಸಂಸ್ಥಾಪಿತವಾದ ಲಿಂಗಾಯತ ಧರ್ಮವು ಅಂತಹ ವಿಶ್ವಧರ್ಮದ ಪಂಕ್ತಿಯಲ್ಲಿ ನಿಂತು ಪ್ರಜಾತತ್ವಗಳನ್ನು ದೇವತ್ವದ ಮಟ್ಟಕ್ಕೇರಿಸಿದ ಪ್ರಜಾ ಧರ್ಮವಾಗಿದೆ. ಶೈವರ ಶಿವನು ಲಿಂಗಾಯತನ ಇಷ್ಟಲಿಂಗವಲ್ಲ. ಬಸವ ಪೂರ್ವದಲ್ಲಿ 'ವೀರಶೈವ' ಪದವು ಇದ್ದರೆ ಇರಬಹುದು. ಆದರೆ ಅದಕ್ಕೂ ಲಿಂಗಾಯತ ಪದಕ್ಕೂ ಸಂಬಂಧವೇ ಇರುವುದಿಲ್ಲ. 'ಶೈವ'ಕ್ಕೆ 'ವೀರ' ಪದವನ್ನು ಸೇರಿಸಿ ಸಮಾಜಕ್ಕೆ ಶೂದ್ರರಿಗೆ ಮಹಿಳೆಯರ ಕಲ್ಯಾಣಕ್ಕಾಗಿ ಅದು ಏನು ಮಾಡಿದೆ? ಲಿಂಗಾಯತನಲ್ಲದವನನ್ನು ಶೂದ್ರರನ್ನು ಮಹಿಳೆಯರನ್ನು ಧರ್ಮಗುರುವನ್ನಾಗಿ ಮಾಡಿಕೊಳ್ಳಬಲ್ಲಿರಾ? ಗಂಡುಸಾದರೆ ಕೆಲಸವನ್ನು 'ವೀರಶೈವ'ವನ್ನು ಉಗ್ಗಡಿಸುವವರು ಮಾಡಬಲ್ಲರೆ?

ಬಸವಣ್ಣನವರ ಮಾತಿನಲ್ಲಿ ಹೇಳುವುದಾದರೆ 'ಲಿಂಗವಂತನು ಲಿಂಗವಂತರಿಗೆ ಬುದ್ಧಿಯನ್ನು ಹೇಳಿದರೆ ಲಿಂಗಭಕ್ತನು ಲಿಂಗ ಪಥವ ಹೇಳಿದಡೆ ಅದಕ್ಕೆ ಮತ್ಸರ, ಧಮಕಿಗಳು ಏಕೆ?.

ಕೃಪೆ :- ಪ್ರಪಂಚ, 7-8-1996

ಖ್ಯಾತ ತೆಲುಗು ವಿದ್ವಾಂಸ ಡಾ|| ಬಾಡಾಲ ರಾಮಯ್ಯನವರ ಕೊಡುಗೆ

-ಮಾತಾಜಿ

ಶ್ರೀ ಡಾ|| ಬಾಡಾಲ ರಾಮಯ್ಯನವರದು ಸ್ಮರಣಾರ್ಹ ಕೊಡುಗೆ. ಅವರು ತೆಲುಗಿಗೆ ಭಾಷಾಂತರಿಸಿರುವ 'ಬಸವೇಶ್ವರ ವಚನಾಲು' ಒಂದು ಮಹತ್ವಪೂರ್ಣ ಕೃತಿ, ಆ ಕೃತಿಯಲ್ಲಿ ಬಂದಿರುವ ಪೀಠಿಕಾ ಭಾಗವಂತೂ ಗಣನೀಯ ದಾಖಲೆ. ಡಾ|| ಬಾಡಾಲ ರಾಮಯ್ಯನವರ ಡಿ.ಲಿಟ್ ಪ್ರಬಂಧ ಗಣನೀಯ ದಾಖಲೆಯಾಗಲು ಅವರು ತೆಲುಗಿನ ಮಹಾನ್ ಕವಿ ಪಾಲುಕುರಿಕೆ ಸೋಮನಾಥನ ಬಸವ ಪುರಾಣವನ್ನು ಮತ್ತು ಶರಣರ ಕಾಲಜ್ಞಾನ ವಚನಗಳನ್ನು ಆಧರಿಸಿ ಕಾಲ ನಿರ್ಣಯ ಮಾಡಿದುದೇ ಕಾರಣ. ಧರ್ಮಪಿತ ಬಸವಣ್ಣನವರು ಲಿಂಗೈಕ್ಯರಾದ ಕೆಲವೇ ತಿಂಗಳುಗಳಲ್ಲಿ ಪಾಲ್ಕುರಿಕೆ ಸೋಮನಾಥನು ಶ್ರೀಶೈಲದಲ್ಲಿ ಸಂಚರಿಸುತ್ತಿದ್ದ ಬಸವ ಪರಂಪರೆಯ ಜಂಗಮರ ಮೂಲಕ ಮಾಹಿತಿ ಸಂಗ್ರಹಿಸಲು ಶಕ್ತನಾದ. ಇದಕ್ಕೆ ಪ್ರೇರಣೆ ದೊರೆತುದು ಪಾಲ್ಕುರಿಕೆ ಸೋಮನಾಥನ ಗುರುವಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಬಸವ ಸ್ತುತಿಯಿಂದ. ತಾನು ಮೆಚ್ಚಿ ಆರಾಧಿಸುವ ಪಂಡಿತಾರಾಧ್ಯರು ಗುರು ಬಸವಣ್ಣನವರು ಲಿಂಗೈಕ್ಯರಾಗಿ ಅಗಲಿದಾಗ ಹಲುಬಿ, ಕಳವಳಿಸಿ ಶ್ರದ್ಧಾಂಜಲಿ ಗೀತೆ ಬರೆದುದನ್ನು ನೋಡಿ ಬೆರಗಾಗಿ ಬಸವಣ್ಣನವರ ಬಗ್ಗೆ ಮಾಹಿತಿ ಸಂಗ್ರಹಿಸಲು ಆರಂಭಿಸಿ, ತಾನು ಬರೆಯತೊಡಗಿದ. ಪಂಚಭಾಷಾ ವಿಶಾರದನಾದ ಈ ಕವಿ ಮನ ತುಂಬಿ, ಹೃದಯತುಂಬಿ ಬಸವಣ್ಣನವರನ್ನು ಕೊಂಡಾಡುತ್ತಾನೆ ತನ್ನ ಕೃತಿಗಳ ಮೂಲಕ.

ಸಮಯದ ದೃಷ್ಟಿಯಿಂದ ಸಮೀಪದವನಾದ ಪಾಲ್ಕುರಿಕೆ ಸೋಮನಾಥ ಸಂಗ್ರಹಿಸಿದ ಮಾಹಿತಿ ನಿಖರತೆಗೆ ಹತ್ತಿರದಲ್ಲಿದ್ದರೂ ತೆಲುಗಿನಲ್ಲಿ ಇದ್ದುದರಿಂದ ನಮಗೆ ಬೇಗ ಗಮನಕ್ಕೆ ಬರಲಿಲ್ಲ. ಡಾ|| ಬಾಡಾಲ ರಾಮಯ್ಯನವರು ಬಸವಣ್ಣನವರ ಬಗ್ಗೆ ತೆಲುಗಿನಲ್ಲಿ ಲಭ್ಯವಾದ ಮಾಹಿತಿ ಬಹಳ ಮಹತ್ವಪೂರ್ಣ ಎಂದು ಗ್ರಹಿಸಿ ವಿಶೇಷ ಅಧ್ಯಯನ ಮಾಡಿದ್ದಾರೆ. ಅಲ್ಲದೆ ಕಾಲಜ್ಞಾನ ವಚನಗಳು ನಿರ್ಲಕ್ಷಿಸಲ್ಪಡುವಂಥವಲ್ಲ ಎಂಬುದನ್ನು ಮನಗಂಡು ಆ ಬಗ್ಗೆ ಶ್ರಮಪಟ್ಟು ಅಧ್ಯಯನ ಮಾಡಿದ್ದಾರೆ. ಅವರೊಡನೆ 1972-73 ರ ಸಮಯದಲ್ಲಿ ಚರ್ಚಿಸಿದಾಗ ನಮಗೂ ಬಹು ಆಶ್ಚರ್ಯಕರ ಸಂಗತಿ ಲಭ್ಯವಾದವು; ಮತ್ತು ಕಾಲಜ್ಞಾನ ವಚನಗಳ ಬಗ್ಗೆ ಇದ್ದ ತಿರಸ್ಕಾರ, ನಿರ್ಲಕ್ಷ ಕಡಿಮೆಯಾಗಿ ಇವು ಐತಿಹಾಸಿದ ಮಾಹಿತಿ ಒದಗಿಸುವಲ್ಲಿ ಅಧಿಕೃತ ದಾಖಲೆಗಳಾಗಬಲ್ಲವು ಎಂಬ ಕುತೂಹಲ ಮೈಗೂಡಿತು.

ಬಸವ ಲಿಂಗೈಕ್ಯ ವರ್ಷ ಕ್ರಿ.ಶ. 1196.

ಪಾಲ್ಕುರಿಕೆ ಮತ್ತು ಭೀಮಕವಿಯ ಅರ್ಧೋದಯ ಗಳಿಗೆಯಲ್ಲಿ ಬಸವಣ್ಣನವರ ಜನನ, ಎಂಬ ಬಗ್ಗೆ ಡಾ|| ಬಾಡಾಲ ರಾಮಯ್ಯನವರು ನಂಬಿ ಈ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಅದು ನಂತರ ಸಮಂಜಸವೆನಿಸಿಲ್ಲ ಎಂದು ಮತ್ತೊಮ್ಮೆ ಭೇಟಿಯಾದಾಗ ಹೇಳಿದರು. ಆದರೆ ಅವರು, ಬಸವಣ್ಣನವರ ಜೀವನದ ಅಂತಿಮ ಕಾಲದ ಬಗ್ಗೆ ಕೊಟ್ಟ ವಿವರ ನಿಜಕ್ಕೂ

ಪ್ರಶಂಸಾರ್ಹವಾಗಿದೆ. ಬಸವಣ್ಣನವರು ಶ್ರಾವಣಶುದ್ಧ ಪಂಚಮಿ ಮಂಗಳವಾರದಂದು ಲಿಂಗೈಕ್ಯರಾದರು ಎಂಬ ಬಗ್ಗೆ ಕಾಲಜ್ಞಾನ ವಚನಗಳ ಆಧಾರದ ಮೇಲೆ ಖಚಿತವಾಗಿ, ಮೊಟ್ಟ ಮೊದಲನೆಯದಾಗಿ ಪ್ರತಿಪಾದಿಸಿದವರು ಡಾ|| ಬಾಡಾಲ ರಾಮಯ್ಯನವರು. ಅಲ್ಲಿಯವರೆಗೆ ಬಸವಣ್ಣನವರ ಲಿಂಗೈಕ್ಯ ವರ್ಷ 1168 ಎಂದೇ ನಂಬಲಾಗಿದ್ದಿತು. ಪ್ರಸ್ತುತ ಕೃತಿ ''ಬಸವೇಶ್ವರ ವಚನಾಲು''- ಇದರ ಪೀಠಿಕೆಯಲ್ಲಿ ಲಭ್ಯವಾಗುವ ಕೆಲವು ನಿರ್ದಿಷ್ಟವಾದ ದಿನಗಳು ಹೀಗಿವೆ.

1. ವರ್ಣಾಂತರ ವಿವಾಹ ನಡೆದುದು- ರಾಕ್ಷಸನಾಮ ಸಂವತ್ಸರ ಫಾಲ್ಗುಣ ಮಾಸದ ಶುದ್ಧ ಏಕಾದಶಿ, ಸೋಮವಾರದಂದು ದಿ. 12-2-1196
2. ದ್ವಾದಶಿಯಂದು ಬಸವಣ್ಣನವರ ಪದತ್ಯಾಗ ಮತ್ತು ಗಡಿಪಾರು.
3. ತ್ರಯೋದಶಿಯಂದು ಶರಣರ ಬಂಧನ
4. ಚತುರ್ದಶಿಯಂದು ಹರಳಯ್ಯ-ಮಧುವಯ್ಯಗಳ ವಧೆ
5. ಹುಣ್ಣಿಮೆಯಂದು ಬಿಜ್ಜಳನ ವಧೆ.

ಈ ಮಾಹಿತಿಯು ಕಾಲಜ್ಞಾನ ವಚನದಲ್ಲಿ ಬಹಳ ಕಡೆ ಬಂದಿದೆ. ಈ ಬಗ್ಗೆ ನಾನು ಕಳೆದ ವರ್ಷವೇ 'ಬಸವಣ್ಣನವರ ಜೀವನದ ಕಾಲನಿರ್ಣಯ' ಎಂಬ ಒಂದು ಪುಸ್ತಕ ಬರೆದಿದ್ದೇನೆ. ಡಾ|| ಬಾಡಾಲ ರಾಮಯ್ಯ ಏನು ಬರೆದಿರುವರೋ ನೋಡೋಣ ಎಂದು ತೆಲುಗು ಓದಲು ಬರುವ ಮಾತೆ ನೀಲಾಂಬಿಕೆಯ ಕೈಲಿ ಭಾಷಾಂತರಿಸಿದಾಗ ನೇರವಾಗಿ ಕಾಲಜ್ಞಾನ ವಚನದ ವಿವರ ಸಂಗ್ರಹಿಸಿದ ಡಾ|| ಬಾಡಾಲ ರಾಮಯ್ಯನವರ ಅಭಿಪ್ರಾಯವೂ ಅದೇ ರೀತಿ ಬಂದಿತು.

ಬಸವಣ್ಣನವರ ಲಿಂಗೈಕ್ಯ ವರ್ಷ 1196 ಎಂಬ ಬಗ್ಗೆ ಡಾ|| ಬಾಡಾಲ ರಾಮಯ್ಯನವರು ಹಲವಾರು ಆಧಾರಗಳನ್ನು ಮಂಡಿಸುತ್ತಾರೆ.

1. ಅರ್ಜುನವಾಡ ಶಾಸನ ಬಸವಣ್ಣನವರ ಜೀವಿತವನ್ನು 1196 ರವರೆಗೆ ಸ್ಥಿರೀಕರಿಸುತ್ತದೆ.

2. ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಕಾಕತೀಯ ಗಣಪತಿ ದೇವನಿಂದ ಸನ್ಮಾನಿಸಲ್ಪಟ್ಟವರು. ಗಣಪತಿದೇವ 1198ರಲ್ಲಿ ಅಧಿಕಾರಕ್ಕೆ ಬಂದನು. ಪಂಡಿತಾರಾಧ್ಯರು ಬಸವಣ್ಣನವರು ಲಿಂಗೈಕ್ಯರಾದ ನಂತರ ಲಿಂಗೈಕ್ಯರಾದವರು. ಬಸವಣ್ಣನವರು ಲಿಂಗೈಕ್ಯರಾದ 8 ದಿವಸಗಳಿಗೆ ಮಲ್ಲಿಕಾರ್ಜುನ ಪಂಡಿತಾರಾಧ್ಯರಿಗೆ ಆ ವಿಷಯ ತಿಳಿಯಿತು. ಅಂದು ಅವರು ವನಿಪುರದ ಶಂಕರಯ್ಯ ಎಂಬುವವರ ಮನೆಯಲ್ಲಿದ್ದರು.

3. ಅಲ್ಲಮ ಪ್ರಭುದೇವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಆಷಾಡ ಶುದ್ಧ ಪಂಚಮಿಯಂದು 3-6-1196 (ಅ.ಪ್ರ. ಕಾ.ಜ್ಞಾನ. ಪುಟ 7. ಶ್ರೀ ಶಿವಸ್ವಾಮಿ ಸಂಪಾದಿತ)ನಂತರ ಒಂದು ತಿಂಗಳಿಗೆ ದಿ. 2-7-1196 ರಂದು ಬಸವಣ್ಣನವರು ಲಿಂಗೈಕ್ಯರಾದರು. ಆಂಧ್ರದ ಸಂಗಮೇಶ್ವರ ಶಾಸನದ ಪ್ರಕಾರ ದಿ. 15-10-1187ರ ವರೆಗೆ ಮಲ್ಲಿಕಾರ್ಜುನ

ಪಂಡಿತಾರಾಧ್ಯರು ಇನ್ನೂ ಜೀವಿಸಿದ್ದರು. ಅವರು ಬಸವಣ್ಣನವರು ಲಿಂಗೈಕ್ಯರಾದ ಸ್ವಲ್ಪ ಸಮಯದಲ್ಲಿ ಲಿಂಗೈಕ್ಯರಾದರು. ಅಂದಾಗ ಈ ವರೆಗೂ ಅನೇಕ ಸಾಹಿತಿಗಳು, ಇತಿಹಾಸಕಾರರು ಭಾವಿಸಿದಂತೆ ಬಸವಣ್ಣನವರು ಲಿಂಗೈಕ್ಯರಾದುದು 1168ರಲ್ಲಿ ಅಲ್ಲ; 1196ರಲ್ಲಿ ಎಂಬುದನ್ನು ತಮ್ಮ ಕೃತಿಯಲ್ಲಿ ಹಲವಾರು ದಾಖಲೆಗಳೊಡನೆ ಡಾ|| ರಾಮಯ್ಯನವರು ವಿಶ್ಲೇಷಿಸಿದ್ದಾರೆ. ಈ ಪ್ರಕಾರ ಬಸವಣ್ಣನವರ 800ನೆಯ ಲಿಂಗೈಕ್ಯ ವರ್ಷವಿದಾಗಿದ್ದು, 19-8-1996 ರಂದು 800ನೆಯ ಬಸವ ಪಂಚಮಿ ಒದಗಿದೆ.

---ooo---

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರು ನಾಮಕರಣ ಹೋರಾಟದಲ್ಲಿರುವ ನ್ಯಾಯ.

-ಮಾತಾಜಿ

ಗುಲಬರ್ಗಾ ವಿಭಾಗಕ್ಕೆ ಒಂದು ವಿಶ್ವವಿದ್ಯಾಲಯದ ಅಗತ್ಯವಿದೆ ಎಂಬುದನ್ನು ಮನಗಂಡ ಹಿರಿಯರು ಕರ್ನಾಟಕ ವಿಶ್ವವಿದ್ಯಾಲಯದ ಅಂಗವಾಗಿ ಪ್ರಸ್ತುತ ವಿಶ್ವವಿದ್ಯಾಲಯ ಮೈದಳೆಯುವಾಗಲೇ ಒಂದು ಹಂಬಲವನ್ನು ಹೊಂದಿದ್ದರಂತೆ . ''ಹುಟ್ಟಲಿರುವ ವಿಶ್ವವಿದ್ಯಾಲಯವು ಬಸವಣ್ಣನವರ ಕಾರ್ಯಕ್ಷೇತ್ರ ಕಲ್ಯಾಣವನ್ನು ಒಳಗೊಂಡ ಕಾರಣ ಅದು ಬಸವೇಶ್ವರ ವಿಶ್ವವಿದ್ಯಾಲಯ ಎಂದಾಗಬೇಕು. ಇದರ ಮೂಲಕ ಬಸವಾದಿ ಪ್ರಮಥರ ಸಂದೇಶ ಅರ್ಥಾತ್ ವಚನ ಸಾಹಿತ್ಯ ಜಗತ್ತಿನ ತುಂಬ ಪಸರಿಸಬೇಕು'' ಇದನ್ನು ಹೇಳಿದವರು ವಯೋವೃದ್ಧರು, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳೂ ಆಗಿದ್ದ ಡಾ||ಆರ್.ಸಿ. ಹಿರೇಮಠರು.

ಯಾವುದಾದರೂ ಒಂದು ವಿಷಯವನ್ನು ಪ್ರತಿಪಾದಿಸುವಾಗ ಮೇಲ್ನೋಟಕ್ಕೆ ಅದು ನ್ಯಾಯ ಎನ್ನಿಸುವುದುಂಟು. ಅಂಥ ನ್ಯಾಯವಂತಿಕೆಯನ್ನು ನಮ್ಮ ಬೇಡಿಕೆಯ ಹಿಂದೆ, ಹೋರಾಟದ ಹಿಂದೆ ಕಾಣಬಹುದು. ಒಂದೊಂದು ಪ್ರದೇಶಕ್ಕೆ ತನ್ನದೇ ಆದ ಐತಿಹಾಸಿಕತೆ, ಸಂಸ್ಕೃತಿ, ಸಾಹಿತ್ಯ, ಧರ್ಮ-ಇವುಗಳ ಹಿನ್ನೆಲೆ ಇರುತ್ತದೆ. ವಿಶ್ವವಿಭೂತಿ ಬಸವಣ್ಣನವರು ಸಾರ್ವಕಾಲಿಕ ವ್ಯಕ್ತಿ; ಇಲ್ಲಿ ಅಲ್ಲಿ ಎಲ್ಲೆಲ್ಲೂ ಸಲ್ಲುವಂಥವರಾದರೂ ಅವರ ಅನುಯಾಯಿಗಳೂ, ನಿರಭಿಮಾನಿಗಳಾದ ಕನ್ನಡಿಗರ ದೆಸೆಯಿಂದ ಅವರು ವಿಶಾಲ ವ್ಯಾಪ್ತಿಯಲ್ಲಿ ಪರಿಚಯಿಸಲ್ಪಟ್ಟಿಲ್ಲ. ಕಲ್ಯಾಣ ಕರ್ನಾಟಕ ಎಂಬ ಅನ್ವರ್ಥಕ ನಾಮ ಪಡೆಯುವ ಗುಲಬರ್ಗಾ ವಿಭಾಗಕ್ಕೂ ಬಸವಣ್ಣನವರಿಗೂ ಬಲು ನಂಟು. ಹೀಗಾಗಿ ವಿಶ್ವವಿದ್ಯಾಲಯವು ಮೈದಳೆದಂದಿನಿಂದಲೇ ಅದಕ್ಕೆ ಬಸವೇಶ್ವರರ ಹೆಸರಿಡಬೇಕೆಂದು ಇಲ್ಲಿಯ ಜನರ ಹಂಬಲ. ನಿಜಕ್ಕೂ ಇದು ಬಲು ಸಣ್ಣ ವಿಷಯ.

ಆದರೆ ಇದಕ್ಕೆ ಅಡ್ಡಗಾಲು ಹಾಕುವವರು ದಲಿತ ಸಮಾಜದಲ್ಲಿನ ಒಂದು ಚಿಕ್ಕ ಗುಂಪು. ಡಾ|| ಬಾಬಾ ಸಾಹೇಬ ಅಂಬೇಡ್ಕರ್ ಅವರ ಹೆಸರನ್ನು ಇಡಬೇಕೆಂದು ಅವರ ಹಠ.

ಅಣ್ಣ-ತಮ್ಮಂದಿರಂತೆ ವೈಚಾರಿಕತೆಯಲ್ಲಿ ಇರಬೇಕಾದ ಬಸವಣ್ಣ-ಅಂಬೇಡ್ಕರರನ್ನು ದಾಯಾದಿಗಳೆಂಬಂತೆ ಮಾಡಿ, ಅವರ ಅನುಯಾಯಿಗಳಾದ ಲಿಂಗಾಯತರು-ದಲಿತರ ಮಧ್ಯೆ ಸದಾ ವೈಷಮ್ಯ ಹುಟ್ಟಿಸಲು ಕೆಲವರ ಪ್ರಯತ್ನ. ಇದಕ್ಕೆ ಕೆಲವು ರಾಜಕೀಯ ನೇತಾರರ ಕುಮ್ಮಕ್ಕು. ಕೆಲವರದು ವೈಷಮ್ಯದ ಕಿಡಿ ಹಚ್ಚಿ ಅದರ ಮಧ್ಯೆ ತಾವು ರಾಜಕೀಯವಾಗಿ ಭದ್ರವಾಗುವ ಹುನ್ನಾರ, ಹಣ ಸಂಪಾದನೆಯ ಆಲೋಚನೆ. ಆದರೆ ಒಂದು ಸಮಾಧಾನಕರ ಸಂಗತಿ ಎಂದರೆ ಕೆಲವೇ ಕೆಲವರು ಸಂಕುಚಿತ ಬುದ್ಧಿಯವರು ತೋರುತ್ತಿರುವ ವರ್ತನೆಗೆ ಇಡೀ ದಲಿತಸಮೂಹದ ಬೆಂಬಲವಿಲ್ಲ ಮತ್ತು ಬಸವಣ್ಣನವರ ಪರವಾಗಿಯೇ ಅನೇಕ ದಲಿತರು ಮತ್ತು ಹಿಂದುಳಿದ ವರ್ಗದವರು ಇದ್ದಾರೆ ಎಂಬುದು ಗಮನಿಸಬೇಕಾದ ಸಂಗತಿ.

ಬಸವೇಶ್ವರರ ಹೆಸರನ್ನು ಇಡಬೇಕು ಎಂದು ಮನವಿ ಕೊಡುತ್ತಲೇ ದಲಿತರ ಒಂದು ಗುಂಪಿನವರು ಡಾ|| ಅಂಬೇಡ್ಕರರ ಹೆಸರು ಮುಂದಿಡುತ್ತಾರೆ. ಈ ಬೇಡಿಕೆ ನ್ಯಾಯೋಚಿತವೇ ಎಂಬುದನ್ನು ಕೊಂಚ ವಿಶ್ಲೇಷಿಸೋಣ.

ಭಾರತದಲ್ಲಿ ಈಗಾಗಲೇ 6 ವಿಶ್ವವಿದ್ಯಾಲಯಗಳಿಗೆ ಡಾ|| ಬಾಬಾಸಾಹೇಬ ಅಂಬೇಡ್ಕರರ ಹೆಸರನ್ನು ಇಡಲಾಗಿದೆ.

1. ಡಾ|| ಬಾಬಾಸಾಹೇಬ ಅಂಬೇಡ್ಕರ ತಾಂತ್ರಿಕ ವಿಶ್ವವಿದ್ಯಾಲಯ ಲೋನಿರೆ, ರಾಯಘಡ ಜಿಲ್ಲೆ, ಮಹಾರಾಷ್ಟ್ರ
2. ಡಾ|| ಬಿ.ಆರ್. ಅಂಬೇಡ್ಕರ್ ಮರಾಠವಾಡಾ ವಿಶ್ವವಿದ್ಯಾಲಯ ಔರಂಗಾಬಾದ, ಮಹಾರಾಷ್ಟ್ರ.
3. ಡಾ|| ಬಿ.ಆರ್.ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯ, ಹೈದರಾಬಾದ, ಆಂಧ್ರ.
4. ಡಾ|| ಬಿ.ಆರ್.ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯ, ಅಹಮದಾಬಾದ, ಗುಜರಾತ್.
5. ಡಾ|| ಬಿ.ಆರ್.ಅಂಬೇಡ್ಕರ್ ಬಿಹಾರ ವಿಶ್ವವಿದ್ಯಾಲಯ, ಮುಸಾಪರಪುರ, ಬಿಹಾರ
6. ಡಾ|| ಬಿ.ಆರ್.ಅಂಬೇಡ್ಕರ ವಿಶ್ವವಿದ್ಯಾಲಯ, ಲಕ್ನೊ, ಉತ್ತರ ಪ್ರದೇಶ.

ಪರಿಸ್ಥಿತಿ ಹೀಗಿರುವಾಗ ಪುನಃ ಕರ್ನಾಟಕದಲ್ಲಿಯೂ ಡಾ|| ಅಂಬೇಡ್ಕರ್ ಹೆಸರು ಕೇಳುವುದು ದಲಿತಬಂಧುಗಳಿಗೆ ಅನ್ಯಾಯ ಎನ್ನಿಸದೆ? ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾದ ಗುಲಬರ್ಗಾ ವಿಭಾಗದ ವಿಶ್ವವಿದ್ಯಾಲಯಕ್ಕೂ, ಬಸವಣ್ಣನವರಂಥ ಮಹಾಪುರುಷರ ಹೆಸರಿಗೆ ಒಂದೇ ಒಂದು ಅವಕಾಶ ಕೊಡದೆ ಪಟ್ಟು ಹಿಡಿದು, ಅಲ್ಲಿಗೂ ಡಾ|| ಅಂಬೇಡ್ಕರರ ಹೆಸರೇ ಬೇಕು ಎನ್ನುವುದು ಅರ್ಥರಹಿತ ಮತ್ತು ಆಕ್ರಮಣಕಾರಿ ಮನೋಭಾವ ಎನ್ನಿಸುತ್ತದೆ. ಅಂಥ ಆಕ್ರಮಣಕಾರಿ ಮನೋಭಾವದವರನ್ನು ಪ್ರೋತ್ಸಾಹಿಸುತ್ತ, ಪೋಷಿಸುತ್ತ ಇರುವ ಸರ್ಕಾರಗಳಿಗೆ ಒಂದು ನೀತಿ ಸಂಹಿತೆ ಎಂಬುದು ಇದೆಯೆ? ಸಾತ್ವಿಕರೂ,

ಸುಸಂಸ್ಕೃತರೂ, ಸಮಷ್ಟಿ ಪ್ರೇಮಿಗಳೂ ಆದ ಸಜ್ಜನರ ನಡಾವಳಿಕೆಯನ್ನು ಹೇಡಿತನವೆಂದು, ಅನ್ಯಾಯವಿದ್ದರೂ ಅದಕ್ಕೆ ಪಟ್ಟು ಹಿಡಿದು ಹೋರಾಡುತ್ತ ತೋಳ್ಬಲ ಪ್ರದರ್ಶಿಸುತ್ತ, ಗೂಂಡಾಗಿರಿ ಮಾಡುವವರಿಗೆ ಅಂಜುವ ಸರಕಾರಗಳು ಯಾವ ತತ್ವ, ನೀತಿ, ಆದರ್ಶಗಳನ್ನು ಪಾಲಿಸುತ್ತಲಿವೆ? 6 ವಿಶ್ವವಿದ್ಯಾಲಯಗಳಿಗೆ ಹೆಸರನ್ನಿಡಿಸಿಕೊಂಡು, ಇನ್ನೂ ಒಂದು ಕರ್ನಾಟಕದಲ್ಲಿ ಬೇಕು, ಅದೂ ಬಸವಣ್ಣನವರ ಹೆಸರನ್ನು ಇಟ್ಟುಕೊಳ್ಳಲು ಸೂಕ್ತವಾದಲ್ಲಿಗೇ ಬೇಕು ಎಂಬುದು ಎಂಥವರಿಗೂ ಅನ್ಯಾಯವೆನಿಸುತ್ತದೆ. ಪ್ರತಿ ರಾಜ್ಯದ ವಿಶ್ವವಿದ್ಯಾಲಯಕ್ಕೂ ಡಾ|| ಅಂಬೇಡ್ಕರರ ಹೆಸರು ಬೇಕೇ ಬೇಕೆ? ಭಾರತದಲ್ಲಿ ಬೇರೆ ಯಾರೂ ಮಹಾತ್ಮರೂ, ಸುಧಾರಕರು ಆಗಿಹೋಗಿಲ್ಲವೆ? ಬ್ರಿಟಿಷರ ಒಡೆದು ಆಳುವ ನೀತಿಯನ್ನು ಅಳವಡಿಸಿಕೊಂಡಿರುವ ರಾಜಕಾರಣಿಗಳು ಬೇಕೆಂತಲೇ ವಿವಿಧ ಜನಾಂಗಗಳವರನ್ನು ಎತ್ತಿ ಕಟ್ಟುವುದನ್ನು ಮಾಡುತ್ತ, ತಮ್ಮ ಸ್ವಾರ್ಥದ ಬೇಳೆ ಬೇಯಿಸಿಕೊಳ್ಳುತ್ತಾರೆ. ಅಂದಾಗ ಕೂಡಿ ಬಾಳಬೇಕಾದ ಲಿಂಗಾಯತರು ದಲಿತರು ರಾಜಕೀಯ ವ್ಯಕ್ತಿಗಳ ತಂತ್ರಗಾರಿಕೆಯಲ್ಲಿ ದಾಳಗಳಾಗುವುದು ಸರಿಯೆ?

ಭಾರತ ದೇಶ ಅಸಂಖ್ಯಾತ ದಾರ್ಶನಿಕರನ್ನು, ರಾಷ್ಟ್ರವೀರರನ್ನು ಪಡೆದುಕೊಂಡಿರುವ ಹೆಮ್ಮೆಯ ನಾಡು. ಅವರ ಹೆಸರುಗಳನ್ನು ವಿಶ್ವವಿದ್ಯಾಲಯಗಳು, ನಗರಗಳು, ಸ್ಮಾರಕಗಳು ಮುಂತಾದವಕ್ಕಿಟ್ಟು ಕೃತಜ್ಞತೆ ಸಲ್ಲಿಸಬೇಕು ಮತ್ತು ಆಯಾ ರಾಜ್ಯಗಳಲ್ಲಿ ಆಗಿ ಹೋಗಿರುವ ಮಹಾಪುರುಷರನ್ನು ಗೌರವಿಸಬೇಕಾದುದು ಕರ್ತವ್ಯಕೂಡ. ಅಂದಾಗ 6 ವಿಶ್ವವಿದ್ಯಾಲಯಗಳಿಗೆ ಡಾ|| ಅಂಬೇಡ್ಕರರ ಹೆಸರು ಇಟ್ಟಾದ ಮೇಲೂ ಇನ್ನೂ ಅವರ ಹೆಸರನ್ನೇ ಗುಲಬರ್ಗಾ ವಿಶ್ವವಿದ್ಯಾಲಯಕ್ಕೂ ಇಡಬೇಕೆಂಬುದು ತಪ್ಪಲ್ಲವೆ?

ಹಿಂದೆ ಇದ್ದ ನಿಜಾಮ್ ರಾಜ್ಯ ಮೂರು ಭಾಗವಾಗಿ ಒಡೆಯಲ್ಪಟ್ಟು ಹಂಚಿ ಹೋಯಿತು. ಒಂದು ಭಾಗ ಆಂಧ್ರ ಪ್ರದೇಶದಲ್ಲಿ, ಇನ್ನೊಂದು ಭಾಗ ಮಹಾರಾಷ್ಟ್ರದಲ್ಲಿ, ಮತ್ತೊಂದು ಭಾಗ ಕರ್ನಾಟಕದಲ್ಲಿ. ಬಹಳ ಸ್ವಾರಸ್ಯಕರ ಸಂಗತಿ ಹೀಗಿದೆ. ಆಂಧ್ರ ಪ್ರದೇಶದ ಹೈದರಾಬಾದಿನಲ್ಲಿ ಡಾ|| ಅಂಬೇಡ್ಕರರ ಹೆಸರಿನಲ್ಲಿ ಮುಕ್ತವಿಶ್ವವಿದ್ಯಾಲಯ; ಮಹಾರಾಷ್ಟ್ರಕ್ಕೆ ಹೋದಭಾಗ ಮರಾಠವಾಡ ವಿಶ್ವವಿದ್ಯಾಲಯಕ್ಕೆ ಔರಂಗಾಬಾದಿನಲ್ಲಿರುವ ವಿಶ್ವವಿದ್ಯಾಲಯಕ್ಕೂ ಹೆಸರಾಗಿದೆ. ನಿಜಾಮ್ ರಾಜ್ಯದ ಇನ್ನೊಂದು ತುಂಡು ಹೈದರಾಬಾದ್ ಕರ್ನಾಟಕ ಇಲ್ಲಿಯ ವಿಶ್ವವಿದ್ಯಾಲಯಕ್ಕೂ ಡಾ||ಅಂಬೇಡ್ಕರರ ಹೆಸರಿಗಾಗಿ ಪಟ್ಟು. ಇದು ನ್ಯಾಯಯುತ ಬೇಡಿಕೆ, ನ್ಯಾಯಯುತ ಹೋರಾಟ ಎಂದು ವಿವೇಕ ಚಿಂತನಶಕ್ತಿ ಇದ್ದವರು ಯಾರು ಹೇಳಿಯಾರು?.

ಯಥಾ ಸ್ಥಿತಿವಾದ

ದಲಿತ ಸಂಘಟನೆಗಳಲ್ಲಿ ಕೆಲವು ಡಾ|| ಅಂಬೇಡ್ಕರರ ಹೆಸರಿಗಾಗಿ ಅನ್ಯಾಯದ ಹೋರಾಟಕ್ಕೆ ಕೈಹಾಕಿದ್ದರೆ ಇನ್ನು ಕೆಲವರು ಯಥಾ ಸ್ಥಿತಿವಾದ ಮಂಡಿಸಿ ಈಗಿರುವ ಹೆಸರುಗಳೇ ಇರಲಿ; ಬೇರೆ ಬೇರೆ ಹೆಸರಿಟ್ಟರೆ ಜಾತಿವಾದಕ್ಕೆ ಪುಷ್ಟಿ ಸಿಗುತ್ತದೆ ಎನ್ನುತ್ತಿದ್ದಾರೆ. ಇದೂ ಒಂದು

ಬಗೆಯ ಅನ್ಯಾಯವೆ! 6 ಸಲ ಊಟ ಮಾಡಿ ಹೊಟ್ಟೆ ತುಂಬಿರುವ ಮನುಷ್ಯನೋರ್ವ ಅನೇಕರು ಹಸಿದು ಊಟಕ್ಕೆ ಕುಳಿತಾಗ ನೀಡುವ ಯಜಮಾನನಿಗೆ, ''ಯಾರಿಗೂ ಊಟಕ್ಕೆ ಇಡಬೇಡಿ'' ಎಂದು ಹೇಳಿದಂತೆ ಇದೆ ಈ ವಿಚಾರ ಸರಣಿ. ಇಂಥ ಪ್ರಸಂಗ ವಿವರಿಸಲು ಒಂದು ದೃಷ್ಟಾಂತವಿದೆ. ಒಂದು ನದಿಯ ಆಚೆ ಕಬ್ಬಿನ ತೋಟವಿತ್ತು. ಒಂದು ನರಿಗೆ ಆ ಕಬ್ಬಿನ ತೋಟ ನೋಡಿ ಬಾಯಲ್ಲಿ ನೀರೂರಿತು. ಆದರೆ ನದಿ ದಾಟಲು ಬರುತ್ತಿರಲಿಲ್ಲ. ಒಂದು ಒಂಟೆಯನ್ನು ನೋಡಿ ಅದರ ಸಹಾಯ ಯಾಚಿಸಿತು. ಒಂಟೆ ತನ್ನ ಬೆನ್ನಿನ ಮೇಲೆ ನರಿಯನ್ನು ಕೂರಿಸಿಕೊಂಡು ನದಿಯನ್ನು ದಾಟಿತು. ನರಿಯು ಕಬ್ಬನ್ನು ಹೊಟ್ಟೆ ತುಂಬಾ ತಿಂದಿತು. ಅದರ ಚಿಕ್ಕ ಹೊಟ್ಟೆ ಬೇಗನೆ ತುಂಬಿತು. ಒಂಟೆ ಇನ್ನೂ ತಿನ್ನುತ್ತಿರುವಾಗಲೇ ಕುಚೇಷ್ಟೆ ಮಾಡಬೇಕು ಎನಿಸಿದ ನರಿ ಜೋರಾಗಿ ಒರಲ ತೊಡಗಿತು. ಗದ್ದೆಯ ಮಾಲಿಕರು ಬರುವಷ್ಟರಲ್ಲಿ ಓಡಿ ಹೋಗಿ ಪೊದೆಯಲ್ಲಿ ಅವಿತುಕೊಂಡಿತು. ಬೃಹತ್ ದೇಹಿಯಾದ ಒಂಟೆಯನ್ನು ಗಮನಿಸಿದ ಗದ್ದೆಯ ಮಾಲಿಕರು ಒಂಟೆಯನ್ನು ಚೆನ್ನಾಗಿ ಬಡಿದರು. ಅದು ಓಡಿ ತಪ್ಪಿಸಿಕೊಂಡಾಗ ನರಿ ಮೆಲ್ಲನೆ ಪೊದೆಯಿಂದ ಹೊರಬಂದಿತು. ''ಏನಪ್ಪಾ ಎಂಥಾ ಕೆಲಸ ಮಾಡಿದೆ?'' ಎಂದು ಒಂಟೆ ಕೇಳಿದಾಗ, ''ನಾನಾದರೂ ಏನು ಮಾಡಲಿ ? ಹೊಟ್ಟೆ ತುಂಬಿದ ನಂತರ ಜೋರಾಗಿ ಕೂಗುವುದು ನನ್ನ ಅಭ್ಯಾಸ'' ಎಂದಿತು. ಒಂಟೆಯು ಎಲ್ಲವನ್ನೂ ಮರೆತಂತೆ ಮಾಡಿ ಪುನಃ ನದಿ ದಾಟ ತೊಡಗಿತು. ಒಂದೆಡೆ ನೀರು ಆಳವಾಗಿ ಇತ್ತು, ಅಲ್ಲಿಗೆ ಬಂದಾಗ ಹೇಳಿತು. ''ನರಿಯಪ್ಪ ಊಟವಾದ ಮೇಲೆ ನದಿಯಲ್ಲಿ ಮುಳುಗು ಹಾಕುವುದು ನನ್ನ ರೂಢಿಗೊಂಡ ಅಭ್ಯಾಸ.'' ಎಂದಿತು. ನರಿಯು ಗಾಬರಿಯಾಗಿ, ''ನೀನು ಮುಳುಗಿದರೆ ನಾನು ನೀರು ಪಾಲಾಗುತ್ತೇನೆ.'' ಎಂದಿತು. ''ಹೌದು, ನಾನಾದರೂ ಏನು ಮಾಡಲಿ? ಊಟವಾದ ಮೇಲೆ ಇನ್ನೊಬ್ಬರಿಗೆ ತೊಂದರೆಯಾದರೂ ಚಿಂತೆಯಿಲ್ಲ ಕೂಗುವುದು ನಿನ್ನ ಅಭ್ಯಾಸವಾದಂತೆ ಊಟವಾದ ಮೇಲೆ ಮುಳುಗು ಹಾಕುವುದು ನನ್ನ ಅಭ್ಯಾಸ.'' ಎಂದು ಮುಳುಗಿತು. ನರಿಯೂ ನೀರಿನಲ್ಲಿ ಮುಳುಗಿತು. 6 ವಿಶ್ವವಿದ್ಯಾಲಯಗಳಿಗೆ ಡಾ|| ಅಂಬೇಡ್ಕರರ ಹೆಸರು ಪಡೆದು, ಈಗ ಯಥಾಸ್ಥಿತಿ ವಿಷಯ ಪ್ರತಿಪಾದಿಸುವ ದಲಿತ ಸಂಘಟನೆಯವರದು ನರಿಯ ವಾದದಂತೆ ಇದೆ.

ಇವರನ್ನು ಪುಷ್ಟೀಕರಿಸಿ ಇನ್ನೂ ಕೆಲವು ಪ್ರಗತಿಪರ ಸಂಘಟನೆಗಳವರೆಂದು ಹೇಳಿಕೊಳ್ಳುವ ಕೆಲವರು ಮಹಾಪುರುಷರ ಹೆಸರನ್ನು ಇಡುವುದು ಜಾತಿವಾದಕ್ಕೆ ಪುಷ್ಟಿಕೊಡುತ್ತದೆ, ಜಾತಿಜಾತಿಗಳ ಸಂಘರ್ಷಕ್ಕೆ ಕಾರಣವಾಗುತ್ತದೆ ಎಂದು ಬಡಬಡಿಸುತ್ತಿದ್ದಾರೆ. ಬಸವಣ್ಣನವರ ವಿಷಯಕ್ಕೆ ಬರುತ್ತಲೇ ಇಂಥ ಎಲ್ಲ ವಾದಗಳು ಇವರಿಗೆ ನೆನಪಾಗುತ್ತವೆ.

ಶೆಟ್ಟಿ ಎಂಬೆನೆ ಶಿರಿಯಾಳನ ?
ಮಡಿವಾಳನೆಂಬೆನೆ ಮಾಚಯ್ಯನ ?
ಡೋಹಾರನೆಂಬೆನೆ ಕಕ್ಕಯ್ಯನ ?
ಮಾದಾರನೆಂಬೆನೆ ಚನ್ನಯ್ಯನ ?

ಎಂದು ಬಸವಣ್ಣನವರು ಹೇಳುವಂತೆ, ಅವರನ್ನು ಲಿಂಗಾಯತ ಸಮಾಜಕ್ಕಾಗಲೀ, ಡಾ|| ಅಂಬೇಡ್ಕರರನ್ನು ದಲಿತ ಸಮಾಜಕ್ಕಾಗಲೀ ಸೀಮಿತಗೊಳಿಸಲು ಸಾಧ್ಯವಿಲ್ಲ. ಗುಲಬರ್ಗಾ ವಿ.ವಿ.ಗೆ ಅಂಬೇಡ್ಕರರ ಹೆಸರು ಬೇಡ, ಬಸವಣ್ಣನವರ ಹೆಸರು ಇರಲಿ ಎಂದು ನಾವು ಪ್ರತಿಪಾದಿಸುವುದರ ಉದ್ದೇಶ-

1. ಈಗಾಗಲೇ ಅಂಬೇಡ್ಕರರ ಹೆಸರಲ್ಲಿ 6 ವಿ.ವಿ ಗಳಿವೆ ಬಸವಣ್ಣನವರ ಹೆಸರಲ್ಲಿ ಒಂದೂ ಇಲ್ಲ.
2. ಅಂಬೇಡ್ಕರರು ಸಮಸ್ತ ಭಾರತೀಯರಿಗೆ ಪರಿಚಯದ ವ್ಯಾಪ್ತಿಯುಳ್ಳವರಾದ ಕಾರಣ ಅವರ ಹೆಸರನ್ನೂ ಎಲ್ಲಿ ಬೇಕಾದರೂ ಇಡಬಹುದು. ಆ ರೀತಿ ಇನ್ನೂ ಬಸವಣ್ಣನವರ ಹೆಸರು ಎಲ್ಲೆಡೆ ಪರಿಚಿತವಿಲ್ಲದ ಕಾರಣ ಅವರ ಜೀವನದೊಡನೆ ಬೆಸೆದುಕೊಂಡ ಗುಲಬರ್ಗಾ ವಿಭಾಗದಲ್ಲಿರುವ ವಿಶ್ವವಿದ್ಯಾಲಯಕ್ಕೆ ಇಡುವುದು ಸೂಕ್ತ.
3. ಭಾರತದ ಮೊಟ್ಟ ಮೊದಲ ವಿಚಾರವಾದಿ, ಸಮಾಜ ಸುಧಾರಕ ಬಸವಣ್ಣನವರ ಕಾರ್ಯಕ್ಷೇತ್ರ ಇದೇ ವಿಭಾಗವಾಗಿತ್ತು.

ಭಾರತದಲ್ಲಿ ಈವರೆಗೂ ವ್ಯಕ್ತಿಗಳ ಹೆಸರಿನಲ್ಲಿ ವಿಶ್ವವಿದ್ಯಾಲಯಗಳಾಗಿವೆ. ಕರ್ನಾಟಕದಲ್ಲಿ ಕುವೆಂಪು ವಿಶ್ವವಿದ್ಯಾಲಯ ಮತ್ತು ಇತ್ತೀಚೆಗೆ ಶ್ರೀ ರಾಜೀವ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ ಆಗಿವೆ. ಸದ್ದುಗದ್ದಲವಿಲ್ಲದೆ ಸಚಿವ ಸಂಪುಟದಲ್ಲಿ ಒಪ್ಪಿಗೆ ಪಡೆದು ಕುವೆಂಪುರವರ ಹೆಸರನ್ನು ಇಟ್ಟು ನಂತರ ಶಾಸನ ಸಭೆಯ ಅಂಗೀಕಾರ ಪಡೆಯಲಾಯಿತು. ಮೈಸೂರಿನಲ್ಲಿ ಆರಂಭವಾಗಲಿದ್ದ ವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಸಚಿವ ಸಂಪುಟದ ಸಭೆಯಲ್ಲಿ ದಿ|| ರಾಜೀವ ಗಾಂಧಿ ಹೆಸರನ್ನು ಘೋಷಿಸಲಾಯಿತು. ಕುವೆಂಪುರವರ ಬಗ್ಗೆ ನಮಗೆ ಗೌರವವಿದೆ. ಅವರು ನಮಗೆ ವಿದ್ಯಾರ್ಥಿ ದೆಸೆಯಲ್ಲಿ ಪ್ರೇರಕ ಶಕ್ತಿಯಾಗಿದ್ದರು. ನನ್ನ ಅಧ್ಯಾತ್ಮ ಜೀವನಕ್ಕೆ ಅವರ ಕೃತಿ 'ಮಹಾರಾತ್ರಿ' ಮುಖ್ಯ ಕಾರಣ ಮಾತ್ರವಲ್ಲ ಸ್ವತಃ ಕುವೆಂಪುರವರೇ ಬಸವಣ್ಣನವರನ್ನು ಮನವಾರೆ ಕೊಂಡಾಡಿದ್ದಾರೆ. ಅಂದಾಗ ಸರ್ಕಾರವು ಇಷ್ಟು ಮೀನ ಮೇಷ ಎಣಿಸಲು ದಿ|| ಕುವೆಂಪು, ದಿ|| ರಾಜೀವ ಗಾಂಧಿಗಿಂತಲೂ ಮಹಾಮಾನವತಾವಾದಿ, ಯುಗಪುರುಷ ಬಸವಣ್ಣನವರು ಕನಿಷ್ಠರೇ?.

''ಯಾರ ಹೆಸರೂ ಬೇಡ; ವಿಶ್ವವಿದ್ಯಾಲಯಗಳಿಗೆ ಈಗ ಇರುವಂತೆಯೇ ಇರಲಿ'' ಎಂಬ ಯಥಾಸ್ಥಿತಿವಾದಿಗಳು ನಿಜವಾಗಿಯೂ ಪ್ರಾಮಾಣಿಕರಾಗಿದ್ದರೆ, ಬಸವೇಶ್ವರರ ಹೆಸರು ಪ್ರಸ್ತಾಪವಾಗುತ್ತಲೇ ಈ ರೀತಿ ಅಡ್ಡಡ್ಡ ಮಾತನಾಡುವ ಬದಲು, ಈಗ ಕರ್ನಾಟಕದಲ್ಲಿ ಇಡಲಾಗಿರುವ ವ್ಯಕ್ತಿಗತ ಹೆಸರುಗಳನ್ನು, ಭಾರತದ ವಿವಿಧ ವಿಶ್ವವಿದ್ಯಾಲಯಗಳಿಗೆ ಇಟ್ಟಿರುವ ಬೇರೆ ಬೇರೆ ವ್ಯಕ್ತಿಗಳ ಹೆಸರುಗಳನ್ನು ತೆಗೆದು ಆಯಾ ಊರುಗಳ ಹೆಸರನ್ನಿಡಲು ಹೋರಾಟ

ಆರಂಭಮಾಡಲಿ; ನಾವೂ ಈಗಿಂದೀಗಲೇ ಆ ಹೋರಾಟದಲ್ಲಿ ಪಾಲ್ಗೊಳ್ಳುತ್ತೇವೆ. ಕೇವಲ ರಾಗ-ದ್ವೇಷಗಳಿಂದ ವರ್ತಿಸುವ ಇಂಥ ಪ್ರಗತಿಪರರ ಕಲುಷಿತಪೂರ್ಣ ಅಭಿಪ್ರಾಯಗಳಿಂದ ನಾವು ಪ್ರಭಾವಿತರಾಗಬೇಕಿಲ್ಲ ; ವಿಚಲಿತರೂ ಆಗಬೇಕಿಲ್ಲ.

ಡಾ॥ ಶಿವರಾಮ ಕಾರಂತರ ಅಭಿಪ್ರಾಯ

ಡಾ॥ ಶಿವರಾಮ ಕಾರಂತರೂ ಬಸವಣ್ಣನವರ ಹೆಸರಿಡುವ ಬಗ್ಗೆ ಪ್ರೋತ್ಸಾಹ ನೀಡಿಲ್ಲ; ಮಾತ್ರವಲ್ಲ ಬಸವ ದಳದ ಬಗ್ಗೆ ಕುಚೋದ್ಯದ ಮಾತನ್ನಾಡಿದ್ದಾರೆ, ಮತ್ತೆ ಕೆಲವರಿಗೆ (ಅಂದರೆ ನಮಗೆ, ಇನ್ನಿತರ ಹೋರಾಟಗಾರರಿಗೆ) ಏನೂ ಕೆಲಸವಿರದು; ಸುದ್ದಿಯಲ್ಲಿ ಇರಬಯಸುತ್ತಾರೆ ಅದಕ್ಕಾಗಿ ಚಳುವಳಿ ಮಾಡುತ್ತಾರೆ ಎಂದಿದ್ದಾರೆ. ಇದು ಶ್ರೀ ಶಿವರಾಮ ಕಾರಂತರ ಸಣ್ಣತನವನ್ನು ಪ್ರದರ್ಶಿಸುತ್ತದೆ. ಯಾವುದೇ ಜಾಗೃತಿ, ಸಂಘಟನೆ ಇಲ್ಲದೆ ನಿಸ್ಸತ್ವಗೊಂಡಿರುವ ಲಿಂಗಾಯತ ಸಮಾಜಕ್ಕೇ ಎಲ್ಲರೂ ಬುದ್ಧಿ ಹೇಳಬರುತ್ತಾರೆ; ಶಾಂತಿ ಪಾಠ ಕಲಿಸುತ್ತಾರೆ. ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಈ ಮಹಾ ಮೇಧಾವಿಗಳ ಪುಸ್ತಕಗಳನ್ನೋದಿ ನಾವು ಅವರುಗಳ ಬಗ್ಗೆ ತಿಳಿದುಕೊಂಡಿದ್ದು ಬಹಳ. ಆದರೆ ಸಾಮಾಜಿಕ ಪ್ರಜ್ಞೆ ಬಂದಾಗ ಇವರ ಅಂತರಂಗವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು. ನಾಸ್ತಿಕರಂತೆ, ವಿಚಾರವಾದಿಗಳಂತೆ ತೋರಿಬರುವ ಶಿವರಾಮ ಕಾರಂತರು ಪ್ರಾಮಾಣಿಕರಾಗಿದ್ದರೆ 800 ವರ್ಷಗಳ ಹಿಂದೆ ಮೂಢನಂಬಿಕೆ ಖಂಡಿಸಿ ಪ್ರಗತಿಪರ ಧರ್ಮವನ್ನು ಎತ್ತಿಹಿಡಿದ ಬಸವಾದಿ ಪ್ರಮಥರನ್ನು ಅವರ ಸಾಹಿತ್ಯವನ್ನು ಅಂತಃಕರಣಪೂರ್ವಕವಾಗಿ ಮೆಚ್ಚಿಕೊಳ್ಳಬೇಕಿತ್ತು. ಅಂಥ ಬೌದ್ಧಿಕ ಪ್ರಾಮಾಣಿಕತೆಯನ್ನು ಅವರು ಎಂದೂ ಎಲ್ಲೂ ಮೆರೆದಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ವಿಷ ತಿನ್ನಿಸುವಂತಿರುವ ಮಹಾಚೈತ್ರ ಪುಸ್ತಕದ ವಿಷಯದಲ್ಲೂ ಇವರು ನಮ್ಮ ಹೋರಾಟವನ್ನು ದೂಷಿಸಿದರು. ದೇವರ ನ್ಯಾಯಾಲಯ ಒಂದಿರುತ್ತದೆ. ಎಂಬ ನಂಬಿಕೆ ಡಾ॥ ಶಿವರಾಮ ಕಾರಂತರಿಗಿಲ್ಲ. ನಮಗೆ ಪಾಪ-ಪುಣ್ಯಗಳಲ್ಲಿ ನಂಬಿಕೆ ಇದೆ. ದೇವಲೀಲೆ ಎಂಬಂತೆ ಅವರ ಪಠ್ಯಕೃತಿ 'ಓದುವ ಆಟ' ರದ್ದಾಯಿತು.

ನ್ಯಾಯಪೂರ್ಣ ಬೇಡಿಕೆ ಎಂಬ ಬಗ್ಗೆ ಆತ್ಮ ವಿಶ್ವಾಸ

ಬಸವೇಶ್ವರರ ಹೆಸರನ್ನು ಗುಲಬರ್ಗಾ ವಿ.ವಿ.ಗೆ ಇಡಬೇಕೆಂಬ ನಮ್ಮ ಹೋರಾಟ ಕೇವಲ ಹೆಸರಿಗಾಗಿ ಎಂದು ತಿಳಿಯಬಾರದು. ಇದು ಹೋರಾಟ.

1. ಐತಿಹಾಸಿಕ ನ್ಯಾಯಕ್ಕಾಗಿ
2. ಸಾಮಾಜಿಕ ನ್ಯಾಯಕ್ಕಾಗಿ.

1. ಐತಿಹಾಸಿಕ ನ್ಯಾಯಕ್ಕಾಗಿ :- ಭಾರತದ ಮೊಟ್ಟ ಮೊದಲ ವಿಚಾರವಾದಿ, ಜಗತ್ತಿನ ಪ್ರಥಮ ಸಮತಾವಾದಿ, ಸ್ತ್ರೀ ವಿಮೋಚಕ ಬಸವಣ್ಣನವರು. ಡಾ॥ ಬಾಬಾ ಸಾಹೇಬ

ಅಂಬೇಡ್ಕರರವರಿಗಿಂತಲೂ ಮೊದಲೇ ಸಮಾನತೆ ಪ್ರತಿಪಾದಿಸಿದವರು. ಇವರಿಗೆ ಪ್ರಜಾಪ್ರಭುತ್ವದ ಬೆಂಬಲವಿದ್ದಿತು. 800 ವರ್ಷಗಳ ಹಿಂದೆ ದಲಿತೋದ್ಧಾರವನ್ನು ಪ್ರತಿಪಾದಿಸಿದ ಬಸವಣ್ಣನವರು ಪುರೋಹಿತಶಾಹಿ, ರಾಜಶಾಹಿಗಳೆರಡನ್ನೂ ಎದುರು ಹಾಕಿಕೊಂಡು ಸುಧಾರಣೆ ಕೈಕೊಳ್ಳಬೇಕಾಯಿತು. ಮಹಾತ್ಮಾಗಾಂಧಿ, ಇಂದಿರಾಗಾಂಧಿ, ಸಂಜಯಗಾಂಧಿ, ರಾಜೀವ ಗಾಂಧಿ ಮುಂತಾದವರ ಹೆಸರಿನಲ್ಲಿ ಸಾಕಷ್ಟು ವಿಶ್ವವಿದ್ಯಾಲಯಗಳಿದ್ದೂ, ಡಾ॥ ಅಂಬೇಡ್ಕರರ ಹೆಸರಿನಲ್ಲಿ 6 ಆಗಲೇ ಹೆಸರಿಸಲ್ಪಟ್ಟಿದ್ದಾಗ ಇವರೆಲ್ಲರೂ ಮಾಡಿದ ಮತ್ತು ಮಾಡಲಾಗದುದನ್ನು 800 ವರ್ಷಗಳ ಹಿಂದೆಯೇ ಮಾಡಿರುವ ಸಮತಾವಾದಿ, ದಲಿತೋದ್ಧಾರಿ ಬಸವಣ್ಣನವರ ಹೆಸರು, ಅವರ ಕಾರ್ಯಕ್ಷೇತ್ರವಾದ ಗುಲಬರ್ಗಾ ವಿಭಾಗಕ್ಕೂ ಬೇಡವೆ? ಆದ್ದರಿಂದ ಸೀನಿಯಾರಿಟಿ ಅರ್ಥಾತ್ ಕಾರ್ಯ ಹಿರಿತನದ ಐತಿಹಾಸಿಕ ದೃಷ್ಟಿಯಿಂದ ಬಸವಣ್ಣನವರ ಹೆಸರು ಅತ್ಯಗತ್ಯ.

2. ಸಾಮಾಜಿಕ ನ್ಯಾಯ:- ವಿಶ್ವವಿಭೂತಿ ಬಸವಣ್ಣನವರ ಧರ್ಮಾನುಯಾಯಿಗಳಾದ ಲಿಂಗಾಯತರು, ತತ್ವಾನುಯಾಯಿಗಳಾದ (ಲಿಂಗಧಾರಣೆ ಮಾಡಿಕೊಂಡಿರದಿದ್ದರೂ ಬಸವ ತತ್ವದಲ್ಲಿ ಶ್ರದ್ಧೆ ಇರುವ) ಬಸವಾಯತರಾದ ಲಿಂಗಾಯತೇತರರು, ಇವೆರಡೂ ಅಲ್ಲದಿದ್ದರೂ ಬಸವಣ್ಣನವರ ನಿಲುವು, ಸಾಧನೆ-ಸಂದೇಶಗಳ ಬಗ್ಗೆ ತುಂಬು ಗೌರವವುಳ್ಳ ಅಸಂಖ್ಯಾತರು ಒಕ್ಕೊರಲಿನಿಂದ ಈ ಬೇಡಿಕೆಯನ್ನು ಸಮರ್ಥಿಸುತ್ತಿದ್ದಾರೆ. ನಮ್ಮದು ನ್ಯಾಯಕ್ಕಾಗಿ, ನ್ಯಾಯೋಚಿತವಾದ ಹೋರಾಟ ಎಂದು ಪ್ರಾಮಾಣಿಕವಾಗಿ ನುಡಿಯುತ್ತಾರೆ. ಲಿಂಗಾಯತರನ್ನು ಒಂದು ರೀತಿಯಲ್ಲಿ ದ್ವೇಷಿಸುತ್ತಾ (ಅದಕ್ಕಾಗಿ ಸಮತಾವಾದಿ ಬಸವಣ್ಣನವರನ್ನು ದ್ವೇಷಿಸುತ್ತಿರುವ) ಇರುವ ರಾಜಕೀಯ ನೇತಾರರು ತಮಗೆ ಸಮದೃಷ್ಟಿ ಅತ್ಯಗತ್ಯ ಎಂದರಿಯುವುದು ಅವಶ್ಯವಿದೆ. ಹಿಂದೆ ರಾಜರು ತಾವು ಯಾವುದೇ ಧರ್ಮವನ್ನು ಅನುಸರಿಸುತ್ತಿದ್ದರೂ ಉಳಿದ ಧರ್ಮಗಳವರನ್ನು ಪ್ರೋತ್ಸಾಹಿಸುತ್ತಿದ್ದುದನ್ನು ನಮ್ಮ ದೇಶದ ಇತಿಹಾಸದಲ್ಲಿ ಕಾಣಬಹುದು. ಅಂದಾಗ ಪ್ರಜಾಪ್ರಭುತ್ವದಲ್ಲಿ ದ್ವೇಷ ಅಗತ್ಯವೆ? ಇಂದಿನ ಲಿಂಗಾಯತರೊಡನೆ ಈ ರಾಜಕೀಯ ನೇತಾರರ ಸಂಬಂಧವೇನೇ ಇರಲಿ ಅಂದಿನ ಬಸವಣ್ಣನವರ ಉದಾರ ಚಿಂತನೆ, ಸಮಭಾವ, ಮಾತೃಹೃದಯ ಇವರ ಕಲ್ಲೆದೆಗಳನ್ನು ಕರಗಿಸಬಾರದೆ? ಇವರಲ್ಲಿ ವಿವೇಕದ ಬೆಳಕನ್ನು ಮೂಡಿಸಬಾರದೆ? ಆದ್ದರಿಂದ ನಮ್ಮ ಹೋರಾಟ ಸಾಮಾಜಿಕ ನ್ಯಾಯ(Social Justice)ಕ್ಕಾಗಿ ಇದೆ ಎಂಬುದನ್ನು ಮನಗಾಣಬೇಕು. ಅಳದಿದ್ದರೆ ಎಷ್ಟೋ ಸಲ ತಾಯಿ ಸಹಿತ ಹಾಲುಣ್ಣಿಸುವುದನ್ನು ಮರೆಯಬಾರದು. ಅಲ್ಲದೆ ನಮ್ಮ ಸರಕಾರಗಳು ದಪ್ಪ ಚರ್ಮದವು, ಬಲು ಮೊಂಡು, ಕಣ್ಣು-ಕಿವಿ ಇಲ್ಲದವು, ಹೃದಯವಂತೂ ಮೊದಲೇ ಇರುವುದಿಲ್ಲ. ಗೂಂಡಾಗಿರಿ, ತೋಳ್ಬಲಕ್ಕೆ ಮಣಿಯುವಂಥ ಪ್ರವೃತ್ತಿ ದೇಶದಲ್ಲಿ ಬೆಳೆಯುತ್ತಿರುವ ಕಾಲದಲ್ಲಿ ಸತ್ಯಕ್ಕಾಗಿ, ನ್ಯಾಯಕ್ಕಾಗಿ, ನಾವು ಶಿಸ್ತು ಬದ್ಧವಾದ, ಸಾತ್ವಿಕ ಮತ್ತು ಸಂಘಟಿತ ಹೋರಾಟವನ್ನು ಮಾಡದಿದ್ದರೆ ಹೇಗೆ?

''ನಮ್ಮದು ನ್ಯಾಯಕ್ಕಾಗಿ, ನ್ಯಾಯಯುತವಾಗಿ ನಡೆದ ಹೋರಾಟ, ಎಂದಿದ್ದರೂ ಸತ್ಯಕ್ಕೆ, ನ್ಯಾಯಕ್ಕೆ ಜಯವು ಇದ್ದೇ ಇದೆ.'' ಎಂಬ ವಿಶ್ವಾಸ ದೃಢವಾಗಿ ಇದ್ದರೆ ನಮ್ಮ ಉತ್ಸಾಹ

ಕುಂದದು, ನಿಷ್ಠೆ ಕದಲದು. ತನು-ಮನ-ಧನ-ಅಭಿಮಾನ-ಸಮಯ-ಪ್ರಾಣ ಈ ಆರನ್ನೂ ನಮ್ಮಹೋರಾಟಕ್ಕಾಗಿ ಮೀಸಲಿಡೋಣ. ಯಾರೇ ಆಗಲಿ- ತೋಳ್ಬಲ ಪ್ರದರ್ಶಿಸುವವರು, ಬುದ್ಧಿ ಜೀವಿಗಳೆಂಬ ತಲೆಪಟ್ಟಿ ಕಟ್ಟಿಕೊಂಡು ಈ ನ್ಯಾಯಯುತ ಹೋರಾಟವನ್ನು ವಿರೋಧಿಸುವವರು, ಅಪಸ್ವರ ನುಡಿಯುವ ಮಠಾಧೀಶರು ಮುಂತಾದ ಯಾರ ಮಾತಿನಿಂದಲೂ ನಾವು ನಿರಾಶರೂ, ನಿರುತ್ಸಾಹಿತರೂ ಆಗಬೇಕಿಲ್ಲ.

ಕರಿ ಘನ ಅಂಕುಶ ಕಿರಿದೆನ್ನಬಹುದೆ ? ಬಾರದಯ್ಯ
ಗಿರಿ ಘನ ವಜ್ರ ಕಿರಿದೆನ್ನಬಹುದೆ ? ಬಾರದಯ್ಯ
ತಮಂಧ ಘನ ಜ್ಯೋತಿ ಕಿರಿದೆನ್ನಬಹುದೆ ? ಬಾರದಯ್ಯ
ಮರಹು ಘನ ನಿಮ್ಮ ನೆನೆವ ಮನ ಕಿರಿದೆನ್ನಬಹುದೆ ? ಬಾರದಯ್ಯ
ಕೂಡಲಸಂಗಮದೇವಾ

ಎಂಬ ವಚನಾದೇಶದಂತೆ ಬೆಟ್ಟದಂತಹ ಸಮಸ್ಯೆಯನ್ನು ನಮ್ಮ ನಿಷ್ಠೆಯೆಂಬ ವಜ್ರಾಯುಧದಿಂದ ಛೇದಿಸಬಹುದು. ಬಾಡಿಗೆ ಬಂಟರನ್ನು ತುಂಬಿಕೊಂಡು ಜನಬಲ ಪ್ರದರ್ಶಿಸುವುದಕ್ಕಿಂತಲೂ ಸ್ವಯಂ ಸ್ಫೂರ್ತಿಯಿಂದ, ಶ್ರದ್ಧಾ-ಭಕ್ತಿಗಳಿಂದ ಮುನ್ನಡೆಯುವ ಸಾತ್ವಿಕ ಶರಣರ ಹೋರಾಟವೇ ಪರಿಣಾಮಕಾರಿ. ಯಾರು ಎಷ್ಟೇ ನಿಷ್ಠೆ ಕದಲಿಸಲು ನೋಡಿದರೂ ನಮ್ಮ ನಿಷ್ಠೆ ದುರ್ಬಲಗೊಳ್ಳಬಾರದು. ಆಳಿಮನದ ಭಕ್ತಿಯನ್ನು ಧರ್ಮಪಿತ ಬಸವಣ್ಣನವರು ಇಷ್ಟಪಡರು.

ಒಮ್ಮೆ ಓರ್ವ ಮುಗ್ಧ ಹಳ್ಳಿಗ ಸಂತೆಗೆ ಹೋಗಿ ಒಂದು ಹೋರಿ ಕರುವನ್ನು ಕೊಂಡ. ಅದನ್ನು ಸಾಕಿ ಬೆಳೆಸಿ ಒಕ್ಕಲುತನಕ್ಕೆ ಉಪಯೋಗ ಮಾಡಿಕೊಳ್ಳಬೇಕೆಂಬ ಹಂಬಲ ಅವನದಿತ್ತು. ಅದನ್ನು ಹೊತ್ತು ತರುತ್ತಿರುವಾಗ ಕಾಡಿನೊಳಗೆ ಹಾದು ಹೋಗಬೇಕಾಯಿತು. ಆಗ ಓರ್ವ ವ್ಯಕ್ತಿ ಬೆರಗುಗಣ್ಣಿನಿಂದ ನೋಡುತ್ತ "ಏನಯ್ಯ ಕತ್ತೆಯನ್ನು ಹೊತ್ತುಕೊಂಡು ಹೋಗುತ್ತಿರುವೆ?" ಎಂದ. ಇವನಿಗೆ ಗಾಬರಿಯಾಯಿತು. ಆದರೂ ಧೈರ್ಯ ತಂದುಕೊಂಡು ಹೇಳಿದ, "ಹಣಕೊಟ್ಟು ಹೋರಿ ಕರುವನ್ನು ಕೊಂಡುಕೊಂಡಿದ್ದೇನೆ." "ಆಗಲಿ ಬಿಡಪ್ಪ, ಇದ್ದುದು ಇದ್ದಂತೆ ಹೇಳಿದರೆ ಸಿದ್ಧಪ್ಪನಿಗೆ ಸಿಡಿಲು ಬಡೀತಂತೆ" ಎಂದು ನಕ್ಕು ಹೊರಟು ಹೋದ. ಇನ್ನಷ್ಟು ಮುಂದೆ ಸಾಗುವಷ್ಟರಲ್ಲಿ ಇನ್ನೋರ್ವ ಭೇಟಿಯಾದ, ಅವನು ಬೆರಗಿನಿಂದ ನೋಡಿ ಪಕಪಕನೆ ನಗಲಾರಂಭಿಸಿದ. ಇವನು ಗಾಬರಿಗೊಂಡು ನಿಂತಾಗ ಅಂದ, 'ಯಾರಾದರೂ ಇಷ್ಟು ಕೊಳಕಾದ ಹಂದಿಯನ್ನು ಹೊತ್ತುಕೊಂಡು ಹೋಗುವರೆ?' ಎಂದ. ಆಗ ಈ ಹಳ್ಳಿಗನ ಕೈಕಾಲು ನಡುಗಲು ಆರಂಭಿಸಿದವು. ಆದರೂ ಧೈರ್ಯ ತಂದುಕೊಂಡು ಹೇಳಿದ, "ನೀ ಸುಮ್ನೆ ಹೋಗಯ್ಯಾ, ನಾನು ಹಣಕೊಟ್ಟು ಹೋರಿಕರು ತಂದಿದ್ದೇನೆ." "ಸರಿ ಬಿಡಪ್ಪಾ, ಕಂಡದ್ದು ಕಂಡಂಗೆ ನುಡಿದರೆ ಕೆಂಡದಂತಹ ಕೋಪ ಏಕೆ?" ಎಂದು ಸಂಶಯಾಸ್ಪದವಾಗಿ ನಗುತ್ತಾ ಹೊರಟು ಹೋದ, ಹಳ್ಳಿಗನಿಗೆ ಎದೆ ನಡುಕ ಪ್ರಾರಂಭವಾಯಿತು. ಬೇಗನೇ

ಕಾಡುದಾಟಬೇಕೆಂದು ಅವಸರಿಸುವಾಗ ಇನ್ನೋರ್ವ ಎದುರಾದ. ಆತ ಭಯಗ್ರಸ್ತನಾಗಿ ನೋಡಿ, "ನಿನ್ನದು ಎಂಥಾ ಕೆಟ್ಟ ಕರ್ಮವಯ್ಯಾ? ಭೂತವೊಂದನ್ನು ಹೊತ್ತು ಒಯ್ಯುತ್ತಿರುವೆ. ಇದು ನಿನ್ನನ್ನು ಸುಮ್ಮನೆ ಬಿಟ್ಟೀತಾ?" ಎಂದ. ಇವನು ಗಡಗಡ ನಡುಗುತ್ತ, 'ಓಹೋ ಇದು ನಿಜವಾಗಿಯೂ ಭೂತವೇ ಇರಬೇಕು! ಅದಕ್ಕೆ ಮೊದಲನೆಯವನ ಕಣ್ಣಿಗೆ ಕತ್ತೆಯಾಗಿ, ಎರಡನೆಯವನ ಕಣ್ಣಿಗೆ ಹಂದಿಯಾಗಿ ಕಂಡು ಈಗ ತನ್ನ ನಿಜಸ್ವರೂಪ ತೋರಿಸಿಕೊಂಡಿದೆ ಎಂದು ಭಯಭೀತನಾಗಿ ಅದನ್ನು ಕೆಳಗೆ ಹಾಕಿ, ಓಡಿಬಿಟ್ಟ. ಹಿಂದಕ್ಕೂ ತಿರುಗಿ ನೋಡಲಿಲ್ಲ ಆಗ ಆಗಂತುಕ ಆ ಕರುವನ್ನು ಹಿಡಿದುಕೊಂಡ , ಅವನೊಡನೆ ಇನ್ನಿಬ್ಬರು ಠಕ್ಕರೂ ಬಂದು ಸೇರಿದರು. ಮೂವರೂ ಸೇರಿ ಆ ಕರುವನ್ನು ಕೊಂದುತಿಂದರು.

ಸಂತೆಯಲ್ಲಿ ಹಣಕೊಟ್ಟು ಕೊಂಡ ಮನುಷ್ಯ ಆ ಬಗ್ಗೆ ದೃಢ ನಂಬಿಕೆಯಿಂದ ಮುಂದೆ ಸಾಗಿದ್ದರೆ ಅದರ ಬಲಿಯಾಗುತ್ತಿರಲಿಲ್ಲ. ಇದೇ ರೀತಿ ಸತ್ಯವನ್ನು ನ್ಯಾಯವನ್ನು ಹೊತ್ತು ನಡೆಯುವವನು ಗುರಿಯ ಕಡೆಗೆ ಸಾಗಬೇಕು. ಮಾರ್ಗಮಧ್ಯದಲ್ಲಿ ಯಾರು ಏನೇ ಅಪನಂಬಿಕೆ, ನಿರಾಶೆ ಹುಟ್ಟಿಸಿದರೂ ವಿಚಲಿತನಾಗಬಾರದು.

ಬಸವೇಶ್ವರರ ಹೆಸರನ್ನು ಗುಲ್ಬರ್ಗಾ ವಿ.ವಿಗೆ ಇಡುವ ವಿಷಯದಲ್ಲಿ ಹೆಜ್ಜೆಯಿಡಲು ಆರಂಭಿಸಿದಂತೆ ಎಷ್ಟೋ ಜನರು ಬಂದರು, ಕೆಲಕಾಲ ಜೊತೆಗೂಡಿದಂತೆ ಮಾಡಿದರು; ಅದರಿಂದ ಪ್ರಯೋಜನವಾದಂತೆ ತೊಂದರೆಯೂ ಆಯಿತು. ವಿನಾಕಾರಣ ನಮ್ಮ ಚಳುವಳಿಯಲ್ಲಿ ಕೆಲವರು ರಾಜಕೀಯ ವಾಸನೆ ಹುಡುಕ ಹೊರಟರು. 13-1-1996ರಂದು ಕೂಡಲ ಸಂಗಮದಲ್ಲಿ ನಾನು ಹೇಳಿದ್ದ, "ಆತ್ಮ ವಿಶ್ವಾಸ ಇದ್ದರೆ ಈ ದಿಶೆಯಲ್ಲಿ ಕೈಹಾಕಿರಿ; ಇನ್ನಾರ ಮೇಲೋ ವಿಶ್ವಾಸವಿಟ್ಟು ಅಲ್ಲ. ಯಾರೇ ಪಾಲ್ಗೊಳ್ಳಲಿ ಬಿಡಲಿ, ನೀವು (ರಾಷ್ಟ್ರೀಯ ಬಸವ ದಳದವರು) ಗುರಿ ಮುಟ್ಟುವವರೆಗೆ ಕಾರ್ಯಮಾಡುವುದಾದರೆ ಮಾತ್ರ ಈ ಚಳುವಳಿಗೆ ಪ್ರಯತ್ನಿಸಿರಿ" ಎಂದಿದ್ದೆ.

ಅದರಂತೆ ನಾವೀಗ ಗುರಿ ಮುಟ್ಟುವವರೆಗೆ ಪ್ರಯತ್ನ ಮಾಡಲೇಬೇಕು. ಇದೊಂದು ಪವಿತ್ರವಾದ ಗುರುಸೇವೆ! ಶ್ರೀ ಗುರು ಬಸವಣ್ಣನವರು ನಮ್ಮಿಂದ ಯಾವ ಬಗೆಯ ತ್ಯಾಗವನ್ನು ನಿರೀಕ್ಷಿಸುವರೋ ನೋಡೋಣ. ಬಸವ ಜಯಂತಿಗೆ ಮಾಜಿ ಮುಖ್ಯಮಂತ್ರಿ ದಿ|| ಶ್ರೀ ಗುಂಡೂರಾವ ಅವರು ಸಾರ್ವತ್ರಿಕ ಸರ್ಕಾರಿ ರಜೆ ಕೊಟ್ಟು ಕೀರ್ತಿಶಾಲಿಯಾದಂತೆ, ನಾರಾಯಣಪುರ ಜಲಾಶಯಕ್ಕೆ, ಬಸವ ಸಾಗರ ಎಂದು ಹೆಸರಿಟ್ಟು ಮಾಜಿ ಮುಖ್ಯಮಂತ್ರಿ ಶ್ರೀರಾಮಕೃಷ್ಣ ಹೆಗಡೆಯವರು ಕೀರ್ತಿಶಾಲಿಯಾದಂತೆ, ಗುಲ್ಬರ್ಗಾ ವಿ.ವಿಗೆ ಬಸವೇಶ್ವರರ ಹೆಸರಿಟ್ಟು ಕೀರ್ತಿಶಾಲಿಗಳಾಗುವ ಅದೃಷ್ಟ ಯಾರದಾಗುವುದೋ ನೋಡೋಣ. ಅಲ್ಲಿಯವರೆಗೆ ನಮ್ಮ ನ್ಯಾಯಯುತ ಹೋರಾಟ ನಿಲ್ಲದು, ನಿಲ್ಲಬಾರದು.

-ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ

ಬಸವೇಶ್ವರರ ಹೆಸರಿಗೆ ವಿರೋಧ ಸಲ್ಲ.

--ಶ್ರೀ ಟಿ.ಕೆ. ಮಹಮೂದ, ಸಿದ್ಧಾಪುರ

ಮಾನ್ಯರೇ,

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರಿಡಲು ಕೆಲ ವಿದ್ಯಮಾನಗಳು ತೊಡಕಾಗುವಂತೆ ತೋರುತ್ತದೆ. ಡಾ|| ಬಾಬಾಸಾಹೇಬ ಅಂಬೇಡ್ಕರ ಅವರು ಈಗ ಬದುಕಿದ್ದರೆ ಈ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರನ್ನು ಖಂಡಿತವಾಗಿ ಸಮರ್ಥಿಸುತ್ತಿದ್ದರು ಎಂದು ನನ್ನ ಅನಿಸಿಕೆ.

ಗುಲಬರ್ಗಾದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ಬಸವಣ್ಣನವರ ಹೆಸರನ್ನು ಅಲ್ಲಿಯ ವಿಶ್ವವಿದ್ಯಾಲಯಕ್ಕೆ ಇಡಬೇಕು ಎಂದು ನಾನೊಂದು ನಿರ್ಣಯ ಕಳುಹಿಸಿದ್ದೆ. ಹುಬ್ಬಳ್ಳಿಯಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅದೇ ನಿರ್ಣಯವನ್ನು ನಾನು ಮಂಡಿಸಿದ್ದೆ.

ದಲಿತ ಸಂಘಟನೆಗಳು ಡಾ|| ಬಾಬಾಸಾಹೇಬರ ಹೆಸರಿನ ಬಗ್ಗೆ ಒತ್ತಾಯಿಸುವುದನ್ನು ನಾನು ಖಂಡಿತಾ ವಿರೋಧಿಸುವುದಿಲ್ಲ. ಬಾಬಾ ಸಾಹೇಬರ ಹೆಸರನ್ನು ಮರಾಠವಾಡಾ ಮಾತ್ರವಲ್ಲದೆ ದೇಶದ ಎಲ್ಲಾ ರಾಜ್ಯಗಳ ಒಂದೊಂದು ವಿಶ್ವವಿದ್ಯಾಲಯಕ್ಕೆ ಇರಿಸುವುದು ಹೆಚ್ಚು ಸೂಕ್ತ, ಅದಕ್ಕೆ ಚಾಲನೆಯೂ ದೊರಕಬಹುದು. ಆದರೆ ಬಸವಣ್ಣನವರ ಹೆಸರಿನ ಬಗ್ಗೆ ಕರ್ನಾಟಕದ ಹೊರತಾಗಿ ಇತರ ರಾಜ್ಯಗಳಲ್ಲಿ ಅಷ್ಟು ಬಲ ದೊರೆತೀತೆಂದು ನಿರೀಕ್ಷಿಸುವುದು ಆಗುವುದಿಲ್ಲ. ಬಸವಣ್ಣನವರು ಬಾಬಾಸಾಹೇಬರ ಕಾಲದಲ್ಲಿ ಬದುಕಿದ್ದರೆ ಅವರ ವಿಚಾರಸರಣಿ ದಲಿತರ ಬಗ್ಗೆ ಇನ್ನಷ್ಟು ಪ್ರಖರವಾಗುತ್ತಿದ್ದಿತು.

ದಲಿತರ ಮೇಲಿದ್ದ ಹಲವು ಧಾರ್ಮಿಕ ನಿಷೇಧಗಳನ್ನು ವಿರೋಧಿಸಿ ಅವರನ್ನು ತಮ್ಮ ಸರಿಸಮಾನರಾಗಿ ಗುರುತಿಸಿದ ಮಹಾನುಭಾವರು-ಬಸವಣ್ಣ. ಅವರು ಕರ್ನಾಟಕಕ್ಕೆ ಸೀಮಿತವಾಗಿರದೆ ಸಮಸ್ತ ಮಾನವಾಳಿಯನ್ನು ಪ್ರತಿನಿಧಿಸಿರುವ ಮಹಾನುಭಾವ. ಗುಲಬರ್ಗಾ ಪ್ರದೇಶ ಆತನ ಕರ್ಮಭೂಮಿ, ಆ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರನ್ನೇ ಇಡುವಂತೆ ಒತ್ತಾಯಿಸಿ ದಲಿತ ಸಂಘಟನೆಗಳು ತಮ್ಮ ದೊಡ್ಡಸ್ತಿಕೆ ಪ್ರದರ್ಶಿಸಿದರೆ ಸಮಸ್ಯೆ ಜಟಿಲಗೊಳ್ಳದಿರುವಂತಾಗುತ್ತದೆ. ಬಾಬಾ ಸಾಹೇಬರಂತೆ ದೀನ-ದಲಿತರ ಮತ್ತು ಉಪೇಕ್ಷಿತರ ದನಿಯಾಗಿದ್ದವರು ಬಸವೇಶ್ವರರು. ಒಂದೇ ಮಾತಿನಲ್ಲಿ ಹೇಳಬಹುದಾದರೆ ಭಾರತದಲ್ಲಿ ಜನಿಸಿದ ಎಲ್ಲ ಧಾರ್ಮಿಕ ಮಹಾಪುರುಷರ ಶ್ರೇಣಿಯಲ್ಲಿ ಬಸವೇಶ್ವರ ಜಾಗತಿಕ ವ್ಯಾಪ್ತಿಗೆ ಒಳಪಡಬಹುದಾದ ಚಿಂತಕರಾಗಿದ್ದರು.

ಜಾತಿ, ಮತ, ಕುಲವೆಣಿಸದೆ ಬಸವೇಶ್ವರರನ್ನು ಗುರುತಿಸುವಲ್ಲಿ ಮಾನವೀಯತೆಯ ದೃಷ್ಟಿ ಮುಖ್ಯವಾಗಬೇಕು. ಬಸವಣ್ಣನವರಿಗೆ ಒಂದು ಜಾತಿಯನ್ನು ಆರೋಪಿಸುವುದು ತಪ್ಪು. ವರ್ಣ, ವರ್ಗ, ಜಾತಿಗಳ ವಿರುದ್ಧ ಬಂಡೆದ್ದು ಹುತಾತ್ಮರಾದ ಬಸವಣ್ಣನವರನ್ನು ಒಂದು

33 ನೇ ಪುಟಕ ಮುಂದುವರದಿದೆ--

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

ದುರುದ್ದೇಶದ ದುರಾಶಯ ಭಾಷಣ

—ಎ. ಜಿ. ವಿರೂಪಾಕ್ಷಪ್ಪ

[ಚಿಕ್ಕಮಗಳೂರಿನಲ್ಲಿ ಏ. 12 ರಿಂದ 14 ರವರೆಗೆ ಜರುಗಿದ ನಾಲ್ಕನೆಯ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಡಾ|| ಎಂ. ಚಿದಾನಂದ ಮೂರ್ತಿಯವರು ಮಾಡಿದ ಆಶಯ ಭಾಷಣಕ್ಕೆ ಎ. ಜಿ. ವಿರೂಪಾಕ್ಷಪ್ಪ-ಅಂಕಣಕಾರರು, "ಜನತಾವಾಣಿ" ಕನ್ನಡ ದೈನಿಕ-ದಾವಣಗೆರೆ ಇವರು ವ್ಯಕ್ತಪಡಿಸಿದ "ಪ್ರತಿಕ್ರಿಯೆ"]

1996 ನೇ ಏಪ್ರಿಲ್ 12 ರಿಂದ 14 ರವರೆಗೆ ಚಿಕ್ಕಮಗಳೂರಿನಲ್ಲಿ ಜರುಗಿದ ನಾಲ್ಕನೆಯ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಡಾ|| ಎಂ. ಚಿದಾನಂದ ಮೂರ್ತಿಯವರು ಮಾಡಿದ ಆಶಯ ಭಾಷಣವು ಅನೇಕ ಅಸಂಬದ್ಧ ಅಪಾರ್ಥ ಮತ್ತು ವಿಪರೀತಾರ್ಥಗಳಿಂದ ಕೂಡಿದ ದುರುದ್ದೇಶದ ದುರಾಶಯ ಭಾಷಣವಾಗಿದೆ. ಯಾವುದೇ ಸಭೆ, ಸಮ್ಮೇಳನ, ಅಥವಾ ಪರಿಷತ್ತು-ಗಳಲ್ಲಿ ಮಾಡುವ ಆಶಯ ಭಾಷಣ, ಅಧ್ಯಕ್ಷ ಭಾಷಣ ಅಥವಾ ಪ್ರಾಸ್ತಾವಿಕ ಭಾಷಣಗಳು ಆಯಾ ವೇದಿಕೆಗಳ ಪ್ರಾಯೋಜಕ ಸಂಘ-ಸಂಸ್ಥೆಗಳ ಮೂಲಭೂತ ಧ್ಯೇಯೋದ್ದೇಶಗಳು, ಕಾರ್ಯಾಚರಣೆಗಳ ಚೌಕಟ್ಟು ಮತ್ತು ಪ್ರಸ್ತುತ ಸಂದರ್ಭ ಸನ್ನಿವೇಶಗಳಿಗೆ ಅನುಗುಣವಾಗಿರಬೇಕಾಗುತ್ತದೆ. ಡಾ|| ಮೂರ್ತಿಯವರ ಮೂವತ್ತು ನಾಲ್ಕು ಪುಟಗಳ ಮುದ್ರಿತ ಭಾಷಣದ ಪ್ರತಿ ಪುಟದಲ್ಲೂ ಶರಣ ಸಾಹಿತ್ಯ, ಶರಣರ ಜೀವಿತದ ಪವಿತ್ರೋದ್ದೇಶಗಳು ಮತ್ತು ಅವರು ಜೀವ-ದೇವ-ಜಗತ್ತುಗಳನ್ನು ಕುರಿತಾಗಿ ನಡೆಸಿದ ಚಿಂತನ-ದರ್ಶನಗಳ ಬಗ್ಗೆ ಡಾ|| ಮೂರ್ತಿಯವರಿಗೆ ಇರುವ ಅಧ್ಯಯನ-ಅನುಭವಗಳ ಕೊರತೆಯನ್ನೂ ಆ ಮಹಾನುಭಾವರ ಬಗ್ಗೆ ಇಟ್ಟುಕೊಂಡಿರುವ ಕುತ್ಸಿತ-ತಾತ್ಸಾರ ಭಾವಗಳನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಕೆಲವೆಡೆಯಲ್ಲಿ ಅವರು ಸಮ್ಮೇಳನದ ವೇದಿಕೆಯನ್ನು ಮತ್ತು ಅಧ್ಯಕ್ಷ ಸ್ಥಾನದ ಅವಕಾಶವನ್ನು ತಮ್ಮ ವೈಯಕ್ತಿಕ ತೀಟೆ-ತೆವಲುಗಳನ್ನು ತೀರಿಸಿಕೊಳ್ಳಲು ದುರುಪಯೋಗ ಮಾಡಿಕೊಂಡಿದ್ದಾರೆ. ಹೀಗಾಗಿ ತಾವೇ ಹೇಳಿರುವಂತೆ "ಅರ್ಹತೆಗೆ ಮೀರಿರುವ ಗೌರವ ಸ್ಥಾನ" ನೀಡಿದ್ದಕ್ಕಾಗಿ ಪರಿಷತ್ತಿನ ಪದಾಧಿಕಾರಿಗಳು ಮತ್ತು ವ್ಯವಸ್ಥಾಪಕರು ಪಶ್ಚಾತ್ತಾಪದಿಂದ ಪರಿತಪಿಸಬೇಕಾಗಿ ಬಂದಿದೆ.

ಶರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರು, ಸಂಸ್ಥಾಪಕ ಅಧ್ಯಕ್ಷರು ಹಾಗೂ ಹಿಂದಿನ ಅಧ್ಯಕ್ಷರುಗಳ ಸ್ಮರಣೆ ಮಾಡುವಾಗ ಇಂದು ನಮ್ಮ ಮಧ್ಯೆ ಇಲ್ಲದಿರುವ ಪುಣ್ಯಜೀವಿಗಳನ್ನು "ಲಿಂಗೈಕ್ಯ" ರೆಂದು ಕರೆಯದೆ "ದಿವಂಗತ-(ದಿ)" ಎಂದು ಸಂಬೋಧಿಸಿರುವುದು ಡಾ॥ ಮೂರ್ತಿಯವರಿಗೆ ಶರಣ ಸಾಹಿತ್ಯ-ಸಂಸ್ಕೃತಿಗಳ, ಪಾರಿಭಾಷಿಕ ಭಾಷೆ-ಪದಗಳ ಪ್ರಯೋಗಗಳ ಬಗ್ಗೆ ಇರುವ ಪರಿಜ್ಞಾನದ ಕೊರತೆಯನ್ನು ಎತ್ತಿ ತೋರಿಸುತ್ತದೆ.

ಇಂತಹ ಅಪ ಪ್ರಯೋಗಗಳನ್ನು ಅವರ ಭಾಷಣದ ಉದ್ದಕ್ಕೂ ಕಾಣಬಹುದು. "ಶಿವಗಣ ಪ್ರಸಾದಿ" ಎನಿಸಿದ ಮಹದೇವಯ್ಯನವರನ್ನು ಕುರಿತು ಹೇಳುವಾಗ ಅವರು ಶರಣರು "ತಿಂದು ಬಿಟ್ಟ ಆಹಾರ" ವನ್ನು ಸ್ವೀಕರಿಸುತ್ತಿದ್ದರೆಂದು ಹೇಳಿದ್ದಾರೆ. ಆದರೆ ಶರಣರಾದವರು ಸೇವಿಸುವುದು "ಪ್ರಸಾದ" ವೇ ವಿನಾ ಅದು ಆಹಾರವಲ್ಲ. ಅವರು ತಟ್ಟೆಯಲ್ಲಿ ಏನನ್ನೂ ಉಳಿಸುವುದೇ ಇಲ್ಲ. ಇದು ಪ್ರಸಾದ ತತ್ವ. ತಟ್ಟೆಯಲ್ಲಿ ಒಂದಿಷ್ಟು ಉಳಿಸಿ ತಮ್ಮ ಹೆಂಗಸರಿಗೋ, ಮಕ್ಕಳಿಗೋ ಉಣ್ಣಬಿಡುವುದು ವೈದಿಕ ಜನರ "ಉಚ್ಛಿಷ್ಟ ಭೋಜನ" ಸಂಸ್ಕೃತಿ.

ಆಯ್ದಕ್ಕಿ ಮಾರಯ್ಯನು ಆರಿಸಿ ತರುತ್ತಿದ್ದುದು ಆಕಸ್ಮಿಕವಾಗಿ ಸೋರಿದ-ಉದುರಿದ ಅಕ್ಕಿ ಕಾಳುಗಳನ್ನೇ ವಿನಾ ಶರಣರು ಚೆಲ್ಲಿ ಸೂರಾಡಿದ ಅಕ್ಕಿಕಾಳನ್ನಲ್ಲ. ಪದಾರ್ಥಗಳನ್ನು ಪ್ರಸಾದೀಕರಿಸಿಕೊಂಡು ಸೇವಿಸುವ ಶರಣರು ಅಕ್ಕಿ-ಬೇಳೆಗಳನ್ನು ಉದಾಸೀನದಿಂದಾಗಲಿ, ಅಹಂಕಾರದಿಂದಾಗಲೀ "ಚೆಲ್ಲಿ ಸೂರಾಡುವ" ಸಂಭವ ಸಾಧ್ಯವೇ ಇಲ್ಲ. ಆಕಸ್ಮಿಕವಾಗಿ ಸೋರಿ ಉದುರಿದ ಧಾನ್ಯಗಳೂ ವ್ಯರ್ಥವಾಗಬಾರದು ಎಂಬ ಉದ್ದೇಶದಿಂದ ಪ್ರತಿ ಬಿಡಿಗಾಳನ್ನು ಆರಿಸಿ ತಂದು, ತನಗೂ ಹಾಗೂ ಗುರು-ಲಿಂಗ-ಜಂಗಮ ದಾಸೋಹಕ್ಕೆ ವಿನಿಯೋಗಿಸುತ್ತಿದ್ದ ಮಾರಯ್ಯನವರ ಕಾಯಕ ಪ್ರಸಾದ ಮತ್ತು ದಾಸೋಹಗಳ ಪವಿತ್ರ ತತ್ವಾದರ್ಶಗಳಿಗೆ ಪರಮೋತ್ಕೃಷ್ಟ ಉದಾಹರಣೆ ಎಂಬುದನ್ನು ಡಾ॥ ಮೂರ್ತಿಯವರು ಅರಿಯಬೇಕು.

ಶ್ರೀ ಗುರು ಬಸವಣ್ಣನವರು ಸ್ಥಾಪಿಸಿದ ಮಂಟಪದಲ್ಲಿ ವಿವಿಧ ಕಾಯಕಗಳಲ್ಲಿ ನಿರತರಾಗಿದ್ದ ಜನರು ದೇವರು-ಧರ್ಮ-ಜೀವನಗಳನ್ನು ಕುರಿತು ಮುಕ್ತ ಚರ್ಚೆಯಲ್ಲಿ ತೊಡಗಿರುತ್ತಿದ್ದರೆಂಬುದು ನಿಜವಾದರೂ ಅಲ್ಲಿ ಅವರನ್ನೂ "ಜಾತಿ"ಯಿಂದ ಗುರುತಿಸುತ್ತಿರಲಿಲ್ಲ, ಅಂತಸ್ತುಗಳಿಂದ ವಿಂಗಡಿಸುತ್ತಲೂ ಇರಲಿಲ್ಲ, ಜಾತಿ-ವರ್ಣ-ವರ್ಗಗಳ ವಿರೋಧವೇ ಶರಣರ ಸಾಮಾಜಿಕ ನಿಲುವಾಗಿತ್ತೆಂದು ತಿಳಿಯಬೇಕು.

ಅರಿವಿನ ವಿಶ್ರಾಮದಂತಿದ್ದ ಅಲ್ಲಮರನ್ನು ಬಸವಣ್ಣ, ಚನ್ನಬಸವಣ್ಣ, ಮಡಿವಾಳ ಮಾಚಿದೇವರು ಮುಂತಾದವರು ಮುಕ್ತ ಮನದಿಂದ ಪ್ರಶಂಸಿಸಿ ಗೌರವ

ಸಲ್ಲಿಸಿರುವುದನ್ನು ಎತ್ತಿ ಹೇಳಿರುವ ಡಾ॥ ಮೂರ್ತಿಯವರಿಗೆ ಆ ಅಲ್ಲಮರೇ, ಅಣ್ಣನವರನ್ನು ಕುರಿತು "ಸಂಗನ ಬಸವಣ್ಣ ಎನಗೆಯೂ ಗುರು, ನಿನಗೆಯೂ ಗುರು, ಜಗವೆಲ್ಲಕ್ಕೆಯೂ ಗುರು" ಎಂದು ಸ್ತುತಿಸಿರುವುದನ್ನು ಸ್ಮರಿಸುವುದಕ್ಕೆ ಯಾವ ಸಂಕೋಚ ಅಡ್ಡ ಬಂದಿತೋ ತಿಳಿಯದಾಗಿದೆ.

"ಶರಣ" ಪದದ ಅರ್ಥ ವಿವೇಚನೆ ಮಾಡುತ್ತಾ ಸಂಸ್ಕೃತದ ರಕ್ಷಣೆ-ರಕ್ಷಕ ಎಂಬ ಅರ್ಥಗಳನ್ನಷ್ಟೇ ಹೇಳಿ, ಕನ್ನಡದ ದೇವರಿಗೆ, ಧರ್ಮಕ್ಕೆ, ಸತ್ಯಕ್ಕೆ ಶರಣು ಬಂದವನು ಎಂದು ಹೇಳುವುದನ್ನು ಮರೆತುಬಿಟ್ಟಿದ್ದಾರೆ. ಶರಣನೆಂದರೆ ಅರಿದರಿದು ಆಚರಿಸುವ Enlightened person ಎಂಬ ಅವರ ವ್ಯಾಖ್ಯೆ ಚನ್ನಾಗಿದೆಯಾದರೂ ಅದನ್ನು "ವೀರಶೈವ" ಪರಿಸರದ ವ್ಯಾಪ್ತಿಗೆ ತರುವ ಅವರ ಪ್ರಯತ್ನ ಸರಿ ಎನಿಸುವುದಿಲ್ಲ. ಶೈವದಲ್ಲಿ ಮತ್ತು ಅದರ ಒಂದು ಪ್ರಭೇಧವಾದ ವೀರಶೈವದಲ್ಲಿ ಪರಿಪ್ರಶ್ನೆಗೆ ಅವಕಾಶವೇ ಇಲ್ಲ. ಪ್ರಣಿಪಾತ-ಸೇವ್ಯ: ಅಷ್ಟಕ್ಕೇ ಸೀಮಿತವಾಗಿದೆ. ಅದು ವೈದಿಕ ಸಂಸ್ಕೃತಿ ಅಲ್ಲಿ ಕರ್ಮಟತನ, ಅಂಧಾನುಚರಣೆ, Ritualsಗಳಿಗೇ ಪ್ರಾಧಾನ್ಯತೆ ಇದೆ. ಅರಿದರಿದು ಆಚರಿಸುವ ಮುಕ್ತ ಅವಕಾಶವಿರುವುದು ಶರಣ ಸಂಸ್ಕೃತಿಯಲ್ಲಿ. ಅಂತೆಯೇ ಅಣ್ಣನವರು ಅರಿದೊಡೆ ಶರಣ, ಮರೆದೊಡೆ ಮಾನವ ಎಂದಿದ್ದಾರೆ.

ಡಾ॥ ಚಿದಾನಂದ ಮೂರ್ತಿಯವರು ತಮ್ಮ ಭಾಷಣದ ಮೂರನೇ ಭಾಗ (ಪುಟ 2)ದಲ್ಲಿ ವೀರಶೈವ-ಲಿಂಗಾಯತ ಪರಿಕಲ್ಪನೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ವಿವಾದ ಈ ಸಮ್ಮೇಳನದ ಚೌಕಟ್ಟಿಗೆ ಅಪ್ರಸ್ತುತವಾಗಿದೆ ಹಾಗೂ ಅಸಂಬದ್ಧ ವಿಚಾರಗಳಿಂದ ಕೂಡಿದ್ದಾಗಿದೆ.

ಡಾ॥ ಮೂರ್ತಿಯವರು ಹೇಳುವಂತೆ ವೀರಶೈವ-ಲಿಂಗಾಯತ ಪದಗಳಲ್ಲಿ ವ್ಯತ್ಯಾಸವನ್ನು ಮಾಡುವ ಪ್ರಯತ್ನವನ್ನು ಯಾರೋ ಕೆಲವರು ನಡೆಸಿಲ್ಲ. ಮೂಲದಲ್ಲೇ ಈ ಎರಡು ಪದಗಳಲ್ಲಿ ವ್ಯತ್ಯಾಸವಿದ್ದೇ ಇದೆ. ಇದು ಕಾಲ್ಪನಿಕ ಭೇದವಲ್ಲ. ವಾಸ್ತವಿಕ ಪರಿಭೇದ, ಈ ಕುರಿತು ನಡೆದಿರುವ ಚರ್ಚೆಯಲ್ಲಿ ಪೂಜ್ಯ ಮಾತೆ ಮಹಾದೇವಿಯವರು, ಡಾ॥ ಹಿರೇಮಲ್ಲೂರು ಈಶ್ವರನ್, ಪ್ರೊ॥ ವಿ. ವಿ. ಸಂಗಮಂದ, ಡಾ॥ ಮಹಾದೇವ ಬಣಕಾರ ಮತ್ತು ನಾನು ಸಹ ಅನೇಕ ಲೇಖನ-ಭಾಷಣಗಳ ಮೂಲಕ ವೀರಶೈವ-ಲಿಂಗಾಯತ ಪದಗಳು ಪರ್ಯಾಯಗಳೂ ಅಲ್ಲ ಸಮಾನಾರ್ಥಕಗಳೂ ಅಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಪ್ರಸ್ತುತ ಡಾ॥ ಮೂರ್ತಿಯವರ ಭಾಷಣದಲ್ಲಿನ ಮಾತುಗಳನ್ನು ಮಾತ್ರ ವಿಶ್ಲೇಷಣೆ ಮಾಡಬಯಸುತ್ತೇನೆ. 'ಭವಿ' ಎಂಬುದು ವೀರಶೈವ ಅಥವಾ ಲಿಂಗಾಯತ ಅಲ್ಲದವನು ಎಂದು ನಾವಾರೂ ತಿಳಿದುಕೊಂಡಿಲ್ಲ. ಶರಣ ಸಾಹಿತ್ಯದಲ್ಲಿ

ಭವಿ–ಭಕ್ತ ಪದ ಪ್ರಯೋಗವಿದೆ. ಸದ್ಗುಣಿ–ಸದಾಚಾರಿಯಾದವನು ಭಕ್ತ; ದುರ್ಗುಣಿ ದುರಾಚಾರಿಯಾದವನು ಭವಿ. ಇಲ್ಲಿ ಲಿಂಗಧಾರಣೆ ಗೌಣವಾಗುತ್ತದೆ. ಗುಣಾರಾಧನೆ ಪ್ರಧಾನವಾಗುತ್ತದೆ, ಲಿಂಗಧಾರಿಯಾಗಿಯೂ ದುರ್ಗುಣ–ದುರಾಚಾರಿಯಾಗಿದ್ದರೆ ಅವನು ಭವಿಯೇ. ಸದಾಚಾರಿ, ಸದ್ಗುಣಿ, ಸಜ್ಜನನಾಗಿದ್ದು ಲಿಂಗಧಾರಿಯಾಗಿಲ್ಲದಿದ್ದರೂ ಅವನು ಭಕ್ತನೇ. ಇದಕ್ಕೆ ಶರಣರ ಅನೇಕ ವಚನಗಳ ಆಧಾರವಿದೆ; ಭವಿ–ಭಕ್ತ ನಿರ್ಣಯಕ್ಕೆ ಅವುಗಳ ಆಧಾರ ಹಿಡಿಯದೆ ಮೂಲತಃ ಅನುಭಾವಿಯೂ ಅಲ್ಲದ, ವಿಶೇಷತಃ ವಚನಕಾರನೂ ಅಲ್ಲದ, ಕವಿ ಕೇಶಿರಾಜನ ಕಂದ ಪದ್ಯಗಳ ಆಧಾರವನ್ನು ಅರಸಿ ಹೊರಟಿರುವ ಡಾ॥ ಚಿದಾನಂದರ ಪ್ರಯತ್ನ ನಿಜಕ್ಕೂ ಚೋದ್ಯವಾಗಿದೆ. ಅನುಭಾವೀ ಶರಣರ ಬಗ್ಗೆ ಅವರಿಗಿರುವ ಆಲಸ್ಯ–ಅನಾದರಗಳ ದ್ಯೋತಕವಾಗಿದೆ;

ವೀರಶೈವದ ಬಗ್ಗೆ ಕೊಂಡುಗುಳಿ ಕೇಶರಾಜನ ಸತ್ಯ, ಕ್ಷಮೆ, ಶಾಂತಿ, ಸೈರಣೆ ಇತ್ಯಾದಿ ಆರು ಅಥವಾ ಹನ್ನೊಂದು ಸೂತ್ರಗಳನ್ನೋ, ತನ್ನ ಲಿಂಗಾರ್ಚನೆಯನ್ನು ಶಿಷ್ಯನಿಂದ ನೋಡಿಸುವ (ಶಿಷ್ಯನಿಂದಲೇ ತನ್ನ ಲಿಂಗವನ್ನು ತಾನೇ ಪೂಜಿಸುವಂತೆ ಮಾಡುವ ಅಲ್ಲ) ನಿಜಗುಣ ಶಿವಯೋಗಿಗಳನ್ನೋ ಅನುಸರಿಸುವುದು "ವೀರಶೈವ"ರಿಗೆ ಮತ್ತು ಡಾ॥ ಮೂರ್ತಿಯವರಿಗೆ ಬಿಟ್ಟ ವಿಷಯ. ಆದರೆ ಇವು "ಲಿಂಗಾಯತ"ರಿಗೆ ಮಾನ್ಯವಾದುವಲ್ಲ. ಏಕೆಂದರೆ ಇವೆಲ್ಲಾ ಲಿಂಗವನ್ನು ಹೊರಗಿಟ್ಟು ಪೂಜಿಸುವ ವಿಧಾನಗಳು ಮತ್ತು ಅವರೇ ಹೇಳುವಂತೆ ಲಿಂಗವನ್ನು ಒಂದು ವಿಶಿಷ್ಟ ಚಿಹ್ನೆಯಾದಿ ಧರಿಸುವ (ಪದಕ, ಲಾಕೆಟ ಅಥವಾ ಮಣಿಗಳಂತೆ) "ಲಿಂಗಧಾರಕರ" ಲಕ್ಷಣಗಳು ಶೈವರಲ್ಲಿ; ವೀರಶೈವರಲ್ಲಿ ಕೆಲವರು ಅಥವಾ ಎಲ್ಲರೂ ಲಿಂಗ ಧಾರಕರಾದಿರಬಹುದು. ಆದರೆ ಅವರೆಲ್ಲರೂ ಲಿಂಗಾಯತರಲ್ಲ. ಭಕ್ತನಾದ ತನ್ನಂತರಂಗದ ಚಿತ್ಕಳೆಯನ್ನೇ ಶ್ರೀಗುರುವಿನ ಹಸ್ತ–ಮಸ್ತಕ ಸಂಯೋಗ, ಪ್ರಣವ ಮಂತ್ರೋಪದೇಶಗಳ ಮೂಲಕ ಭಾವದಿಂದ ಮನಕ್ಕೆ, ಮನದಿಂದ ನೇತ್ರಕ್ಕೆ, ನೇತ್ರದಿಂದ ಕರಕ್ಕೆ ಕರದಿಷ್ಟ ಲಿಂಗರೂಪದಲ್ಲಿ ಪಡೆದು ಅಥವಾ ಆಯತ ಮಾಡಿಕೊಂಡು ಅಹಂಗ್ರಹೋಪಾಸನೆಯ ಮೂಲಕ ಆ ಲಿಂಗದಲ್ಲೇ ತನ್ನ ಸ್ವ–ಸ್ವರೂಪವನ್ನು ದರ್ಶಿಸಿ, ಲಿಂಗಸ್ವಾಯತನಾಗಿ, ಲಿಂಗ ಸನ್ನಿಹಿತನಾದಿ, ಲಿಂಗಾಂಗ ಸಾಮರಸ್ಯವನ್ನು ಸಾಧಿಸುವವನೇ ಲಿಂಗವಂತನು.

ಇಂತಲ್ಲದೆ ಲಿಂಗವನ್ನು (ಸ್ಥಾವರ ಇರಬಹುದು) ಕೇವಲ ಒಂದು ಚಿಹ್ನೆ ಅಥವಾ ಲಾಂಛನವಾಗಿ ಧರಿಸಿಯೂ, ಗುಡಿ–ಗುಂಡಾರಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಸ್ಥಾವರಲಿಂಗ, ಶಿಲಾಲಿಂಗ, ಮೂರ್ತಿವಿಗ್ರಹಾದಿಗಳನ್ನು ಪೂಜಾರಿಯೋರ್ವನ ಮಾಧ್ಯಮದ ಮೂಲಕ ಪೂಜಿಸುವವನು (ಅರ್ಚನೆಯೂ ಅಲ್ಲ; ಅನುಸಂಧಾನವೂ ಅಲ್ಲ) ವೀರಶೈವನು, ಸುಪ್ರಸಿದ್ಧ ಸಮಾಜ ಶಾಸ್ತ್ರಜ್ಞ, ತತ್ವಜ್ಞಾನಿ ಡಾ॥ ಹಿರೇಮಲ್ಲೂರ

ಈಶ್ವರನ್‌ರವರು ಹೇಳುವಂತೆ ವೀರಶೈವರೆಲ್ಲರೂ ಲಿಂಗವಂತರಿರಬಹುದು. ಆದರೆ ಲಿಂಗವಂತರನ್ನೆಲ್ಲಾ ವೀರಶೈವರೆನ್ನಲಾಗದು, ಅವರು ಲಿಂಗಾಯತರೇ;

ವಚನಕಾರರಲ್ಲಿ ವೀರಶೈವ ಪದವು ಅಲ್ಲಲ್ಲಿ ಕ್ವಚಿತ್ತಾಗಿ (ಅದೂ ಪ್ರಕ್ಷಿಪ್ತವೆಂಬ–ಸಂದೇಹವಿದೆ) ಬಳಕೆಯಾಗಿದೆಯಲ್ಲದೆ ಡಾ॥ ಚಿದಾನಂದರು ಹೇಳುವಂತೆ ಲಿಂಗಾಯತ ಪದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗಿಲ್ಲ, ಅಷ್ಟಕ್ಕೂ 'ಶಿವ' ಪದಕ್ಕೆ ಡಾ॥ ಮೂರ್ತಿಯವರು ಕೊಟ್ಟಿರುವ ಅಕ್ಷರಾರ್ಥ–ಲಕ್ಷ್ಯಾರ್ಥಗಳೆರಡೂ ಶರಣರ ಆಶಯಕ್ಕೆ ಅನುಗುಣವಾಗಿಲ್ಲ; ಬಸವಾದಿ ಪ್ರಮಥರ ದೃಷ್ಟಿಯಲ್ಲಿ 'ಶಿವ' ಎಂದರೆ ಶುಭ, ಮಂಗಳ, ಕಲ್ಯಾಣ ಅಥವಾ ಲೇಸು ಎಂದಿದೆ. ಅದು ನಿರಾಕಾರದ ತತ್ವವಾಚಕವೇ ವಿನಾ ಸಾಕಾರದ ವ್ಯಕ್ತಿವಾಚಕವಲ್ಲ.

ಲಿಂಗಾಯತರೆಂದು ಯಾರಾದರೂ ವೀರಶೈವರನ್ನು ಕರೆದರೆ ಅಥವಾ ತಮ್ಮನ್ನು ತಾವೇ ಹಾಗೆಂದು ಕರೆದುಕೊಂಡರೆ ಯಾರೂ ಆಕ್ಷೇಪ ಮಾಡಬಾರದು ಎನ್ನುತ್ತಾರೆ ಡಾ॥ ಮೂರ್ತಿಯವರು. ಇದು ಪಾಕಿಸ್ತಾನಿಗಳು ತಮ್ಮನ್ನು ತಾವೇ ಹಿಂದೂಸ್ತಾನಿಗಳೆಂದು ಕರೆದುಕೊಂಡರೆ ಹಿಂದುಸ್ತಾನಿಗಳು–ಆಕ್ಷೇಪ ಎತ್ತಬಾರದು ಎನ್ನುವಂತಿದೆ. ಲಿಂಗವಂತ ಗುಣ–ಲಕ್ಷಣ–ಆಚರಣೆಗಳನ್ನು ಅಳವಡಿಸಿಕೊಂಡವರು ಕೇವಲ ವೀರಶೈವರೇ ಏಕೆ ಇನ್ನಾರಾದರೂ "ಲಿಂಗವಂತ"ರೆಂದು ಖಂಡಿತಾ ಕರೆದುಕೊಳ್ಳಬಹುದು. ಆದರೆ ಪ್ರಸ್ತುತದಲ್ಲಿ ನಡೆದಿರುವ ವಿದ್ಯಮಾನಗಳು ಬೇರೆಯೇ ಇವೆ. ಯಾವುದೋ ಕಾರಣಕ್ಕಾಗಿ, ಯಾವಾಗಲೋ ಲಿಂಗವನ್ನು ಧರಿಸಿರುವ, ಧರಿಸದೆಯೂ ಇರುವ, ಬಿಟ್ಟೂ ಇರುವ "ವೀರಶೈವರು" ಲಿಂಗವನ್ನು ತಮ್ಮ ಜೀವನದ ಮತ್ತು ಧರ್ಮದ ಅವಿಭಾಜ್ಯ ಅಂಗ–ವಾಗಿ, ಸಾಧ್ಯವೂ, ಸಾಧನವೂ ಒಂದೇ ಆಗಿ ಸ್ವೀಕರಿಸಿರುವ ಲಿಂಗವಂತರನ್ನು ನೀವೂ ವೀರಶೈವರೇ ಎಂದು ತಮ್ಮ ಕಬಂಧ ಬಾಹುಗಳಲ್ಲಿ ಕಬಳಿಸುವ ಯತ್ನ ನಡೆಸಿದ್ದಾರೆ. ಈ ದುರಾಕ್ರಮಣವನ್ನು ಇದರಲ್ಲೇನಿದೆ ? ಎರಡೂ ಒಂದೇ ಅಲ್ಲವೇ ಎಂಬಷ್ಟು ಸರಳೀಕರಿಸುವ "ಚಿದಾನಂದ ಚಮತ್ಕಾರ"ಕ್ಕೆ ತೆರೆ ಬೀಳಬೇಕಾಗಿದೆ.

ಈ ಚಿದಾನಂದ ಚಮತ್ಕಾರ ಇಂದು–ನಿನ್ನೆಯದಲ್ಲ. ಕೆಲದಿನಗಳ ಹಿಂದೆ ಇವರು "ವೀರಶೈವ ಮತ ಸ್ಥಾಪಕರು ಅಜ್ಞಾತ ವಾಸಿಗಳಾಗಿದ್ದಾರೆ" ಎಂದು ಬರೆದು ಆಗ ಎದ್ದಿದ್ದ "ಮತಸ್ಥಾಪಕರ" ಸಮಸ್ಯೆಗೆ ಒಂದು ತೆರೆ ಎಳೆಯುವ ಪ್ರಯತ್ನ ಮಾಡಿದ್ದರು. ಆಗ ನಾನು ಚಿತ್ರದುರ್ಗ ಬೃಹನ್ಮಠದ ತ್ರೈಮಾಸಿಕ "ಸತ್ಯಶುದ್ಧ ಕಾಯಕ"ದಲ್ಲಿ ಒಂದು ಲೇಖನ ಬರೆದು "ವೀರ ಶೈವ" ಮತಸ್ಥಾಪಕರು ಅಜ್ಞಾತರಾಗಿಲ್ಲ; ಸುಜ್ಞಾತರಾಗಿಯೇ ಇದ್ದಾರೆ, ಅವರೇ ಬಸವಾದಿ ಪ್ರಮಥರು ಎಂದು ತಿಳಿಯ ಪಡಿಸಿದ್ದೆನು. ಅದೇರೀತಿ ಇನ್ನೂ ಅನೇಕರು ಪ್ರತಿಭಟಿಸಿದ ಪರಿಣಾಮವಾಗಿ ತಮ್ಮ ಚಮತ್ಕಾರಕ್ಕೆ ತಾವೇ ತೆರೆ ಎಳೆದುಕೊಂಡು ಸುಮ್ಮನಾಗಿದ್ದರು. ಇದೇ ಚಿದಾನಂದರು (ಅಥವಾ ಚಿದಾ

ನ್ವೇಷಣಾನಂದರು) ಪಂಚಾಚಾರ್ಯರ ಬಗೆಗಿನ ವಿವಾದಕ್ಕೆ ಅಂತಿಮ ತೆರೆ ಎಳೆಯುತ್ತೇನೆ ಎಂದು ಪ್ರಯತ್ನಿಸಿ ಪ್ರಬಲ ವಿರೋಧದ ಪೆಂಡೋರಾಸ್ ಬಾಕ್ಸನ್ನೇ ಓಪನ್ ಮಾಡಿದ್ದನ್ನು ನಾವುಗಳಾರೂ ಮರೆತಿಲ್ಲ.

ಇದೇನೇ ಇರಲಿ ಈ ಎಲ್ಲದರ ಹಿನ್ನೆಲೆಯಲ್ಲಿ ಯಾವುದೋ ಪಟ್ಟಭದ್ರ ಹಿತಾಸಕ್ತಿಯ ದುಷ್ಟಶಕ್ತಿಗಳು ತಮ್ಮ ಸ್ವಾರ್ಥ–ಪ್ರತಿಷ್ಠೆಗಳ ಈಡೇರಿಕೆಗಾಗಿ ಸಾಹಿತ್ಯ–ಸಂಶೋಧನೆಗಳ ಕ್ಷೇತ್ರದಲ್ಲಿ ತಮ್ಮ ಯಥಾಶಕ್ತಿ ಸೇವೆ ಸಲ್ಲಿಸುತ್ತಾ, ಕನ್ನಡದ ಕಾಳಜಿಯನ್ನೂ ಹಚ್ಚಿಕೊಂಡು ಹೆಣಗಾಡುತ್ತಿರುವಂತಹ ಈ ವಾಮನಮೂರ್ತಿ ಡಾ॥ ಚಿದಾನಂದಮೂರ್ತಿಯವರನ್ನು ತಮ್ಮ ಕಪಟ ನಾಟಕದ ರಂಗಸಜ್ಜಿಕೆಯ ಪರದೆ ಎಳೆಯುವ ಹುಡುಗನಂತೆ ಬಳಸಿಕೊಳ್ಳುತ್ತಿರುವುದು ನಿಜಕ್ಕೂ ದೌರ್ಭಾಗ್ಯದ ಸಂಗತಿ, ಈ ದುಸ್ಥಿತಿಗಾಗಿ ನಾವೆಲ್ಲ ಕನಿಕರ ವ್ಯಕ್ತಪಡಿಸಬೇಕಾಗಿದೆ,

ಲಿಂಗಾಯತ–ಲಿಂಗವಂತ–ಲಿಂಗಧಾರಕರೆಲ್ಲರನ್ನೂ ತಮಗೆ ಆಪ್ಯಾಯಮಾನವಾದ ತಮ್ಮವರ ಯಜಮಾನಿಕೆಯ ವೇದಿಕೆಯಾದ ವೀರಶೈವ ಕಕ್ಷೆಯೊಳಕ್ಕೆ ತುರುಕುವ ಧೂರ್ತ ಪ್ರಯತ್ನವಷ್ಟೇ ಸಾಲದೆಂಬಂತೆ, ಇಡೀ ವೀರಶೈವ–ಲಿಂಗಾಯತರೆಲ್ಲರನ್ನೂ "ಹಿಂದೂ" ಎಂಬ ವೈಪರೀತ್ಯ–ವಿಲಕ್ಷಣಗಳ ಆಗರವಾದ, ಅಸ್ಪಷ್ಟ–ಅಸಂಬದ್ಧ ವ್ಯವಸ್ಥೆಯ ಕಕ್ಷೆಯೊಳಕ್ಕೆ ತುರುಕುವ ದುಸ್ಸಾಹಸಕ್ಕೂ ಕೈಹಾಕಿದ್ದಾರೆ ಈ ಚಿದಾನಂದ ಮೂರ್ತಿಯವರು. ಅಂತೆಯೇ "ಹಿಂದೂ" ಪದದ ಅರ್ಥವೇನೇ ಇರಲಿ ಲಿಂಗಾಯತ ಅಥವಾ ವೀರಶೈವರೆಲ್ಲರೂ ಹಿಂದೂಗಳೇ ಎಂಬ ಬಗ್ಗೆ ಅನುಮಾನಬಾರದಿರಲಿ ಎಂದು ಹೇಳಿ ಇದನ್ನು ವಿಸ್ತರಿಸಬಯಸುವುದಿಲ್ಲ ಎನ್ನುತ್ತಾ ತಮ್ಮ ವಾದವನ್ನು ಮೊಟಕುಗೊಳಿಸಿದ್ದಾರೆ.

ಆದರೆ ಅಂದು, ಇಂದು, ಎಂದೆಂದೂ ಲಿಂಗಾಯತರೇ ಆದ ನಾವು ಈ ಮರಕಟುಕತನದ ಪ್ರವೃತ್ತಿಯನ್ನು ಹಿಂಜಿ ಹರಡಿ ಖಂಡಿಸದೇ ಇರಲಾಗದು. ಸಿಂದೂ ನದಿಯಿಂದ ಈಚೆಗೆ ವಾಸಿಸುವ ಜನರೆಲ್ಲರೂ ಹಿಂದೂಗಳೇ ಎಂಬ ಭೌಗೋಳಿಕ ಅರ್ಥದ ಜೊತೆ ಜೊತೆಗೆ ಒಂದು ಧರ್ಮ ಅಥವಾ ಜೀವನ ವಿಧಾನದ Norms ಮತ್ತು Concepts ಗಳ ಪ್ರಕಾರ "ಹಿಂದೂ" ಎಂದರೆ ಒಂದು ಧರ್ಮ ಎಂಬ ಅರ್ಥವೇ ಬರುವುದಿಲ್ಲ. ಬಹಳವೆಂದರೆ ಅನೇಕ ಮತ ಧರ್ಮಗಳ ಒಂದು ಕೂಟ ಎಂದು ಹೇಳಬಹುದು. ಹಿಂದೂತ್ವಕ್ಕೆ ಒಂದು ಪ್ರತ್ಯೇಕವಾದ ವೈಶಿಷ್ಟ್ಯವೇನೂ ಇಲ್ಲ. ಅದರಲ್ಲಿ ಚಾತುರ್ವರ್ಣ, ಚತುರಾಶ್ರಮ, ಸ್ತ್ರೀ–ಪುರುಷ ಭೇದ, ಬಹುದೇವೋಪಾಸನೆ, ಸಗುಣ–ಸಾಕಾರ ಅರ್ಚನೆ ಇವೆಲ್ಲಾ ಸೇರಿವೆ. ಇವಾವುದನ್ನೂ ಒಪ್ಪದ "ಲಿಂಗವಂತರು" ಈ ಹಿಂದು ಕಕ್ಷೆಯಲ್ಲಿ ಸೇರಲು ಸಾಧ್ಯವೇ ಇಲ್ಲ. ಇವುಗಳಲ್ಲಿ ಕೆಲವನ್ನು ಸರಿ ತಪ್ಪುಗಳ ಪರಿವೆ ಇಲ್ಲದೇ ಅನುಸರಿಸಿಕೊಂಡು ಬರುತ್ತಿರುವ "ವೀರಶೈವ"ರೆಂಬುವರು ಬೇಕಾದರೆ ಸೇರಿಸಿಕೊಳ್ಳಬಹುದು.

ತಮ್ಮ ಭಾಷಣದ ನಾಲ್ಕನೇ ಭಾಗದಲ್ಲಿ ಕೆಲವು ಸೈದ್ಧಾಂತಿಕ ವಿಷಯಗಳನ್ನು ಡಾ॥ ಮೂರ್ತಿ ಪ್ರಸ್ತಾಪಿಸಿದ್ದಾರೆ. ಅವೆಲ್ಲಾ ಅಪಾರ ಅಪಾರ್ಥದಿಂದ ಕೂಡಿವೆ. ಅವರು ಹೇಳುವಂತೆ ಒಮ್ಮೆ ಲಿಂಗವಂತನಾದ ವ್ಯಕ್ತಿ ವೀರಶೈವ ತತ್ವಕ್ಕೆ ಬದ್ಧನಾಗುವುದಿಲ್ಲ. ಅದೊಂದು ಹಿನ್ನಡೆ. ವೀರಶೈವವು, ಶೈವ ಶಾಖೆಯಾಗಿರುವುದರಿಂದಾಗಿ ವೈದಿಕ ಮೂಲಕ್ಕೆ ಸೇರುತ್ತದೆ. ಅದೇ ಕಾರಣದಿಂದಾಗಿ ಜನಿತದ ಶ್ರೇಷ್ಠತೆ–ಕನಿಷ್ಠತೆಗೂ, ಜಾತಿ–ವರ್ಣ–ವರ್ಗಗಳ ಮೇಲು–ಕೀಳುಗಳಿಗೂ ಒಳಗಾಗಿದೆ. ಲಿಂಗವು ಸಮಾನತೆಯ ಕುರುಹು, ಲಿಂಗವಂತವು ವೈದಿಕ ಅಥವಾ ಹಿಂದೂಗಳ ಮಾರ್ಗತ್ರಯಗಳನ್ನು "ಮೀರಿದ ಮಾರ್ಗ"ವಾಗಿದೆ. ಇಲ್ಲಿ ಗ್ರಂಥ ಪ್ರಮಾಣಕ್ಕೆ ಪ್ರಾಧಾನ್ಯವಿಲ್ಲ. ಅನುಭವಕ್ಕೇ ಪ್ರಾಧಾನ್ಯತೆ ಮತ್ತು ಅದೇ ಪ್ರಮಾಣ.

ಲಿಂಗವಂತ ಮಾರ್ಗವು ಕೊಂಡುಗುಳಿ ಮುಂತಾದ ಶೈವರು ಪ್ರತಿಪಾದಿಸುವ ಶಿವನ ಹತ್ತಿರಕ್ಕೆ (ಸಾಮೀಪ್ಯ, ಸಾಲೋಕ್ಯ, ಸಾಯುಜ್ಯ) ಕರೆದೊಯ್ಯುವುದಕಷ್ಟೇ ಸೀಮಿತವಾದುದಲ್ಲ. ಇದು ಆ ಪರಾತ್ಪರ ಪರವಸ್ತು (ಲಿಂಗ) ವಿನೊಡನೆ ಒಡಮೆರೆದು ಒಂದಾಗುವ ಸಮರಸ ಸಂಯೋಗ.

ಜನ್ಮದಿಂದ ಯಾವ ಜಾತಿಯವನಾದರೂ ಲಿಂಗಧಾರಿಯಾದ ಮೇಲೆ ಎಲ್ಲರೂ ಸಮಾನರು. ಅಂತೆಯೇ ಧರ್ಮಗುರು ಬಸವಣ್ಣನವರು "ಪೂರ್ವಾಶ್ರಯವ ಕಳೆದು ಪುನರ್ಜಾತನಾದ ಬಳಿಕ ನಂಟು ಭಕ್ತಿ ನಾಯಕ ನರಕ" ಎಂದಿದ್ದಾರೆ. ಆದರೂ ಈ ಮೂರ್ತಿಯವರು ಮತ್ತೆ ಮತ್ತೆ ಜಾತಿಯನ್ನು ಎತ್ತಿ ವ್ಯಾಖ್ಯಾನ ಮಾಡುತ್ತಿರುವುದನ್ನು ನೋಡಿದರೆ ವಿಸ್ಮಯವಾಗುತ್ತದೆ. ಹನ್ನೆರಡನೆಯ ಶತಮಾನದ ಧಾರ್ಮಿಕ–ಸಾಮಾಜಿಕ ಆಂದೋಲನದಲ್ಲಿ ಜಾತಿ ನಿರಸನವಾಗಿ ಲಿಂಗಧಾರಿಗಳೆಲ್ಲರೂ ಏಕತ್ರವಾಗಿ ಹದಿನಾರನೆಯ ಶತಮಾನದವರೆಗೂ ಏಕತ್ರವಾಗಿ ಲಿಂಗವಂತ ಸಮಾಜ ಸಾಗಿತ್ತು. ಆದರೆ ನೂರೊಂದು ವಿರಕ್ತರ ಕಾಲದಲ್ಲಿ ಅಯ್ಯ–ಭಕ್ತವಾದ ಆರಂಭವಾಗಿ, ಪೂರ್ವಾಶ್ರಯವಿಡಿದು ಭಕ್ತ–ಭವಿ ವಿಂಗಡಣೆಯೂ ಆರಂಭವಾಗಿ ಅವರನ್ನು ಮುಖ್ಯಪ್ರವಾಹ (Main stream) ದಿಂದ ದೂರೀಕರಿಸುವ ಉಲ್ಬಣಾವಸ್ಥೆಯನ್ನು ತಲುಪಿ, ಸಮಾಜ ವಿಘಟಿತವಾಗಿ ಕುಲ–ಜಾತಿಗಳ ಕಲಹಕ್ಕೆ ನಾಂದಿಯಾಯಿತು, ಅದರ ಪರಿಣಾಮವೇ ನಾವಿಂದು ಕಾಣುತ್ತಿರುವ ಪಂಗಡ–ಒಳಪಂಗಡಗಳ ಮೇಲಾಟದ ಹೋರಾಟ.

ಡಾ॥ ಮೂರ್ತಿಯವರು ತಮ್ಮ ಭಾಷಣದ ಈ ಭಾಗದ ಕೊನೆಯಲ್ಲಿ ಈಗಲೀಗ ಒಂದು ಉಪಜಾತಿ ಎಂದೇ ಪರಿಗಣಿಸಲ್ಪಟ್ಟಿರುವ "ಜಂಗಮರ" ಬಗ್ಗೆ ಒಂದು ಉತ್ತಮ ವಿಶ್ಲೇಷಣೆ ಮಾಡಿದ್ದಾರೆ. ಜಂಗಮವೆಂಬುದು ಜಾತಿ ವಾಚಕವಲ್ಲ, ತತ್ವವಾಚಕ ಎಂದು

ಹೇಳಿದ್ದಾರೆ. ಈಗಿನ ಕಾಲದ ಜಂಗಮ ವರ್ಗದವರಿಗೆ ಅರಿವು–ಅಧ್ಯಯನ–ಆಚರಣೆಗಳ ಅಭ್ಯಾಸದ ಅಗತ್ಯವನ್ನೂ ಒತ್ತಿ ಹೇಳಿದ್ದಾರೆ. ಜನಾಂಗದವರ ಮನೆಗಳಲ್ಲಿ ಘಟಿಸುವ ಜನನ, ಮರಣ, ಮದುವೆಗಳಂತಹ ಹವೆ–ಕವೆಗಳನ್ನು ತೀರಿಸುವ ಐಗಳನ್ನು ಜಂಗಮರೆಂದೂ ಅವರು ನಿರ್ವಹಿಸುವ ಕ್ರಿಯೆಗಳನ್ನು ಪೌರೋಹಿತ್ಯವೆಂದೂ ಕರೆದಿರುವುದು ಸಮಂಜಸವಾಗಲಾರದು, ಅಯ್ಯಾಚಾರವೆನ್ನಬಹುದು. ಅರಿವು ಆಚಾರ ಉಳ್ಳಡೆ ಜಂಗಮ ಎಂದು ಶರಣ ವಾಕ್ಯವಿರುದವುರಿಂದ ಈ ಕ್ರಿಯೆಗಳನ್ನು ಈ ಅಯ್ಯನೋರುಗಳಾಗಲೀ, ಇನ್ನಾರೇ ಆಗಲಿ ಪಂಚಾಚಾರ ಪಾಲಕರಾಗಿ, ಅಷ್ಟಾವರಣಗಳ ಅನುಸರಕರಾಗಿ, ಷಟ್‌ಸ್ಥಲಡ ಸಾಧಕರಾಗಿ ನಿರ್ವಹಿಸುವುದಾದರೆ ಇಂದಿನ ಅಯ್ಯಗಳನ್ನೇ ಮುಂದಿನ ಜಂಗಮರೆಂದು ಆದರಿಸಲು ಅಭ್ಯಂತರವಿಲ್ಲ. ಆದರೆ ಅವರು ಪ್ರಸ್ತುತದಲ್ಲಿ ಅನುಸರಿಸುತ್ತಿರುವ ವೇದ–ಜ್ಯೋತಿಷ್ಯಗಳ ಆಧಾರದ ಗುರು ಕಳಶ, ಪಂಚ ಕಳಶ, ಅಗ್ನಿಪೂಜೆ, ಶಮೀಪೂಜೆ, ನವಗ್ರಹ ಪೂಜೆ ಮುಂತಾದ ತತ್ವ ಬಾಹಿರ ಕ್ರಮಂಗಳನ್ನೂ ಯಾರಿಗೂ ತಿಳಿಯದ ಸಂಸ್ಕೃತ ಶ್ಲೋಕಗಳನ್ನೂ ಕೈ ಬಿಟ್ಟು ಬಸವಾದಿ ಪ್ರಮಥರ ವಚನಗಳ ಆಧಾರವಿಡಿದು ಮಂಗಳ ಕಾರ್ಯಗಳನ್ನು ನಡೆಸುವಂತಾಗಬೇಕು.

ಇಂತಹ ಪ್ರಕ್ರಿಯೆ ಈಗಾಗಲೇ ಅಲ್ಲಲ್ಲಿ ಆರಂಭವಾಗಿದೆ. ಈ ದಿಸೆಯಲ್ಲಿ ಅಯ್ಯಗಳ ವರ್ಗದವರು ಪ್ರತಿಕೂಲರಾಗದೆ ಅನುಕೂಲರಾಗಿ ವರ್ತಿಸುವಂತೆ ಡಾ|| ಮೂರ್ತಿಯವರು ಅವರಿಗೆ ಒಂದು ಕಿವಿಮಾತು ಹೇಳಿದ್ದರೆ ಚನ್ನಾಗಿರುತ್ತಿತ್ತು.

ಇದೇ ಭಾಷಣದ 5 ನೇ ಭಾಗದ ಆರಂಭದಲ್ಲಿ ಚಿ. ಮೂರ್ತಿರವರು ವೀರಶೈವ (ಅರ್ಥಾತ್ ಲಿಂಗಾಯತ) ಧರ್ಮವನ್ನು ಸ್ಥಾಪಿಸಿದವರು ರೇಣುಕ ಅಥವಾ ರೇವಣರೂ ಅಲ್ಲ ಅಥವಾ ಬಸವಣ್ಣನೂ ಅಲ್ಲ ಎಂಬ ವಿಚಿತ್ರ ವಾದವನ್ನು ಮಂಡನೆ ಮಾಡಿದ್ದಾರೆ. ಇವರು ಯುಗ ಯುಗಾಂತರ ಪೂರ್ವದ ಲಿಂಗೋದ್ಭವ ಲೀಲೆಯ ರೇಣುಕ, ದಾರುಕಾದಿ ಪಂಚಾಚಾರ್ಯರನ್ನು ನಿರಾಕರಿಸಿ, ಏಕೋರಾಮ, ಪಂಡಿತಾರಾಧ್ಯ, ಮರಳಾರಾಧ್ಯ, ರೇವಣಾರಾಧ್ಯರೆಂಬ ನಾಲ್ವರು ಚಾರಿತ್ರಿಕ ಚತುರಾಚಾರ್ಯರನ್ನು ಒಪ್ಪಿ ಅವರು ಬಸವಾದಿ ಶಿವ ಶರಣರ ಹಿರಿಯ ಸಮಕಾಲೀನರಿವರೆಂದು ಗುರುತಿಸಿರುವುದು ಸ್ವಾಗತಾರ್ಹ, ಇನ್ನು ನಮ್ಮ ದಾರಿ ಸುಲಭ.

ಸಂಸ್ಥಾಪಕರು ಎಂದರೆ ಒಂದು ಸಂಸ್ಥೆ ಅಥವಾ ಪಂಥವನ್ನು ಪರಿಷ್ಕರಣಗೊಳಿಸಿ, ಸುವ್ಯವಸ್ಥಿತವಾದ, ಸುಸಂಗತ ನೆಲೆಗಟ್ಟಿನ ಮೇಲೆ ನಿಲ್ಲಿಸುವುದೆಂದು ಅರ್ಥ. ಶೂನ್ಯದಿಂದ ಯಾವುದನ್ನೂ, ಯಾರೂ ಹುಟ್ಟಿಸಲಾರರು. ಕಾಳಾಮುಖ, ಲಾಕುಳೀಶ, ಪಾಶುಪಥ, ವೀರಶೈವ, ಶುದ್ಧಶೈವ ಇತ್ಯಾದಿ ವಿಚಾರ ಧಾರೆಗಳನ್ನು ಪರಿಪಕ್ವವಾದ ಪಂಥದ ಸ್ವರೂಪಕ್ಕೆ ತಂದವರು ಹನ್ನೆರಡನೆ ಶತಮಾನದ ಅನುಭವ ಮಂಟಪದ

ಶರಣರು. ಇದರ ಅಧ್ವರ್ಯು ಬಸವಣ್ಣ. ಆದ್ದರಿಂದಲೇ ಆತನನ್ನು ಸ್ಥಾಪಕನೆಂದು ಕರೆಯಲಾಗಿದೆ. ಅಂದಮಾತ್ರಕ್ಕೆ ಇದರ ಹಿನ್ನೆಲೆಯಲ್ಲಿ ದುಡಿದ ಏಕೋ ರಾಮಾದಿ ಚತುರಾಚಾರ್ಯರ ಪಾತ್ರವಿಲ್ಲವೆಂದಲ್ಲ. ಅವರೂ ಸಾಕಷ್ಟು Ground Work ಮಾಡಿದ್ದಾರೆ. ಈ ಧರ್ಮ ಸೌಧವನ್ನು ಸುಂದರ ಸುಭಗಗೊಳಿಸುವಲ್ಲಿ ಅಲ್ಲಮ, ಅಕ್ಕಮ್ಮ, ಚನ್ನಬಸವ, ಅಕ್ಕಮಹಾದೇವಿ ಮುಂತಾದ ಶರಣರೂ ಮಾದಾರ ಚನ್ನಯ್ಯ, ಸಕಳೇಶ ಮಾದರಸ, ಜೇಡರ ದಾಸಿಮಾರ್ಯ ಮುಂತಾದ ಹಿರಿಯರೂ ಮಹತ್ವದ ಪಾತ್ರವಹಿಸಿದ್ದಾರೆ.

ವಚನಕಾರರು ಚತುರಾಚಾರ್ಯರನ್ನು ಗೌರವಿಸುವಂತೆ ಇಂದಿನ ಪಂಚಾಚಾರ್ಯರು ಯುಗಾಚಾರ್ಯ ವಾದವನ್ನು ಕೈಬಿಟ್ಟು ಚತುರಾಚಾರ್ಯರು + ವಿಶ್ವಾರಾಧ್ಯರು ಸಹಿತ ಪಂಚಾಚಾರ್ಯರು ಐತಿಹಾಸಿಕ ವ್ಯಕ್ತಿಗಳು. ಅವರ ಕಾಲವೂ ಹನ್ನೆರಡನೇ ಶತಮಾನದ ಬಸವಾದಿ ಪ್ರಮಥರ ಸರಿ ಸಮನಾದ ಕಾಲ ಎಂದು ಒಪ್ಪಿದರೆ ಈ ಸಮಸ್ಯೆ ತನ್ನಿಂದ ತಾನೇ ಪರಿಹಾರವಾಗುತ್ತದೆ.

ಇದೇ ವಿಭಾಗದ ಮುಂದುವರಿದ ಭಾಗದಲ್ಲಿ. ಚಿ. ಮೂರ್ತಿಯವರು ಗುರು–ವಿರಕ್ತ ಪೀಠಗಳ ಸಂರಚನೆ, ಕಾರ್ಯಸೂಚಿ ಮುಂತಾದವುಗಳ ದೀರ್ಘ ಪಟ್ಟಿಯನ್ನು ಮಾಡಿದ್ದಾರೆ. ವಿಚಿತ್ರವೆಂದರೆ ಈ ಉಭಯ ವರ್ಗದವರೂ ಈ ಪಟ್ಟಿಯನ್ನು ಸಂಪೂರ್ಣ ಉಲ್ಲಂಘಿಸುತ್ತಲೇ ಹೊರಟಿದ್ದಾರೆ.

ಗುರುವರ್ಗದವರು ಆಧಾರ ರಹಿತವಾದ ಪೀಠ ಪಟ್ಟ, ಚರ, ಘನ ಇತ್ಯಾದಿ ಶ್ರೇಣಿಗಳನ್ನು ನಿರ್ಮಿಸಿಕೊಂಡಿದ್ದಾರೆ. ತತ್ವಬಾಹಿರವಾದ ಕಿರೀಟಧಾರಣೆ, ಅಡ್ಡ ಪಲ್ಲಕ್ಕಿ, ಒಡ್ಡೋಲಗ, ರುದ್ರಾಭಿಷೇಕ, ಕ್ಷೀರಾಭಿಷೇಕಗಳಲ್ಲಿ ನಿರತರಾಗಿದ್ದಾರೆ. ವಿರಕ್ತರಾದರೂ, ನಾವೇನು ಕಡಿಮೆ ಎಂದು ಪಂಚಪೀಠಗಳಿಗೆ ಪರ್ಯಾಯವಾಗಿ ಪಂಚ ಸಮಯಗಳನ್ನು ನಿರ್ಮಿಸಿಕೊಂಡು ತಾವೂ ಜಗದ್ಗುರುಗಳೆಂದು ಕರೆದುಕೊಳ್ಳುತ್ತಾ ಕಿರೀಟಗಳನ್ನು ಧರಿಸಿ ಅಡ್ಡಪಲ್ಲಕಿಗಳಲ್ಲೂ ಆಡ್ಡಾಡತೊಡಗಿದ್ದಾರೆ. ಇತ್ತೀಚೆಗಂತೂ ತಮ್ಮ ತಮ್ಮ ಒಳ ಪಂಗಡಗಳ ಬೆಂಬಲದಿಂದ ಮಠ–ಮಂದಿರಗಳ ಆಸ್ತಿ–ಪಾಸ್ತಿಗಳನ್ನು ವೃದ್ಧಿ ಮಾಡಿಕೊಂಡು, ಕನಿಷ್ಠ ಕಾರುಗಳಲ್ಲಾದರೂ ತಿರುಗಾಡುತ್ತಾ ಹಮಾಮ್ ವಿರಕ್ತಮಠಾಧೀಶರು ತಾವೂ ಜಗದ್ಗುರುಗಳೆಂದು ಘೋಷಿಸಿಕೊಳ್ಳ ತೊಡಗಿದ್ದಾರೆ.

ಈ ವಾಸ್ತವ ಚಿತ್ರವನ್ನು ಮರೆಮಾಚಲೆಂದೋ ಏನೋ ಪ್ರಾಂಜಲಮನಸ್ಕರೆಂದು ಹೇಳಿಕೊಳ್ಳುವ ಚಿ. ಮೂರ್ತಿರವರು ಗುರು–ವಿರಕ್ತರಿಬ್ಬರ ಬೇರುಗಳನ್ನು ಮುಚ್ಚಿ, ಮೇಲಿನ ಎಲೆಗಳನ್ನು ತೋರಿಸಿ ನಮ್ಮಂಥವರ ಬಾಯಿ ಮುಚ್ಚಲು ಯತ್ನಿಸಿದ್ದಾರೆ.

ಅನುಭವ ಮಂಟಪದ ಮೂಲೋದ್ದೇಶ ಮನೆ–ಮನೆಗಳೇ ಮಠಗಳಾಗಬೇಕು ಎಂಬುದು. ಆ ತತ್ವಕ್ಕೆ ತಿಲಾಂಜಲಿ ಇತ್ತವರು ಈ ಗುರು–ವಿರಕ್ತರಿಬ್ಬರೂ, ಆದ್ದರಿಂದಲೇ ಗುರುವರ್ಗದವರು ಶರಣ ಧರ್ಮ ಅರ್ಥಾತ್ ಬಸವ ತತ್ವ ಪ್ರಣಾಲಿಯ ಪ್ರಕಟ (ಬಹಿರಂಗ) ವಿರೋಧಿಗಳು ಮತ್ತು ವಿರಕ್ತ ವರ್ಗದವರು ಪ್ರಚ್ಛನ್ನ (ಅಂತರಂಗ) ವಿರೋಧಿಗಳು ಎಂಬ ಅಭಿಪ್ರಾಯ ಸಾಕಷ್ಟು ಪ್ರಚಲಿತವಾಗಿದೆ.

ತಮ್ಮ ಅದಕ್ಷ ಅಧ್ಯಕ್ಷ ಭಾಷಣದ ಈ ಭಾಗದಲ್ಲಿ ಗುರು–ವಿರಕ್ತ ಪರಂಪರೆಗಳ ಸಮನ್ವಯದ ಹರಿಕಾರರೇನೋ ಎಂದ ಸೋಗಿನಲ್ಲಿ, ಚತುರಾಚಾರ್ಯರ ವಾವೆಯಿಂದ ಪಂಚ ಆಚಾರ್ಯರಿಗೂ ಶರಣ ಪರಂಪರೆಯಲ್ಲಿ ಸಮುಚಿತ ಸ್ಥಾನ ದೊರಕಿಸುವ ಧೂರ್ತ ಪ್ರಯತ್ನವನ್ನು ಚಿ. ಮೂರ್ತಿ ಮಾಡಿದ್ದಾರೆ. ಇದನ್ನೇ ನಾನು ಚಿದಾನಂದ ಚಮತ್ಕಾರ ಎನ್ನುವುದು. ಚತುರಾಚಾರ್ಯರೂ ಶರಣರೇ ಎಂದು ನಂಬಿಸ ಹೊರಟಿರುವ ಇವರು ಶರಣಗಣದಿಂದ ಪ್ರತ್ಯೇಕಿಸಿ ಈ ನಾಲ್ವರನ್ನು ಆಚಾರ್ಯರೆಂದು ಏಕೆ ಕರೆಯುತ್ತಾರೆ ? ಅವರುಗಳೂ ಬೋಧಿಸಿದ್ದು ಶರಣ ಧರ್ಮವೇ ಎಂದು ಹೇಳುವುದಾದರೆ ಇತರೆ ಶರಣರಂತೆ ಸಂಗ್ರಹವಾಗದೆ ಉಳಿದದ್ದೇಕೆ ? ರೇವಣಸಿದ್ಧ (ರೇಣುಕ)ನ ಬೋಧನೆಗಳ "ಸಿದ್ಧಾಂತ ಶಿಖಾಮಣಿ" ಎಂಬ ಸಂಸ್ಕೃತ ಗ್ರಂಥ ರೂಪದಲ್ಲಿ ಸಂಗ್ರಹಿತವಾಗಿರುವುದೇಕೆ ? ಚಿ. ಮೂರ್ತಿರವರೇ ಹೇಳಿರುವಂತೆ "ಆಗಮ" ಪ್ರಮಾಣವಿಡಿದ "ಜೀವ ಶಿವೈಕ್ಯ" ಸಂಬೋಧಿನಿಯಾದ ವೀರಶೈವ ಗ್ರಂಥ ಆದರೆ ಬಸವಾದಿ ಪ್ರಮಥರು ಮತ್ತು ಶರಣರು ಬೋಧಿಸಿದ್ದು, ಸಾಧಿಸಿದ್ದು ಲಿಂಗಾಂಗ ಸಾಮರಸ್ಯ, ಶರಣರ ವಿಚಾರಧಾರೆ ಮತ್ತು ಆಧ್ಯಾತ್ಮಿಕ ಚಿಂತನಮಂಥನ–ಗಳಿಗೆ ವೇದ, ಆಗಮ, ಪುರಾಣಗಳು ಯಾವುವೂ ಆಕರಗಳಲ್ಲ. ಆಧಾರಗಳೂ ಅಲ್ಲ, ಇಲ್ಲಿ ಅನುಭವವೇ ಪ್ರಮಾಣ.

ಗುರು ಪರಂಪರೆಯವರೆಂದು ಚಿ. ಮೂರ್ತಿಯವರೇ ಗುರುತಿಸಿರುವ ವರ್ಗ–ದವರು ಏಕೋರಾಮ ಪಂಡಿತರಾಧ್ಯ ಇತ್ಯಾದಿ ನಾಲ್ವರನ್ನು ಶರಣ ಪರಂಪರೆಯವರೆಂದು ಒಪ್ಪಿಯೇ ಇಲ್ಲ. ಯುಗಯುಗದಲ್ಲಿ ಅಯೋನಿಜರಾಗಿಯೇ ಬಂದ ರೇಣುಕಾದಿ ಪಂಚಾಚಾರ್ಯರು ಕಾಲಕಾಲಕ್ಕೆ ಧರಿಸಿದ ರೇಣುಕ–ಧಾರುಕ, ಏಕವಕ್ತ್ರ, ಪಂಚವಕ್ತ್ರ, ಇತ್ಯಾದಿ ನಾಮ ಮಾಲಿಕೆಗಳಲ್ಲಿಯೇ ಏಕೋರಾಮಾದಿ ನಾಮಗಳನ್ನೂ ಸೇರಿಸುತ್ತಾರೆ.

ಇದೇ ಭಾಷಣದ 6 ನೇ ಭಾಗದಲ್ಲಿ ಇವರು ಶರಣರು ಸಾಹಿತ್ಯದ ಡೆಫೆನಿಷನ್ ಕೊಡಲು ಹೋಗಿ ಉಪಾಯಾಂತರದಿಂದ "ಸಿದ್ಧಾಂತ ಶಿಖಾಮಣಿ" ಎಂಬ ವೈದಿಕ ಗ್ರಂಥವನ್ನು ಶರಣ ಸಾಹಿತ್ಯ ಕಕ್ಷೆಯೊಳಗೆ ಸೇರಿಸುವ ಚಂಚು ಪ್ರವೇಶದ ಪ್ರಯತ್ನ ಮಾಡಿದ್ದಾರೆ. ಶರಣ ಸಾಹಿತ್ಯ ಎಂಬುದಕ್ಕೆ ತನ್ನದೇ ಆದ ಚೌಕಟ್ಟಿದೆ. ಅದು

ವೇದ–ಆಗಮ ಭಾಷ್ಯಗಳನ್ನಾವುದನ್ನು ಒಪ್ಪದ, ಚಾತುರ್ವರ್ಣ, ಚತುರಾಶ್ರಮ ವಿದೂರವಾದ, ಅನುಭವ ವೇದ್ಯವಾದ ಸಾಮಾಜಿಕ–ಧಾರ್ಮಿಕ ಜೀವನ ವಿಧಾನವನ್ನು ಪ್ರತಿಪಾದಿಸುತ್ತದೆ. ಸಿದ್ಧಾಂತ ಶಿಖಾಮಣಿಯಾದರೋ ರೇಣುಕಾಗಸ್ತ್ಯ ಸಂವಾದ ರೂಪವಾದ ಶಿವಾಗಮ ಪ್ರೋಕ್ತವಾದ ಗ್ರಂಥ. ಚಿ. ಮೂರ್ತಿಯವರು ಹೇಳುವಂತೆ ಶರಣರು ವಚನಗಳ (ಅಚ್ಚಕನ್ನಡದಲ್ಲಿ) ಹೇಳಿದ ತತ್ವಗಳನ್ನೇ ಶಿವಯೋಗಿ ಶಿವಾ–ಚಾರ್ಯನು ಸಂಕಲಿಸಿದ ಸಂಸ್ಕೃತ ಗ್ರಂಥವಲ್ಲ, ಇದು ವಚನ ವಾಙ್ಮಯದಲ್ಲಿ ಪ್ರತಿಪಾದಿತವಾಗಿರುವ ಜೀವನ ಮೌಲ್ಯಗಳಿಗೆ ಸಂಪೂರ್ಣವಾಗಿ ಭಿನ್ನವಾದ ಕೃತಿ ಈ ಗ್ರಂಥದಲ್ಲಿ ಎಲ್ಲಿಯೂ ವಚನಕಾರರನ್ನು Quote ಮಾಡಿಲ್ಲ. ವೇದ–ಆಗಮಗಳನ್ನು Quote ಮಾಡಲಾಗಿದೆ. ಇಲ್ಲಿ ಗುರು–ಲಿಂಗ–ಜಂಗಮಕ್ಕಿಂತಲೂ ಸ್ವಯ–ಚರ–ಪಟ್ಟಗಳನ್ನು ಪ್ರತಿಪಾದಿಸಲಾಗಿದೆ.

ಈ ಗ್ರಂಥವಲ್ಲಿ ಸ್ವಯಂಭು, ಸಂಪ್ರಭೇದ ಮುಂತಾದ ಶಿವಾಗಮ (L)ಗಳಲ್ಲಿ ಮತ್ತು ಪಾಶು ಪತಾದಿ ತಂತ್ರಗಳಲ್ಲಿ ಪ್ರತಿಪಾದಿತವಾದ ವಿಚಾರಗಳನ್ನೇ ರೇಣುಕಾದಿ ಪಂಚಾರ್ಯರು ಕೃತಾದಿ ಚತುರ್ಯುಗಗಳಲ್ಲಿ ಬೇರೆ ಬೇರೆ ನಾಮಗಳಿಂದ ಅವತರಿಸಿ ಸ್ಥಾಪಿಸಿದ್ದೇ ವೀರಶೈವ ಧರ್ಮ ಎಂದು ಒತ್ತಿ ಒತ್ತಿ ಹೇಳಲಾಗಿದೆ. ಹೀಗೆ ಸಂಸ್ಕೃತ ಭೂಷ್ಠವೂ, ಆಗಮ ನಿಗಮಾದಿ ವೈದಿಕ ಸಾಹಿತ್ಯ ಪ್ರತಿಪಾದಕವೂ ಆದ ಸಿದ್ಧಾಂತ ಶಿಖಾಮಣಿಯಾಗಲೀ, ಶ್ರೀಕರ ಭಾಷ್ಯವಾಗಲೀ ಅಚ್ಚಕನ್ನಡದ ಆಡು ಮಾತಿನಲ್ಲಿ ಉಚ್ಚ ವಿಚಾರಗಳನ್ನು ಪ್ರತಿಪಾದಿಸುವ ಸಹಜ ಸುಂದರ ಶರಣ ಸಾಹಿತ್ಯದ ಕಕ್ಷೆ–ಯೊಳಕ್ಕೆ ಸೇರಲು ಸುತಾರಾಂ ಯೋಗ್ಯವಾಗಿಲ್ಲ.

ಶರಣ ಸಾಹಿತ್ಯದ ಬಹು ಮುಖ್ಯ ಭಾಗವಾದ ವಚನ ವಾಙ್ಮಯವು ಚಿ. ಮೂರ್ತಿಯವರು ಭಾವಿಸಿರುವಂತೆ ಕೇವಲ "ಸಾಹಿತ್ಯ" ವಲ್ಲ. ಅದೊಂದು ದರ್ಶನ. It is a Socio – Religious Philosophy ಇಂತಹ ದರ್ಶನವನ್ನು ಶ್ರೀಕರ ಭಾಷ್ಯದಲ್ಲಾಗಲಿ, ಸಿದ್ಧಾಂತ ಶಿಖಾಮಣಿಯಲ್ಲಾಗಲಿ ಕಾಣಲಾಗದು. ಬಸವಾದಿ ಪ್ರಮಥರ Socio – Religious Reformative Movement ನ ಒಳಗಡೆ ಗುರು–ವಿರಕ್ತ ಎಂಬ ವಿಂಗಡಣೆಗೆ ಜಾಗವಿಲ್ಲ. ಅರಿವೇ ಗುರು, ಪ್ರಾಪಂಚಿಕ ದುಗುಡ–ದುಮ್ಮಾನಗಳಿಂದ ವಿಚಲಿತನಾಗದೇ ಇದ್ದವನೇ ವಿರಕ್ತ. ಆದ್ದರಿಂದ ವೇದ–ಆಗಮಾಧಾರಿತ ಸಂಸ್ಕೃತ ಸಾಹಿತ್ಯವನ್ನು ಗುರುವರ್ಗದ ಸಾಹಿತ್ಯವೆಂದೂ ಅನುಭವ ಪ್ರಮಾಣವಾದ ವಚನ ವಾಙ್ಮಯವನ್ನು ವಿರಕ್ತಸಾಹಿತ್ಯವೆಂದೂ ವಿಂಗಡಿಸುವ ಚಿದಾನಂದ ಮೂರ್ತಿಯವರ ಪ್ರಯತ್ನ ಕೃತಕವಾದದ್ದು ಮತ್ತು ಕುಯುಕ್ತಿಯಿಂದ ಕೂಡಿದ್ದಾಗಿದೆ.

ಈ ವಿಭಾಗದ ಕೊನೆಯಲ್ಲಿ ಈ ಧರ್ಮ ಪರಂಪರೆಯ ಜನರಲ್ಲಿ ಎಲ್ಲ ಜನಾಂಗದವರಲ್ಲಿದ್ದಂತೆ ಕಂಡು ಬರುವ ಪ್ರಾದೇಶಿಕ ವ್ಯತ್ಯಾಸಗಳನ್ನು ಮೂಲಭೂತ ಭಿನ್ನತೆಗಳೆಂದು ವರ್ಣಿಸಿ ಅವುಗಳನ್ನು ಸಾಮಾಜಿಕ ಸಮನ್ವಯತೆ ದೃಷ್ಟಿಯಿಂದ ಅತಿರೇಕ ಮಾಡಬಾರದೆಂದು ಹೇಳಿ, ತಾತ್ವಿಕವಾಗಿ ವಿರುದ್ಧ ನಡವಳಿಕೆಗಳಾದ ಬಹುದೇವೋಪಾಸನೆ (ಹೇಗಲೂರಿನ ಲಿಂಗಾಯತರುಗಳ ತಿರುಪತಿ ತಿಮ್ಮಪ್ಪನ ಪೂಜಾ ಪ್ರಸಂಗ) ಯನ್ನೂ ಸಹಜವೆಂಬಂತೆ ಸ್ವೀಕರಿಸಬೇಕೆಂದು ಹೇಳುವ ಚಿ. ಮೂರ್ತಿಯವರ ಮಾತುಗಳು ಈ ಧರ್ಮದ ಅತ್ಯಂತ ಪ್ರಮುಖವಾದ ಏಕದೇವೋಪಾಸನೆಯ ತತ್ವವನ್ನು ಹಗುರಗೊಳಿಸಿ ಲೇವಡಿ ಮಾಡುವ ದುರುದ್ದೇಶದಿಂದ ಕೂಡಿದಂತಿವೆ. ಅನ್ಯದೇವತಾ ಆರಾಧನೆ ಹಾದರ ಕಾಣಿರೋ ಎಂಬ ಶರಣ ವಾಣಿ ಇವರಿಗೆ ತಿಳಿದೇ ಇಲ್ಲವೆಂದು ಕಾಣುತ್ತದೆ.

ಚಿ. ಮೂರ್ತಿಯವರ ಭಾಷಣದ ಪುಟ ೨೦ ರಿಂದ ಮುಂದೆ ವಚನ ವಾಙ್ಮಯದ ವಿಶೇಷ ಅಧ್ಯಯನ ಸಂಶೋಧನೆಗಳ ಬಗ್ಗೆ ಮತ್ತು ವಚನಕಾರರ ವೈಯಕ್ತಿಕ ವೈಶಿಷ್ಟ್ಯಗಳ ಬಗ್ಗೆ ಕೊಟ್ಟ ವಿವರಣೆಗಳು ಮನನೀಯವಾಗಿವೆ. ಆದರೆ ವಚನ ಚಳುವಳಿಯು ಅಂಬಿಗರಿಗೆ ಅಂಬಿಗರ ಚೌಡಯ್ಯನಂತಹ, ಮಡಿವಾಳರಿಗೆ ಮಾಚಯ್ಯನಂತಹ, ಜೇಡರಿಗೆ ದಾಸಯ್ಯನಂತಹ ನಾಯಕರನ್ನು ಒದಗಿಸಿತು ಎಂದು ಹೇಳಿರುವುದು ಮನ ನೋಯಿಸುವಂತಿದೆ.

ಈ ಮಹಾಶರಣರು ಕೇವಲ ಒಂದು ಜಾತಿಯ ನಾಯಕರಾಗಿ ರೂಪುಗೊಳ್ಳಲಿಲ್ಲ; ಜಾತಿಯಿಂದ ದೂರವಾದ ನೀತಿಯುಕ್ತ ಸಮಾಜೋಧಾರ್ಮಿಕ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ ನೇತಾರರಾಗಿದ್ದರು. ಅವರ ಹೆಸರಿನ ಹಿಂದೆ ಸೇರಿಸಿರುವ ಜೇಡರ, ಅಂಬಿಗರ, ಮಡಿವಾಳರ ಎಂಬ ಪದಗಳು ಅವರವರ ಕಾಯಕ ಸೂಚಕಗಳೇ ಹೊರತು, ಕುಲ–ಜಾತಿ ಸೂಚಕಗಳಲ್ಲ. ಕುಲ–ಕಸಬುಗಳ ಗಣನೆ ಇಲ್ಲದೆ ಅರಿವು–ಆಚಾರ–ಅನುಭಾವಗಳುಳ್ಳ ಯಾರಾದರೂ ಬೋಧಕರೂ ಆಗಬಹುದು, ನಾಯಕರೂ ಆಗಬಹುದು ಎಂಬ ಬಸವ ಗುರುವಿನ ಆದರ್ಶಕ್ಕೆ ಅನುಗುಣರಾಗಿ ನಡೆದು ಅಮರರಾದ ಈ ಪುಣ್ಯ ಜೀವಿಗಳನ್ನು "ಜಾತಿ ಮುಖಂಡರಾಗಿ" ಕಂಡಿರುವುದು ಚೋದ್ಯವೇ ಸರಿ.

ಹೀಗೆ ತಮ್ಮ ಭಾಷಣದ ಉದ್ದಕ್ಕೂ ಅನೇಕ ಆಭಾಸಗಳನ್ನು ಮಾಡುತ್ತಲೇ ಸಾಗಿರುವ ಚಿ. ಮೂರ್ತಿಯವರು ಒಂದನ್ನಾಡಲು ಹೋಗಿ ಒಂಭತ್ತನ್ನಾಡಿದ್ದಾರೆ. ಧರ್ಮಗುರು ಬಸವಣ್ಣನವರು ಇಂತವರನ್ನು ಕಂಡರೆ "ಓಸರಿಸುವ" ಎಂದಿದ್ದಾರೆ. ಶರಣ ಧರ್ಮದ ಬಗ್ಗೆ, ಶರಣ ಸಾಹಿತ್ಯದ ಬಗ್ಗೆ, ಶರಣರ ನಡೆ–ನುಡಿಗಳ ಬಗ್ಗೆ ತಮ್ಮ ಅರೆಬೆಂದ ವಿಚಾರಗಳಿಂದ ಮತ್ತು ವೀರಶೈವರೆಂಬುವರೇ ಬೇರೆ ; ಲಿಂಗಾಯತರೇ

ಬೇರೆ ಎಂಬ ವಾದ ಪ್ರಬಲಗೊಳ್ಳುತ್ತಿರುವ ಈ ಸಂದರ್ಭದಲ್ಲಿ, ಇದು ಆಗಿಬಿಟ್ಟರೆ "ತಮ್ಮವರ" ಅಸ್ತಿತ್ವವೇ ಇಲ್ಲವಾಗುತ್ತದೆಂಬ ಭಯದಿಂದ "ಇಲ್ಲ, ಇಲ್ಲ, ಇವೆರಡೂ ಒಂದೇ" ಎಂದು ಸಾಧಿಸಹೊರಟಿರುವ ಚಿದಾನಂದ ಮೂರ್ತಿಯವರ ನಾಟಕಕ್ಕೆ ತೆರೆ ಬೀಳಲೇಬೇಕು ಮತ್ತು ಅವರ ಅಪ್ರಸ್ತುತ. ದುರುದ್ದೇಶದ ದುರಾಶಯ ಭಾಷಣದ ಬಗ್ಗೆ ಶರಣ ಸಾಹಿತ್ಯ ಪರಿಷತ್ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

—ಎ. ಜಿ. ವಿರುಪಾಕ್ಷಪ್ಪ, ಅಂಕಣಕಾರರು
"ಜನತಾ ವಾಣಿ" ಕನ್ನಡ ದೈನಿಕ, ದಾವಣಗೆರೆ.

[ಆಶಯ ಭಾಷಣ. ವಿಮರ್ಶಾಗೋಷ್ಠಿ, 24, 25 ಮೇ, 1996, ಬೆಂಗಳೂರು.]

॥ ಜೈ ಬಸವಾ ॥

ರಾಷ್ಟ್ರಕಲ್ಯಾಣ ವಿದ್ಯಾರ್ಥಿ ಗಣ ಸೇರಿ
ರಾಷ್ಟ್ರದ ಕಲ್ಯಾಣಕ್ಕಾಗಿ ಶ್ರಮಿಸಲು ಕರೆ

ಆತ್ಮೀಯ ವಿದ್ಯಾರ್ಥಿಗಳೇ, ಯುವಮಿತ್ರರೇ

ತಮಗೆಲ್ಲ ಹೃತ್ಪೂರ್ವಕ ಶರಣುಗಳು.

ಮಾನವನ ಆಯುಷ್ಯದಲ್ಲಿ ವಿದ್ಯಾರ್ಥಿ ಜೀವನದ ಘಟ್ಟ ಮತ್ತು ತಾರುಣ್ಯ ಬಲು ಮಹತ್ವಪೂರ್ಣ. ವ್ಯಕ್ತಿಯ ಜೀವನದ ನೀಲನಕ್ಷೆ ಸಿದ್ಧವಾಗುವುದೇ ವಿದ್ಯಾರ್ಥಿ ಜೀವನದ ಸಮಯದಲ್ಲಿ. ನಮ್ಮ ದೇಶದಲ್ಲಿ ಇಂದು ಯುವಶಕ್ತಿ ಬಹಳಷ್ಟು ಅಪವ್ಯಯವಾಗುತ್ತಿದೆ. ಕ್ರಿಯಾಶೀಲರಾಗಿ ವಿಧಾಯಕ ಕಾರ್ಯದಲ್ಲಿ ತೊಡಗಬೇಕಾದ ನಮ್ಮ ವಿದ್ಯಾರ್ಥಿ ಬಂಧುಗಳು, ಯುವಜನರು ದುಶ್ಚಟ – ದುರ್ಗುಣಗಳಿಗೆ ಬಲಿಯಾಗುತ್ತಿದ್ದಾರೆ.

ಹಿಂದೆ ಗುರು ಮುಂದೆ ಗುರಿ ಸಾಗಿತ್ತಂದು ರಣವೀರರ ದಂಡು.
ಹಿಂದೆ ಗುರುವಿಲ್ಲ ಮುಂದೆ ಗುರಿಯಿಲ್ಲ
ಸಾಗಿದೆ ಇಂದು ರಣಹೇಡಿಗಳ ಹಿಂಡು

ಎಂಬ ಕವಿವಾಣಿ ಇಂದು ಬಲು ಅರ್ಥಪೂರ್ಣವಾಗುತ್ತಿದ್ದು ಭಾರತೀಯ ಯುವಜನಾಂಗದ ವಿಷಾದನೀಯ ಚಿತ್ರಣ ನೀಡುತ್ತಲಿದೆ. ಆದ್ದರಿಂದ ಹಿಂದೆ ಆದರ್ಶ ಗುರುವಿನ ಮಾರ್ಗದರ್ಶನ ಇರಿಸಿಕೊಂಡು ಮುಂದೆ ನಾವಿಂದು ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯ ಧ್ಯೇಯ ಹೊತ್ತು ಮುನ್ನಡೆಯಬೇಕಾಗಿದೆ.

ಸೃಷ್ಟಿಕರ್ತನಾದ ದೇವನು ಸುಂದರವಾದ ಸೃಷ್ಟಿಯನ್ನು ನಿರ್ಮಾಣ ಮಾಡಿದ್ದಾನೆ. ಸೃಷ್ಟಿಗೆ ಕಿರೀಟ ಪ್ರಾಯವಾಗಿ ಮಾನವನನ್ನು ಸೃಷ್ಟಿಸಿದ್ದಾನೆ. ಈ ಮಾನವನಲ್ಲಿ ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿಗಳನ್ನು ಸಂಗಮಗೊಳಿಸಿದ್ದಾನೆ. ಆದರೆ ಮನುಷ್ಯ ಅಜ್ಞಾನಿಯಾಗಿ ದೇವರನ್ನು ಮರೆತಿದ್ದು, ದೇವರ ಇಚ್ಛೆಗೆ ವಿರುದ್ಧವಾಗಿ ಭಾಷೆ ಜಾತಿ ಮತ ಪಂಥ ವರ್ಗ ವರ್ಣ ಎಂಬ ಭೇದಗಳನ್ನು ನಿರ್ಮಾಣ ಮಾಡಿಕೊಂಡಿದ್ದಾನೆ. ಮಾನವ ನಿರ್ಮಿತ ಈ ಕೃತಕ ಅಡ್ಡಗೋಡೆಗಳನ್ನು ದಾಟಿ ಇಂದು ವಿಶಾಲ ಮನೋಭಾವದ ಚಿಂತನಶಕ್ತಿಯುಳ್ಳ ಜನಾಂಗ ನಿರ್ಮಾಣ ಮಾಡಬೇಕಾಗಿದೆ. ಈ ದಿಶೆಯಲ್ಲಿ ಬುದ್ಧ, ಮಹಾವೀರ, ಬಸವಣ್ಣ, ಶಿವಾಜಿ, ಸ್ವಾಮಿ ವಿವೇಕಾನಂದ, ಮಹಾತ್ಮಾ ಗಾಂಧೀಜಿ, ಅರವಿಂದ, ಡಾ॥ ಅಂಬೇಡ್ಕರ್, ರಾಷ್ಟ್ರವೀರರಾದ ಸಾವರಕರ್, ಆಜಾದ್, ಭಗತ್‌ಸಿಂಗ್, ಕೆಳದಿ ಶಿವಪ್ಪನಾಯಕ, ಕೆಳದಿ ಚನ್ನಮ್ಮಾಜಿ, ಕಿತ್ತೂರು ಚೆನ್ನಮ್ಮ, ಸುಭಾಷ್‌ಚಂದ್ರ ಬೋಸ್ ಮುಂತಾದವರು ಸ್ಫೂರ್ತಿಯ ಕುಂಡಗಳಾಗಿ, ಮಾದರಿಯಾಗಿ ನಿಲ್ಲುತ್ತಾರೆ. ವಿಶ್ವಗುರು ಬಸವಣ್ಣನವರು ವ್ಯಕ್ತಿಯ ಜೀವನ, ಸಮಾಜ ಜೀವನ ಎರಡೂ ಸಮಗ್ರವೂ, ಪರಿಪೂರ್ಣವೂ ಆಗಬೇಕೆಂದು ಚಿಂತನೆ ಮಾಡಿದವರು. 'ಕಲ್ಯಾಣ'–ಲೇಸು, ಅವರ ಗುರಿಯಾಗಿದ್ದು ವ್ಯಕ್ತಿ ಕಲ್ಯಾಣ, ಆತ್ಮ ಕಲ್ಯಾಣ, ಸಮಾಜ ಕಲ್ಯಾಣ, ರಾಷ್ಟ್ರ ಕಲ್ಯಾಣ, ವಿಶ್ವ ಕಲ್ಯಾಣ ಎಂಬ ಐದು ರಂಗಗಳಲ್ಲಿ ಕಲ್ಯಾಣವನ್ನು ತರಲು ಬಯಸಿದರು. ಆದ್ದರಿಂದ ಅವರ ಜೀವನ, ತತ್ತ್ವ, ಸಿದ್ಧಾಂತ, ಸಂದೇಶಗಳನ್ನು ಮೂಲ ಸ್ಫೂರ್ತಿಯನ್ನಾಗಿ ಇರಿಸಿಕೊಂಡು ಇಂದು ನಾವು ಉದಾತ್ತ ಧ್ಯೇಯದೆಡೆಗೆ ಮುನ್ನಡೆಯಬೇಕಾಗಿದೆ.

ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ಪಾತ್ರ ಬಹುಮುಖ್ಯ. ಎಮರ್ಸ್‌ನ್ ಹೇಳುವಂತೆ "ಒಂದು ದೇಶದ ಭವ್ಯತೆ ವ್ಯಕ್ತವಾಗುವುದು ಅದು ಕಟ್ಟುವ ಕಾಂಕ್ರೀಟ್ ಕಾಡು, ನಗರಗಳು, ಕೈಗಾರಿಕೆ, ಬೆಳೆಸುವ ಜನಸಂಖ್ಯೆಯ ಮೇಲಲ್ಲ, ಎಂತಹ ಜನಾಂಗವನ್ನು ನಿರ್ಮಾಣ ಮಾಡುತ್ತದೆ ಎಂಬುದರ ಮೇಲಿದೆ." ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಶಕ್ತಿ ಮತ್ತು ಯುವ ಶಕ್ತಿಯನ್ನು ಸಂಘಟಿಸಿ, ಸಂಸ್ಕರಿಸುವ ದೃಷ್ಟಿಯಿಂದ "ರಾಷ್ಟ್ರಕಲ್ಯಾಣ ವಿದ್ಯಾರ್ಥಿ ಗಣ" ಎಂಬ ಸಂಘಟನೆಯು ರಾಷ್ಟ್ರೀಯ ಬಸವ ದಳದ ಅಂಗವಾಗಿ ದಿ. 14–1–1996 ರಂದು ಸ್ಥಾಪಿಸಲ್ಪಟ್ಟಿದೆ. ಇದರ ಧ್ಯೇಯವೇ ಜಾತಿ ವರ್ಣ ವರ್ಗ ರಹಿತ ಧರ್ಮ ಸಹಿತ ಕಲ್ಯಾಣ (ದೈವೀ) ರಾಜ್ಯ ನಿರ್ಮಾಣ.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವ ನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಕೂಡಲ ಸಂಗಮದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯ

ಎಂಬ ಬಸವವಾಣಿಯಂತೆ ಇವರು ಯಾರು ? ಎಂದು ಜಾತಿ, ವರ್ಗ, ಉದ್ಯೋಗಗಳ ತಳಹದಿಯ ಮೇಲೆ ವಿಂಗಡಿಸದೆ ವ್ಯಕ್ತಿಯ ಜಾತಿ, ಅಂತಸ್ತು, ಕೈಗೊಂಡ ಉದ್ಯೋಗ ಯಾವುದೇ ಇರಲಿ ಎಲ್ಲರನ್ನೂ ನಮ್ಮವರು ಎಂದು ಭಾವಿಸುವ ಮನೋಭಾವ ಬೆಳೆಸಬೇಕಾಗಿದೆ. **ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ** ಯವರ ಮಾರ್ಗದರ್ಶನದಲ್ಲಿ ಬೆಳೆಯುತ್ತಿರುವ ಈ ಸಂಘಟನೆಯ ಉದ್ದೇಶ ಹೀಗಿದೆ :

1. ವಿದ್ಯಾರ್ಥಿಗಳು ನಮ್ಮ ದೇಶದಲ್ಲಿ ಎದುರಿಸುತ್ತಿರುವ ಸಮಸ್ಯೆ ಕುರಿತು ಚಿಂತನೆ ಮಾಡಲು, ಸ್ಪಂದಿಸಲು, ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವುದು.
2. ಪ್ರತಿಭಾವಂತ ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನು ಗುರುತಿಸಿ, ಪ್ರೋತ್ಸಾಹಿಸುವುದು, ಸತ್ಕರಿಸುವುದು.
3. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಅವರಲ್ಲಿರುವ ಸುಪ್ತ ಪ್ರತಿಭೆ ವಿಕಾಸವಾಗಲು ಅವಕಾಶ ಕಲ್ಪಿಸುವುದು.
4. ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗಾಗಿ ಜಿಲ್ಲೆ, ತಾಲ್ಲೋಕು, ಗ್ರಾಮ ಮಟ್ಟಗಳಲ್ಲಿ ತರಬೇತಿ ಕಮ್ಮಟಗಳನ್ನು ಏರ್ಪಡಿಸುವುದು.
5. ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಸ್ಥಾನಗಳಿಗೆ ಅಧ್ಯಯನ ಪ್ರವಾಸ ಕೈಗೊಳ್ಳುವುದು.
6. ಸಚ್ಚಾರಿತ್ರವಂತ, ಸುಸಂಸ್ಕೃತ ನವ ಜನಾಂಗ ನಿರ್ಮಾಣ ಮಾಡಿ ಸಮೃದ್ಧ ಸುಭದ್ರ, ಸಂತೃಪ್ತ ರಾಷ್ಟ್ರ ನಿರ್ಮಾಣಕ್ಕೆ ಪ್ರಯತ್ನಿಸುವುದು.

ಇಂಥ ಸಂಘಟನೆಯ ಶಾಖೆಗಳನ್ನು ಎಲ್ಲೆಡೆ ತೆರೆಯಲು ಪ್ರಯತ್ನಿಸಬೇಕಾಗಿ ಕೋರುತ್ತೇವೆ. ಕೇಂದ್ರ ಸಂಸ್ಥೆಯ ವಿಳಾಸ ಕೊಡಲಾಗಿದೆ. ಇಲ್ಲಿಗೆ ಸಂಪರ್ಕಿಸಿ ಮಾಹಿತಿ ಪಡೆಯಿರಿ.

ರಾಷ್ಟ್ರಕಲ್ಯಾಣ ವಿದ್ಯಾರ್ಥಿ ಗಣ **ದೂರವಾಣಿ : 3325335**
ಬಸವ ಮಂಟಪ, 2035, 20 ನೇ ಮೇನ್
2 ನೇ ಬ್ಲಾಕು, ರಾಜಾಜಿನಗರ ಬೆಂಗಳೂರು–560010

ಶಿವಕುಮಾರ ಡಾಕುಳಗೆ	**ಜಗದೀಶ ಐಹೊಳ್ಳಿ**	**ಕರಿಬಸಪ್ಪ ಕೋರಿಶೆಟ್ಟರು**
ಕಾರ್ಯಾಧ್ಯಕ್ಷರು	ಪ್ರಧಾನ ಸಂಚಾಲಕ	ಪ್ರಧಾನ ಕಾರ್ಯದರ್ಶಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥



ದಿ. 30–6–1995 ರಂದು ಲಿಂಗೈಕ್ಯರಾದ
ಧರ್ಮಕ್ರಾಂತಿಯ ಧೀರಯೋಗಿ, ಪ್ರವಚನ ಪಿತಾಮಹ
ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು

ಲಿಂಗಾನಂದ ಸ್ವಾಮೀಜಿ ಅವರಿಗೆ

"ಕಲ್ಯಾಣ ಕಿರಣ"ದ ಶ್ರದ್ಧಾಂಜಲಿ

ಬಸವಣ್ಣನ ನಿಜತತ್ವವ ಮತ್ತೆ ಬಿತ್ತಿ ಬೆಳೆದಿರಿ
ಎನಿತೆನಿತೋ ಜೀವಗಳಲಿ ಸ್ಫೂರ್ತಿಕಿಡಿಯ ಹಚ್ಚಿದಿರಿ ॥

ಎನಿತು ಪುಣ್ಯ ನಮ್ಮದಿತ್ತೊ ಇಂಥ ಗುರುವ ಪಡೆಯಲು
ಶಿವರಕ್ಷೆಯ ಅಭಯ ಹೊತ್ತು ದಿವ್ಯ ಪಥದಿ ನಡೆಯಲು ॥

ಅಡಿಯ ಇಟ್ಟು ನಡೆದಲ್ಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆವಿರಿ ॥

ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸಚ್ಚಿದಾನಂದನ ಶುಭ ರಕ್ಷೆಯು ತಮಗಿದೆ ॥

16 ನೇ ಪುಟದಿಂದ ಮುಂದುವರೆದದ್ದು--

ಸಮುದಾಯ ಅನುಸರಿಸುತ್ತಿದೆ ಅಥವಾ ಆರಾಧಿಸುತ್ತದೆ ಎಂದ ಮಾತ್ರಕ್ಕೆ ಆ ವಿಶ್ವಮಾನವ ಪ್ರವಾದಿಯನ್ನು ಆ ಸಮುದಾಯಕ್ಕೆ ಮಾತ್ರ ಸೇರಿದವನೆಂದು ಭಾವಿಸುವುದು ಶುದ್ಧ ತಪ್ಪು. ದಲಿತರು ವಿಶ್ವಮಾನವರಾಗಲು ಪ್ರಯತ್ನಿಸಬೇಕಲ್ಲದೆ ಜಾತಿ- ಧರ್ಮಗಳನ್ನು ಖಂಡಿಸುವ ಅವರೇ ತಮಗೆ ತಮಗೆ ಅರಿವಿಲ್ಲದಂತೆ ''ಜಾತಿ'' ಸಮರ್ಥಕರಾಗಬಾರದು. ಬಾಬಾಸಾಹೇಬರನ್ನು ನಮ್ಮವರೆಂದು ಪ್ರೀತಿಸುವ ದಲಿತರು, ಬಸವೇಶ್ವರರೂ ಸಹ ಧಾರ್ಮಿಕ, ಸಾಮಾಜಿಕ ನೆಲೆಯಲ್ಲಿ ತಮ್ಮ ಉದ್ಧಾರಕ್ಕೆ ಹೋರಾಡಿದವರು ಎಂಬುದನ್ನು ಅರಿಯದವರೇನಲ್ಲ. ಬುದ್ಧ, ಬಸವಣ್ಣ ಮತ್ತು ಬಾಬಾಸಾಹೇಬರು ಸಮಸ್ತ ಮಾನವ ಕುಲಕ್ಕೆ ಸೇರಿದ ಸಮಾಜ ಸುಧಾರಕರು, ಅವರ ಮೇರು ವ್ಯಕ್ತಿತ್ವಕ್ಕೆ ಜಾತಿ ಚೌಕಟ್ಟನ್ನು ತುರುಕುವ ಕೆಲಸ ಯಾರು ಮಾಡಿದರೂ ಅದು ಖಂಡನೀಯ. ಅವರುಗಳ ಹೆಸರಿನಲ್ಲಿ 'ಜಾತಿ' ರಾಜಕಾರಣ ಮಾಡುವುದಾಗಲಿ ಅಂಥದ್ದೇ ಉದ್ದೇಶಗಳನ್ನಿರಿಸಿಕೊಂಡು ವಿರೋಧ ಮಾಡುವುದಾಗಲಿ ಸಾಧುವಲ್ಲ.

--ಕನ್ನಡಪ್ರಭ - 29-3-96

ಮಾತೆಗೆ ಮಂಗಳ

ಜಯ ಜಯ ಮಂಗಳ ಜಯ ಶುಭ ಮಂಗಳ
ಮಾತೆ ಮಹಾದೇವಿ ತಾಯಿಗೆ
ಜಗದ್ಗುರು ಮಾತೆ ಮಹಾದೇವಿ ತಾಯಿಗೆ

೧. ಚಿನ್ಮೂಲಾದ್ರಿಯ ಚಿತ್ಕಳೆಯಾಗಿ ಉದಿಸಿ
ಜಗನ್ಮಾತೆ ಅಕ್ಕನ ಅವತಾರ ಧರಿಸಿ
ಗುರು ಬಸವಣ್ಣನ ಕೀರ್ತಿಯ ಮೆರೆಸಿದ ಮಾತೆ ನಿಮಗೆ

೨. ಹೆಣ್ಣು ಕೀಳು ಎಂಬುವರ ಕಣ್ಣು ತೆರೆಸಿದ ಮಾತೆ
ಹೆಣ್ಣು ಮಕ್ಕಳಿಗೆಲ್ಲ ಸ್ಫೂರ್ತಿದಾತೆ
ಬಸವ ಸುತ ಲಿಂಗಾನಂದರ ಕರಕಮಲ ಸಂಜಾತೆ ನಿಮಗೆ

೩. ಜಯ ಜಯ ಎನ್ನುತ ಹಾಡಿ ಹರಸಿರಿ
ಜಯ ಜಯ ಎನ್ನುತ ಮಂಗಲ ಪಾಡಿರಿ
ವರಗುರು ಬಸವೇಶನ ನೆಚ್ಚಿನ ಕುವರಿಗೆ
ಸಚ್ಚಿದಾನಂದನ ವರಸತಿ ಮಾತೆ ಮಹಾದೇವಿ ನಿಮಗೆ

ಜಯ ಜಯ ಮಂಗಳ, ಜಯ ಶುಭ ಮಂಗಳ
ಮಾತೆ ಮಹಾದೇವಿ ತಾಯಿಗೆ
ಜಗದ್ಗುರು ಮಾತೆ ಮಹಾದೇವಿ ತಾಯಿಗೆ

ರಚನೆ: ಶೋಭಾದೇವಿ ಪರಮಾದಿ. ಹುಬ್ಬಳ್ಳಿ.

ಮುಖ್ಯಮಂತ್ರಿಗಳ ಮನವಿಗೆ ರಾಷ್ಟ್ರೀಯ ಬಸವ ದಳದ ಪ್ರತಿಕ್ರಿಯೆ

ಶ್ರೀಯುತ. ಜೆ. ಹೆಚ್. ಪಟೇಲರು — ದಿ. 9-7-1996
ಸನ್ಮಾನ್ಯ ಮುಖ್ಯಮಂತ್ರಿಗಳು — ವಾಸ್ತವ್ಯ: ಬೆಂಗಳೂರು
ಕರ್ನಾಟಕ ಸರಕಾರ
ಬೆಂಗಳೂರು.

ಇವರಿಗೆ ಶುಭಹಾರೈಕೆಗಳು

ವಿಷಯ: ಬಸವೇಶ್ವರ ವಿಶ್ವವಿದ್ಯಾಲಯ ಎಂದು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡಲು ಆಗ್ರಹಿಸಿ ನಡೆಸುತ್ತಿರುವ ಚಳುವಳಿಯನ್ನು ತಾತ್ಕಾಲಿಕವಾಗಿ ಕೈಬಿಡಲು ಮಾನ್ಯ ಮುಖ್ಯ ಮಂತ್ರಿಯವರು ಮಾಡಿಕೊಂಡ ಮನವಿಗೆ ರಾಷ್ಟ್ರೀಯ ಬಸವ ದಳದ ಪ್ರತಿಕ್ರಿಯೆ.

1996ರ ಜನವರಿ 21 ರಂದು ಮನವಿ ಸಲ್ಲಿಸಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ 12ನೆಯ ಶತಮಾನದ ಶ್ರೇಷ್ಠ ಸಮಾಜ ಸುಧಾರಕ ಬಸವಣ್ಣನವರ ಹೆಸರನ್ನು ಇಡಲು ಕೋರಿ, ನಂತರ ವಿವಿಧ ಹಂತದಲ್ಲಿ ಚಳುವಳಿ ಮಾಡಲಾಗುತ್ತಿದೆಯಷ್ಟೆ. ತಾವು ಆಶಾದಾಯಕ ಹೆಜ್ಜೆಯನ್ನು ಇಡುವಂತೆ ದಿ. 7-6-1996 ಸಮಾಲೋಚನಾ ಸಭೆ ಕರೆದಿರಿ. ಇನ್ನೊಂದು ಸಭೆಯನ್ನು 12-6-96ರಂದು ಕರೆಯುವುದಾಗಿ ಹೇಳಿದ್ದಿರಿ. ಆದರೆ ಈ ದಿಶೆಯಲ್ಲಿ ನ್ಯಾಯಯುತ ನಿರ್ಧಾರ ಕೈಗೊಳ್ಳುವಲ್ಲಿ ವಿಳಂಬ ಮಾಡುತ್ತಿರುವುದನ್ನು ಗಮನಿಸಿ ಮನನೊಂದು ಬೆಂಗಳೂರಿನಲ್ಲಿ ದಿ. 2-7-96 ರಂದು ನಡೆದ ಪದಾಧಿಕಾರಿಗಳ ಸಭೆಯಲ್ಲಿ ದಿನಾಂಕ 8-7-96ರಿಂದ ಸರದಿ ಉಪವಾಸ ಹಾಗೂ ಜೇಲ್ ಭರೋ ಕಾರ‍್ಯಕ್ರಮವನ್ನು ಕರ್ನಾಟಕದಾದ್ಯಂತ ಸುಮಾರು 25 ಕಡೆಗಳಲ್ಲಿ ಪ್ರಾರಂಭಿಸುವ ಯೋಜನೆಯನ್ನು ಹಾಕಿಕೊಳ್ಳಲಾಯಿತು.

ವಿಶ್ವಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣಶುದ್ಧ ಪಂಚಮಿಯಂದು (2-7-1196). ಈ ವರ್ಷದ ಬಸವ ಪಂಚಮಿಗೆ ಸರಿಯಾಗಿ 800 ವರ್ಷ ತುಂಬುತ್ತಿದೆ. 800ನೆಯ ಲಿಂಗೈಕ್ಯ ವರ್ಷದ ಮಹತ್ವಪೂರ್ಣ ಸನ್ನಿವೇಶದಲ್ಲೂ ಅಂಥ ಮಹಾನ್ ತ್ಯಾಗಿಯ ಹೆಸರನ್ನು ವಿಶ್ವವಿದ್ಯಾಲಯಕ್ಕೆ ಇಡುವಂಥ ನ್ಯಾಯೋಚಿತ ನಿರ್ಧಾರ ತೆಗೆದುಕೊಳ್ಳದ ಕರ್ನಾಟಕ ಸರಕಾರದ ಉದಾಸೀನತೆಯನ್ನು ಪ್ರತಿಭಟಿಸಿ, 800 ನೆಯ ಬಸವ ಪಂಚಮಿಯ ದಿ. 19-8-1996 ರಂದು ಅಸಂಖ್ಯಾತ ಶರಣ. ಶರಣೆಯರು ಜೇಲ್ ಭರೋ ಚಳುವಳಿಯನ್ನು ಹಮ್ಮಿಕೊಂಡು ಜೇಲ್‌ನ್ನು

ತುಂಬಬೇಕೆಂದು ಕಾರ್ಯಕ್ರಮ ರೂಪಿಸಲಾಯಿತು. ಬೆಂಗಳೂರು, ಗುಲಬರ್ಗಾ, ಬೀದರ, ಚಿತ್ರದುರ್ಗ ಮುಂತಾದ ಕಡೆಯಿಂದ ಬಂದ ಪ್ರತಿನಿಧಿಗಳು ತಮ್ಮ ಸಂದರ್ಶನವನ್ನು ದಿ. 4-7-1996ರಂದು ಕೋರಿದರು, ಅಂದು ಲಭ್ಯವಾಗಲಿಲ್ಲ. ದಿ. 5-7-1996ರಂದು ಕಾರ್ಯದ ಒತ್ತಡದ ಮಧ್ಯದಲ್ಲಿಯೂ ಸಂದರ್ಶನ ನೀಡಿದಿರಿ. ಈಗ ಶಾಸನ ಸಭೆಯ ಅಧಿವೇಶನ ನಡೆಯುತ್ತಿರುವುದರಿಂದ ಬಹಳ ಒತ್ತಡವಿದ್ದು ಪ್ರಾತಿನಿಧಿಕ ಸಭೆ ಕರೆಯಲು ಆಗುತ್ತಿಲ್ಲವೆಂದು, ಅಸೆಂಬ್ಲಿ ಮುಗಿದ ತಕ್ಷಣವೇ ವಿವಿಧ ಸಂಘಟನೆಗಳವರನ್ನು ಆಹ್ವಾನಿಸಿ ಈ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದೆಂದು, ಅಲ್ಲಿಯವರೆಗೆ ಚಳುವಳಿ ಬೇಡವೆಂದು ತಾವು ಹೇಳಿದಿರಿ. ನಿಮ್ಮ ಮಾತಿನಲ್ಲಿರುವ ಸತ್ಯಾಂಶ, ಕಳಕಳಿ ಗುರುತಿಸಿ, ದಿ. 8-7-96 ರಂದು 25 ಕಡೆ ಆರಂಭಿಸಬೇಕೆಂದಿದ್ದ ಸರತಿ ಉಪವಾಸ ಸತ್ಯಾಗ್ರಹ ಮತ್ತು ಬಸವ ಲಿಂಗೈಕ್ಯ ದಿನ ದಿ. 19-8-96ರಂದು ಹಮ್ಮಿಕೊಂಡಿದ್ದ ಬೃಹತ್ ಜೇಲ್ ಭರೋ ಚಳುವಳಿ ಮುಂದೂಡಲಾಗಿದೆ. ತಾವು ಮೊನ್ನೆ ರೇಡಿಯೋ ಮತ್ತು ದೂರದರ್ಶನದ ಮೂಲಕ, ನಿನ್ನೆ ಪತ್ರಿಕೆಗಳ ಮೂಲಕ ಇದೇ ವಿಷಯದಲ್ಲಿ ಮಾಡಿಕೊಂಡ ಮನವಿಯನ್ನು ಗಮನಿಸಿದ್ದೇವೆ. ಆದ್ದರಿಂದ ಕೆಳಕಂಡಂತೆ ನಿರ್ಧಾರ ತೆಗೆದುಕೊಳ್ಳಲಾಗಿದೆ.

1. ವಿಧಾನ ಸಭಾ ಅಧಿವೇಶನ ಮುಗಿದ ತಕ್ಷಣವೇ ವಿವಿಧ ಸಂಘಟನೆಗಳವರ ಸಭೆ ಕರೆಯಲು ಮುಖ್ಯಮಂತ್ರಿಗಳು ಆಸಕ್ತಿ ವಹಿಸಿರುವ ಕಾರಣ ದಿ. 8-7-96ರಂದು ಆರಂಭಿಸಬೇಕೆಂದಿದ್ದ ಸರದಿ ಉಪವಾಸ ಸತ್ಯಾಗ್ರಹ ಮುಂದೂಡುವುದು.

2. 800ನೆಯ ಬಸವ ಪಂಚಮಿಯು ಅಂದರೆ ಬಸವಣ್ಣನವರ 800ನೆಯ ಲಿಂಗೈಕ್ಯದಿನವು ದಿ. 19-8-96ರಂದು ಬಂದಿದ್ದು, ಅಂದು ಕೈಗೊಳ್ಳಲು ಯೋಜಿಸಿದ್ದ ಜೇಲ್ ಭರೋ ಕಾರ್ಯಕ್ರಮವನ್ನು ಮುಂದೂಡುವುದು.

3. 1996ನೆಯ ವರ್ಷವು ಬಸವಣ್ಣನವರ ಲಿಂಗೈಕ್ಯ ಅಷ್ಟಶತಮಾನೋತ್ಸವ ವರ್ಷವಾದ ಕಾರಣ ಇದರ ಮಹತ್ವವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಅವರ ಸಚಿವ ಸಂಪುಟದವರಿಗೆ ಮನವರಿಕೆ ಮಾಡಿಕೊಟ್ಟು, ಆ ದಿನಾಂಕದೊಳಗೆ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರನ್ನಿಟ್ಟರೆ, ಬಸವ ಪಂಚಮಿಯಂದು ಕರ್ನಾಟಕ ಸರಕಾರವನ್ನು ಅಭಿನಂದಿಸುವ ವಿಶೇಷ ಕಾರ್ಯಕ್ರಮವನ್ನು ಬಸವ ಪಂಚಮಿಯ ಆಚರಣೆಯೊಂದಿಗೆ ಹಮ್ಮಿಕೊಳ್ಳುವುದು.

4. ಶ್ರೇಷ್ಠ ಸಮಾಜ ಸುಧಾರಕ, ಮಾನವತಾವಾದಿ, ದಲಿತೋದ್ಧಾರಿ, ಸ್ತ್ರೀಕುಲ ವಿಮೋಚಕ ಬಸವೇಶ್ವರರ ಹೆಸರನ್ನು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವ ಪಂಚಮಿ (ದಿ. 19-8-96) ಯೊಳಗೆ ಇಡದೆ ಇದ್ದರೆ ಅಂದು ಕರ್ನಾಟಕದಾದ್ಯಂತ ನಡೆಯುವ

ಧಾರ್ಮಿಕ ಸಮಾರಂಭಗಳಲ್ಲಿ ಪ್ರತಿಜ್ಞಾಬದ್ಧರಾಗುವುದು, ಪೂಜೆ-ಪ್ರಾರ್ಥನೆ ಸಲ್ಲಿಸಿ, "ಈವರೆಗೆ ಅಂದರೆ ದಿ.20-4-96 ರಿಂದ 4 ಬಾರಿ (20-4-96, 11-5-96, 27-5-96, 5-7-96) ಸ್ವತಃ ಮುಖ್ಯಮಂತ್ರಿಗಳು, ಹಲವಾರು ಬಾರಿ ಇನ್ನಿತರ ಮಂತ್ರಿಗಳು ಮಾಡಿಕೊಂಡ ಮನವಿ, ನೀಡಿದ ಆಶ್ವಾಸನೆಯನ್ನು ನಂಬಿ, ಮೋಸಹೋಗಿ, ಧರ್ಮಗುರು ಬಸವಣ್ಣನವರಿಗೆ ಕೊಟ್ಟ ಮಾತು ತಪ್ಪಿದ್ದಕ್ಕೆ ಶರಣರು ದಿ. 20-8-96ರಿಂದ ಪ್ರಾಯಶ್ಚಿತ್ತ ಸರತಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸುವುದು. ಜೇಲ್ ಭರೋ ಕಾರ್ಯಕ್ರಮದ ದಿನಾಂಕವನ್ನು ಬಸವ ಪಂಚಮಿಯಂದು ಘೋಷಿಸಿ ಅಂದು ಪ್ರತಿಜ್ಞಾಬದ್ಧರಾಗಿ ನಿಗದಿ ಮಾಡಿದ ದಿನಾಂಕದಂದು ತಂಡೋಪತಂಡವಾಗಿ ಜೇಲ್‌ನ್ನು ಸೇರುವುದು.

ಈ ನಿರ್ಣಯಗಳೊಡನೆ ರಾಷ್ಟ್ರೀಯ ಬಸವ ದಳವು ಶಾಸನಸಭೆಯ ಅಧಿವೇಶನ ಮುಗಿಯುವವರೆಗೆ ತೀವ್ರತರ ಚಳುವಳಿ ಪ್ರಾರಂಭಿಸದೆ ಇರಲು ನಿರ್ಧರಿಸಿದೆ. ಇನ್ನಿತರ ಕಡೆ ಆರಂಭಿಸಬೇಕೆಂದಿದ್ದ ಸರತಿ ಉಪವಾಸ ಸತ್ಯಾಗ್ರಹ ಮುಂದೂಡಿ, ಗುಲಬರ್ಗಾ-ಬೀದರ ನಗರಗಳಲ್ಲಿ ಅವ್ಯಾಹತವಾಗಿ ಅಖಂಡವಾಗಿ ನಡೆದಿರುವ ಸರತಿ ಉಪವಾಸ ಸತ್ಯಾಗ್ರಹವನ್ನು ಹಾಗೆಯೇ ಮುಂದುವರಿಸಲು ನಿರ್ಧರಿಸಿದೆ.

ದಿ|| ಮಾಜಿ ಮುಖ್ಯಮಂತ್ರಿ ಶ್ರೀ ಗುಂಡೂರಾವರವರು ಬಸವ ಜಯಂತಿ ಉತ್ಸವಕ್ಕೆ ರಜೆ ನೀಡಿ, ಮಾಜಿ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು, ನಾರಾಯಣಪುರ ಜಲಾಶಯಕ್ಕೆ 'ಬಸವ ಸಾಗರ' ಎಂದು ಹೆಸರಿಟ್ಟು, ತಮ್ಮ ಹೆಸರನ್ನು ಜನಮನದಲ್ಲಿ ಅಚ್ಚೊತ್ತಿಸಿಕೊಂಡು ಬಸವಾನುಯಾಯಿಗಳ ಅಭಿಮಾನಕ್ಕೆ ಪಾತ್ರರಾದಂತೆ ತಾವು ಸಹ 800ನೆಯ ಲಿಂಗೈಕ್ಯ ವರ್ಷದ ಸಮಯದಲ್ಲಿ ಬಸವಣ್ಣನವರ ಕಾರ್ಯಕ್ಷೇತ್ರ ಗುಲಬರ್ಗಾದಲ್ಲಿರುವ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯವೆಂದು ಹೆಸರಿಟ್ಟು ಕೀರ್ತಿಶಾಲಿಗಳಾಗಬೇಕೆಂದು ಕೋರುತ್ತೇವೆ.

ಯಾವುದೇ ಬೇಡಿಕೆಯಲ್ಲಿರುವ ಔಚಿತ್ಯ, ನ್ಯಾಯ ಮುಂತಾದ ಅಂಶಗಳನ್ನು ಗುರುತಿಸಿ ಸಕಾಲದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು ರಾಜ್ಯದ ಜವಾಬ್ದಾರಿಯನ್ನು ಹೊತ್ತಿರುವ ತಮ್ಮಂತಹ ಮುತ್ಸದ್ದಿಗಳ ಆದ್ಯ ಕರ್ತವ್ಯ ಎಂದು ಹೇಳಿ ಈ ಪ್ರತಿಕ್ರಿಯಾ ಪತ್ರಕ್ಕೆ ವಿರಾಮ ನೀಡುತ್ತೇವೆ.

ಶುಭಹಾರೈಕೆಗಳೊಡನೆ,

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠಾಧ್ಯಕ್ಷೆ
ಕಾರ್ಯಾಧ್ಯಕ್ಷೆ, ರಾಷ್ಟ್ರೀಯ ಬಸವ ದಳ (ಕೇಂದ್ರ ಸಮಿತಿ)

|| ಓಂ ಶ್ರೀ ಗುರು ಬಸವ ಲಿಂಗಾಯನಮಃ ||

ಬಸವ ಭಾಸ್ಕರ

(ವಿಶ್ವಗುರು ಬಸವಣ್ಣನವರ ಸಂಕ್ಷಿಪ್ತ ಜೀವನ ಚರಿತ್ರೆ)

ಬಸವನ ಮೂರ್ತಿಯೇ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೇ ಜ್ಞಾನಕ್ಕೆ ಮೂಲ
ಬಸವಾ ಬಸವಾ ಎಂಬುದೇ ಭಕ್ತಿಕಾಣಾ
ಕಪಿಲಸಿದ್ಧಮಲ್ಲಿಕಾರ್ಜುನಾ.

- ಶ್ರೀ ಸಿದ್ಧರಾಮೇಶ್ವರರು

ಕರ್ತನೆಂಬ ಕಲಾವಿದ ಮನುಕುಲದ ಇತಿಹಾಸವೆಂಬ ಭಿತ್ತಿಯ ಮೇಲೆ ತನ್ನ ಕಾರುಣ್ಯ ಕುಂಚದಿಂದ ಬಿಡಿಸಿದ ಅಪ್ರತಿಮ ಚಿತ್ರ ವಿಶ್ವಗುರು ಬಸವಣ್ಣನವರು. ಸರ್ವಗುಣ ಸಂಪನ್ನರಾದ, ಸಕಲ ಜನ ವಂದ್ಯರಾದ, ದಯೆ ಮಾನವೀಯತೆ-ಧೀಮಂತಿಕೆಯ ತ್ರಿಕೂಟವಾದ ಬಸವಣ್ಣನವರು ಪರವಸ್ತುವಿನ ಚಿತ್ಕಳೆಯಾಗಿ, ಶರಣರ ಮನೋಮಧ್ಯದ ಸ್ವಯಂ ಜ್ಯೋತಿಯಾಗಿ ಬಾಳಿ ಬೆಳಗಿದರು.

ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಕಮ್ಮೆ ಕುಲದ ಶೈವಬ್ರಾಹ್ಮಣ ದಂಪತಿಗಳಾದ ಮಾದರಸ ಮತ್ತು ಮಾದಲಾಂಬಿಕೆಯ ಗರ್ಭದಲ್ಲಿ ಆನಂದನಾಮ ಸಂವತ್ಸರದ |ಕ್ರಿ.ಶ.೧೧೩೪| ವೈಶಾಖ ಮಾಸದ ಅಕ್ಷಯ ತೃತೀಯಾದಂದು ವಿಶ್ವಗುರು ಬಸವಣ್ಣನವರು ಜನಿಸಿದರು. ಅವರು ಹುಟ್ಟಿದಾಗ ಒಂದು ವಿಶೇಷ ಘಟನೆಯು ಜರುಗಿತು. ತಾಯಿಯ ಗರ್ಭಾಂಬುಧಿಯಿಂದ ಜನಿಸಿ ಹೊರಗಿನ ಜಗತ್ತಿಗೆ ಮಗುವು ಪ್ರವೇಶಿಸಿತು. ಆದರೇನಂತೆ ಕಣ್ಣು ತೆರೆಯದೆ, ಅಳದೆ ಮಿಸುಕದೆ ಇರಲು ಹೆತ್ತವರು ಚಿಂತಾಕ್ರಾಂತರಾದರು. ಅದೇ ವೇಳೆಗೆ ಮನೆಯ ಮುಂದೆ ಮಂತ್ರದ ಘೋಷವಾಯಿತು. ಕೂಡಲ ಸಂಗಮದ ಕ್ಷೇತ್ರದ ಅಧಿಪತಿಗಳಾಗಿದ್ದ ಜಾತವೇದ ಮುನಿಗಳು, ಒಂದು ವಿಶೇಷ ಚಿತ್ಕಳೆಯು ಇಳೆಗಿಳಿದ ಅನುಭವ ಪಡೆದು ತ್ವರೆಯಿಂದ ಧಾವಿಸಿದ್ದರು. ಗೌರವಪೂರ್ಣವಾಗಿ, ಪಾದಕ್ಕೆ ನೀರೆರೆದು ಬರಮಾಡಿಕೊಂಡು ಮಾದರಸರ ಮನೆಯನ್ನು ಹೊಕ್ಕು ಆ ಮುನಿಪುಂಗವರು ಮಗುವಿನ ಹಣೆಗೆ ವಿಭೂತಿಯನ್ನು ಧರಿಸಿ, ತಲೆಯ ಮೇಲೆ ಕೈಯಿಟ್ಟು "ಓಂ ನಮಃ ಶಿವಾಯ" ಎಂಬ ಮಂತ್ರದ ಉಚ್ಚಾರ ಮಾಡುತ್ತಲೇ ಮಗುವು ಕಣ್ತೆರೆಯಿತು. ಗುರುದರ್ಶನ ಪಡೆದು ಪುಳಕಿತಗೊಂಡಿತು. ಗುರುಗಳು ಆಶೀರ್ವದಿಸಿ, ಬಸವನೆಂದು ಹೆಸರಿಡಲು ಹೇಳಿ ನಿರ್ಗಮಿಸಿದರು.

ಬಿದಿಗೆಯ ಚಂದ್ರನಂತೆ ಬೆಳೆದ ಬಸವರಸ ಅಸಾಮಾನ್ಯ ಬುದ್ಧಿಶಾಲಿ, ತೀಕ್ಷ್ಣಮತಿ; ಗಳಿಗೆ ಗಳಿಗೆಗೂ ಸರ್ವಾಂಗೀಣವಾಗಿ ಬೆಳೆದನು. ಅಪಾರ ಸಾಹಸಿಯೂ ಆಗಿದ್ದ ಬಸವರಸ

ಸಣ್ಣವನಿರುವಾಗಲೇ ಕಾಲು ಜಾರಿ ಕೊಳದಲ್ಲಿ ಬಿದ್ದ ಸಹಪಾಠಿ ಚಾಮನನ್ನು ಈಜಿ ಮೇಲಕ್ಕೆತ್ತಿ ತಂದು, ಪ್ರಾಣವನ್ನು ಉಳಿಸಿ ಊರವರ ಪ್ರಶಂಸೆಗೆ ಪಾತ್ರನಾಗಿದ್ದನು.

ಜನ್ಮತಃ ತೀಕ್ಷ್ಣಮತಿಯಾಗಿದ್ದ ಬಸವರಸನು ಪ್ರಚಲಿತವಿದ್ದ ಅನೇಕ ಸಂಪ್ರದಾಯ, ಆಚಾರ -ವಿಚಾರಗಳನ್ನು ದಿಟ್ಟತನದಿಂದ ಪ್ರಶ್ನಿಸುತ್ತಿದ್ದನು. ಅನೇಕ ದೇವತೆಗಳ ಉಪಾಸನೆ, ಸೂರ್ಯ-ಚಂದ್ರ ಅಗ್ನಿ ನೀರು ಮುಂತಾದ ಭೌತಿಕ ವಸ್ತುಗಳ ಆರಾಧನೆ ಆತನಿಗೆ ಸರಿ ತೋರಲಿಲ್ಲ. ಯಜ್ಞ-ಯಾಗಾದಿಗಳ ನೆಪದಲ್ಲಿ ತುಪ್ಪ -ಪಿತಾಂಬರಗಳನ್ನು ಸುಡುವುದು, ಆಡು-ಅಶ್ವಗಳನ್ನು ಬಲಿಕೊಡುವುದನ್ನು ಕಂಡು ಮಮ್ಮಲ ಮರುಗಿದನು. ಒಮ್ಮೆ ಅಂತಹ ಹೋತನನ್ನು ಬಲಿಕೊಡುವ ಪ್ರಸಂಗ ನೋಡಿ ಕಂಬನಿಗರೆದಿದ್ದನು. ಸ್ವಧರ್ಮಪಾಲನೆಯ ಅಂಗವಾಗಿ ಬಸವರಸ ಉಪನಯನ ಮಾಡಿಸಿಕೊಳ್ಳಬೇಕಾಗಿ ಬಂದಾಗ ಹೆತ್ತವರೊಡನೆ ವಿಚಾರ ಭಿನ್ನಾಭಿಪ್ರಾಯ ಬಂದು ಸ್ವಗೃಹವನ್ನು ತೊರೆದನು. ಜ್ಞಾನಾಕಾಂಕ್ಷಿಯಾಗಿ ಸುಪ್ರಸಿದ್ಧ ಶೈವ ಗುರುಕುಲವಿದ್ದ ಕೂಡಲ ಸಂಗಮ ಕ್ಷೇತ್ರಕ್ಕೆ ದುಂದುಭಿ ನಾಮ ಸಂವತ್ಸರ ಕ್ರಿ.ಶ.೧೧೪೨ ರಲ್ಲಿ ಆಗಮಿಸಿದನು. ವಿದ್ಯಾಲಯದ ಕುಲಪತಿ ಶ್ರೀಜಾತವೇದ ಮುನಿಗಳು, ಅಪಾರ ಪ್ರತಿಭೆಯಿಂದ ಬೆಳಗುತ್ತಿದ್ದ ಬಸವರಸನನ್ನು ಕಾಣುತ್ತಲೇ, ''ಈತಂ ಕಾರಣಿಕನಾಗಲೇ ವೇಳ್ಕುಂ'' ಎಂದು ಮನಗಂಡು ಬಾಲಕನಿಗೆ ಜ್ಞಾನ-ವಾತ್ಸಲ್ಯಗಳ ಧಾರೆಯನ್ನೆರೆದು ಪೋಷಿಸಿದರು.

ವಿಶ್ವಗುರು ಬಸವಣ್ಣನವರು ಅರ್ಚಕ ವೃತ್ತಿಗೈಯುತ್ತ, ಶಾಸ್ತ್ರಾಧ್ಯಯನ ಮಾಡುತ್ತಿರುವಾಗಲೇ ಅವರ ಹೃನ್ಮಂದಿರದಲ್ಲಿ ಸ್ವತಂತ್ರವಾದ ಧರ್ಮವೊಂದರ ಪರಮಾತ್ಮನ ಏಕತ್ವ ಸರ್ವೋತ್ತಮಿಕೆಯ ತಳಹದಿಯ ಮೇಲೆ ರೂಪುಗೊಂಡ ಈ ಧರ್ಮದ ರೂಪುರೇಷೆ ಕುರಿತು ಚಿಂತಿಸುತ್ತಿರುವಾಗಲೇ ವಿವಾಹದ ಪ್ರಸ್ತಾಪವು ಒದಗಿತು. ೨೧ ವರ್ಷದ ಸುಂದರ ತರುಣ ಬಸವರಸನಿಗೆ ತಮ್ಮ ಏಕೈಕ ಪುತ್ರಿ ನೀಲಗಂಗಳನ್ನು ಕೊಟ್ಟು ವಿವಾಹ ಮಾಡಲು ಬಿಜ್ಜಳ ಮಹಾರಾಜನ ಪ್ರಧಾನಿ ಬಲದೇವರಸರು ಇಷ್ಟಪಟ್ಟರು. ವಿದ್ಯಾರ್ಜನೆಯ ಕೊನೆಯ ಘಟ್ಟದಲ್ಲಿದ್ದ ಬಸವರಸ ಬಲದೇವರಸರ ಸ್ವಂತ ತಂಗಿ ಮಾದಲಾಂಬಿಕೆಯ ಮಗನೇ ಆಗಿದ್ದುದು ವಿಶೇಷ ಕಾರಣವಾಗಿ, ಗುರುಗಳ ಮೂಲಕ ಬಲದೇವರಸರು ವಿಷಯಗಳನ್ನು ತಿಳಿಸಿದರು. ಸಂಸಾರ ಸಾಗರದಲ್ಲಿ ಇಳಿಯ ಬಯಸದ ಬಸವರಸ ಈ ಪ್ರಸ್ತಾಪದಿಂದ ತೀವ್ರವಾದ ಆಘಾತಕ್ಕೊಳಗಾಗಿ, ಧ್ಯಾನಾಸಕ್ತರಾಗಿ ಪರಿತಾಪ ಪಡುತ್ತಿರುವಾಗಲೇ ಸಂಗಮ ನಾಥನ ವಾಣಿ ಉಲಿಯಿತು.

''ಎಲೇ ಮಗನೇ, ಬಸವಣ್ಣ, ನಿನ್ನಂ ಮಹೀತಳದೊಳ್ ಮೆರೆದಪೆವು, ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಹೋಗು'' ಎಂದು. ಮರುದಿನ ಮಿಂದು ಮಡಿಯುಟ್ಟು ಧ್ಯಾನಾಸಕ್ತರಾಗಿ ಕುಳಿತಿರುವಾಗಲೇ ಅವರಿಗೆ ಸಗುಣ ಸಾಕ್ಷಾತ್ಕಾರವಾಯಿತು. ಸಾಕ್ಷಾತ್ ಪರಮಾತ್ಮನೇ ಅವರನ್ನು ಅನುಗ್ರಹಿಸಿದ. ಆಗಲೇ ಅವರ ಮನದಲ್ಲಿ ಪಿಂಡಾಂಡ-ಬ್ರಹ್ಮಾಂಡಗಳ ತನ್ಮೂಲಕ ಆತ್ಮ-ಪರಮಾತ್ಮರ ಸಂಯೋಜನೆಯ ಸಾಕಾರವಾದ ಇಷ್ಟಲಿಂಗ ತತ್ವವು

ರೂಪುಗೊಂಡುದು. ಈ ಇಷ್ಟಲಿಂಗದ ಸೂತ್ರವನ್ನು ಹಿಡಿದೇ ಸ್ವತಂತ್ರ ಸಂವಿಧಾನದ ಲಿಂಗಾಯತ ಧರ್ಮದ ಕಲ್ಪನೆ ಮೈದಳೆಯಿತು. ಈ ನೂತನ ಪರಿಕಲ್ಪನೆಯು(Concept)ಮುಂದೆ ಕಲ್ಯಾಣದ ಕಾರ್ಯಕ್ಷೇತ್ರವನ್ನು ಬಸವಣ್ಣನವರು ಪ್ರವೇಶಿಸಿದಾಗ ಪ್ರಾಯೋಗಿಕ ರೂಪದಳೆಯಿತು. ಇಷ್ಟಲಿಂಗವು ಕೇವಲ ಭಕ್ತಿಸಾಧನೆಯ ಸಾಧನವಾಗದೆ, ಸಮಾಜವನ್ನು ಜಾತಿ, ವರ್ಗ, ವರ್ಣ, ಲಿಂಗ ಭೇದಗಳಿಲ್ಲದೆ ಒಂದುಗೂಡಿಸುವ ಗಣಲಾಂಛನವೂ ಆಯಿತು. ಪರಮಾತ್ಮನ ಕೃಪೆಯನ್ನು ತಮ್ಮೊಳಗೆ ಅವತೀರ್ಣ ಮಾಡಿಕೊಂಡ ಬಸವರಸ ಇದೀಗ ಸಂಗನ ಬಸವಣ್ಣ ಆದರು. ಸಂಗಮನ ಕರುಣೆಯೇ ಬೆನ್ನಬಲವಾಗಿ, ಶ್ರೀಮುಖ ಸಂವತ್ಸರ ಕ್ರಿ.ಶ. ೧೧೫೩ರಲ್ಲಿ ಬಸವಣ್ಣನವರು ಅವನ ಧ್ಯಾನವನ್ನೇ ತಮ್ಮ ಸಂಗಡ ಮಹಾನ್ ಸಂಪತ್ತನ್ನಾಗಿ ಹೊತ್ತು ಮಂಗಳವಾಡಕ್ಕೆ ಬಂದರು. ಸೋದರ ಮಾವ ಬಲದೇವರಸರ ಮಗಳಾದ ನೀಲಗಂಗಾಬಿಕೆಯನ್ನು ವಿವಾಹವಾದರಲ್ಲದೆ, ಸ್ವಾರ್ಜಿತ ಧನವು ಅತ್ಯಂತ ಶ್ರೇಷ್ಠ ಎಂದು ಕಾಯಕವನ್ನು ಹೊಂದಬಯಸಿ, ಕರಣಿಕ ಕಾಯಕ ಕೈಕೊಂಡರು. ಕರಣಿಕ ಕಾಯಕದೊಡನೆ ಅರಮನೆಯನ್ನು ಪ್ರವೇಶಿಸಿದರು. ತಮ್ಮ ಅಸಾಮಾನ್ಯ ಪ್ರತಿಭೆ - ಪಾಂಡಿತ್ಯಗಳಿಂದ ದಿನ ದಿನಕ್ಕೂ ಮೇಲೇರಿದರು. ಚಾಲುಕ್ಯ ರಾಜ ತೈಲಪನು ಕಾಕತೀಯ ರಾಜ ಪ್ರೋಲನಿಗೆ ಕ್ರಿ.ಶ.೧೧೫೫ ಸೋತು ತನ್ನ ಮಹಾಮಂಡಲೇಶ್ವರ ಬಿಜ್ಜಳನ ನೆರವು ಪಡೆಯಲು ಆರಂಭಿಸಿದರು. ಬಿಜ್ಜಳನು ಕ್ರಿ.ಶ. ೧೧೫೫ರಿಂದ ನಿಧಾನವಾಗಿ ಬಲವರ್ಧನೆ ಮಾಡಿಕೊಳ್ಳುತ್ತ ಕಲ್ಯಾಣದಲ್ಲಿಯೇ ಇರತೊಡಗಿ ತನ್ನ ಆಡಳಿತವನ್ನೂ ಮಂಗಳವಾಡದಿಂದ ಕಲ್ಯಾಣಕ್ಕೆ ವರ್ಗಾಯಿಸತೊಡಗಿದನು. ಧರ್ಮಕರ್ತರಾದ ಶ್ರೀಗುರು ಬಸವಣ್ಣನವರು ಮಂಗಳವಾಡದಿಂದ ಕಲ್ಯಾಣಕ್ಕೆ ತಾವು ತಮ್ಮ ಕುಟುಂಬಪರಿವಾರ ಸಹಿತವಾಗಿ ಬಂದರು. ವಿಕ್ರಮನಾಮ ಸಂವತ್ಸರ ಶ್ರಾವಣಶುದ್ಧಪಂಚಮಿ ಸೋಮವಾರದ ದಿವಸ ೨೫-೭-೧೧೬೦ ಅರುಣೋದಯದ ಕಾಲದಲ್ಲಿ ಬಸವಣ್ಣನವರು ಕಲ್ಯಾಣವನ್ನು ಪ್ರವೇಶಿಸಿದರು.

ಯಾರೂ ಓದಲಿಕ್ಕೆ ಸಾಧ್ಯವಾಗದೆ ಇದ್ದ ಪುರಾತನ ಸ್ವರ್ಣಪತ್ರವೊಂದನ್ನು ಓದಿ ಸಿಂಹಾಸನದ ಅಡಿಯಲ್ಲಿದ್ದ ಅಪಾರ ನಿಧಿಯನ್ನು ಹೊರತೆಗೆದು ಕೊಟ್ಟರು. ತೈಲಪನ ದುರಾಡಳಿತದಿಂದ ಬರಿದಾಗಿದ್ದ ಬೊಕ್ಕಸದ ಪರಿಸ್ಥಿತಿಯಿಂದ ಕಂಗಾಲಾಗಿದ್ದ ಬಿಜ್ಜಳನಿಗೆ ಈ ನಿಧಿಪ್ರಾಪ್ತಿ ಅಪಾರವಾದ ಆನಂದ-ಆತ್ಮವಿಶ್ವಾಸಗಳನ್ನು ನೀಡಿತು. ಬಸವಣ್ಣನವರು ಭಂಡಾರಿಯ ಹುದ್ದೆಗೆ ಏರಿದರು. ರಾಜಕೀಯದಲ್ಲಿ ಅವರಿಗಿಂತಲೂ ಹಿರಿಯರಾದ ಕೊಂಡೆಯ ಮಂಚಣ್ಣ ನಾರಣ ಕ್ರಮಿತ ಮುಂತಾದವರು ಮತ್ಸರ ಬುದ್ಧಿಯಿಂದ ಬಸವಣ್ಣನವರಿಂದ ಭಂಡಾರದ ದುರುಪಯೋಗವಾಗಿದೆ ಎಂದು ಆರೋಪ ಹೊರಿಸಿದರು. ಬಸವಣ್ಣನವರು ಆಗಿಂದಾಗಲೇ ಭಂಡಾರವನ್ನು ತೆಗೆಯಿಸಿ, ಲೆಕ್ಕಮಾಡಿ, ಹಣವು ಸರಿಯಾಗಿರುವುದನ್ನು ತೋರಿಸಿ ಕೊಟ್ಟಾಗ ಬಿಜ್ಜಳ ಮಹಾರಾಜ ಬೆಕ್ಕಸಬೆರಗಾದ. ಪ್ರಜೆಗಳಲ್ಲಿ ವರ್ಧಿಸಿದ್ದ ಕಾಯಕ ನಿಷ್ಠೆ, ದಾಸೋಹ ಪ್ರಜ್ಞೆ, ಪ್ರಾಮಾಣಿಕ ತೆರಿಗೆ ನೀಡುವಿಕೆಯಿಂದ ರಾಜಭಂಡಾರವು ತುಂಬಿ ತುಳುಕುತ್ತಿತ್ತು. ಆನಂದಭರಿತನಾದ ಬಿಜ್ಜಳನು ಅಲ್ಲಿಗಾಗಲೇ ಬಲದೇವ ಮಂತ್ರಿಯ ನಿಧನದಿಂದ ತೆರವಾಗಿದ್ದ ಪ್ರಧಾನಿಯ ಪದವಿಯನ್ನು ಬಸವಣ್ಣನವರಿಗೆ ವಹಿಸಿಕೊಟ್ಟನು. ಒದಗಿ

ಬಂದ ಅಧಿಕಾರವು ಪರಮಾತ್ಮನ ಪ್ರಸಾದವೆಂಬಂತೆ ಕೈಂಕರ್ಯಭಾವದಿಂದ ಬಸವಣ್ಣನವರು ಸ್ವೀಕರಿಸಿದರು.

ಸಮಾಜದಲ್ಲಿ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಪರಿವರ್ತನೆ ಮಾಡಲು ಧರ್ಮಕರ್ತ ಬಸವಣ್ಣನವರು ಸಂಕಲ್ಪತೊಟ್ಟರು. ಇದರ ಫಲವಾಗಿ ತಾತ್ವಿಕ, ನೈತಿಕ ಸೈದ್ಧಾಂತಿಕ, ಸಾಮಾಜಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಮೌಲ್ಯಗಳನ್ನೊಳಗೊಂಡ ಸಂವಿಧಾನವಾಗಿ ವಚನ ಸಾಹಿತ್ಯವು ಆವಿರ್ಭವಿಸಿತು. ಈ ತತ್ವಗಳನ್ನು ಪ್ರಯೋಗಿಸಿ ಸಮಾಜದಲ್ಲಿ ಪರಿವರ್ತನೆ ತರುವ ಉದ್ದೇಶದಿಂದ ಧರ್ಮಪಿತ ಬಸವಣ್ಣನವರು ಅನುಭವ ಮಂಟಪವನ್ನು ಕ್ರಿ.ಶ.೧೧೬೯ರಲ್ಲಿ ವಿರೋಧಿ ಸಂವತ್ಸರದಲ್ಲಿ ಸ್ಥಾಪಿಸಿದರು. ಅರ್ಚನೆ-ಅರ್ಪಣೆ(ಕಾಯಕ+ ದಾಸೋಹ+ ಪ್ರಸಾದ) ಅನುಭಾವಗಳ ಹಕ್ಕುಗಳನ್ನು ಸಾರ್ವತ್ರಿಕಗೊಳಿಸಿ ಎಲ್ಲರಿಗೂ ನೀಡಿದರು. ಜಾತಿ ವರ್ಣವರ್ಗರಹಿತ ಧರ್ಮಸಹಿತ ಸಮಾಜವನ್ನು ಕಟ್ಟಲು ಎಲ್ಲ ಜಾತಿ ಮತ ಪಂಥಗಳಿಂದ ಸತ್ಯದ ಸಾಧಕರು, ಶೋಧಕರು ಅನುಭವ ಮಂಟಪದತ್ತ ಧಾವಿಸಿ ಬಂದರು. ನಂದನನಾಮ ಸಂವತ್ಸರ (ಕ್ರಿ.ಶ.೧೧೭೨)ದಲ್ಲಿ ಶಿವಸ್ವಾಮಿ ಮತ್ತು ಅಕ್ಕನಾಗಲಾಂಬಿಕೆಯ ಮಗನಾಗಿ ಚನ್ನಬಸವಣ್ಣ ಜನಿಸಿದನು. ಕ್ರೋಧಿನಾಮ ಸಂವತ್ಸರದಲ್ಲಿ (ಕ್ರಿ.ಶ.೧೧೮೪) ಅಲ್ಲಮ ಪ್ರಭು - ಸಿದ್ಧರಾಮರು ಆಗಮಿಸಿದರು. ಜಾತಿಯಿಂದ ಗುರುತ್ವವು ಬರದು ಆತ್ಮಜ್ಯೋತಿಯಿಂದ ಮಾತ್ರ ಎಂಬುದನ್ನು ಘೋಷಿಸಿ ಬಸವಣ್ಣನವರು ಶೂನ್ಯಪೀಠವನ್ನು ಸ್ಥಾಪಿಸಿ, ವೀರವೈರಾಗ್ಯನಿಧಿ ಅಲ್ಲಮ ಪ್ರಭುದೇವರನ್ನು ಪ್ರಥಮ ಶೂನ್ಯ ಪೀಠಾಧಿಕಾರಿಯನ್ನಾಗಿ ಮಾಡಿದರು. ವಿಶ್ವಾವಸು ಸಂವತ್ಸರದ ಚೈತ್ರಶುದ್ಧಪಾಡ್ಯ ಯುಗಾದಿ ದಿವಸ ಸೋಮವಾರದಂದು ರೇವತಿ ನಕ್ಷತ್ರದಲ್ಲಿ (ಕ್ರಿ.ಶ.೧೧೮೫)ಶೂನ್ಯ ಪೀಠಾರೋಹಣವು ನೆರವೇರಿ ಅಲ್ಲಮಪ್ರಭುದೇವರು ಅನುಭವ ಮಂಟಪದ ಸಚೇತಕ ಶಕ್ತಿಯಾದರು. ಲೋಹ ಚುಂಬಕದತ್ತ ಕಬ್ಬಿಣದ ಚೂರುಗಳು ಆಕರ್ಷಿಸಲ್ಪಡುವಂತೆ ವೀರವಿರಾಗಿಣಿ ಅಕ್ಕಮಹಾದೇವಿ, ಶಿವಯೋಗಿ ಸಿದ್ಧರಾಮೇಶ್ವರ, ಕಾಶ್ಮೀರದ ಅರಸು ಮೋಳಿಗೆಯ ಮಾರಯ್ಯ, ತತ್ವನಿಷ್ಠುರಿ ಮಡಿವಾಳ ಮಾಚಯ್ಯ ಮುಂತಾದವರು ಆಕರ್ಷಿಸಲ್ಪಟ್ಟರು. ಅನುಭವ ಮಂಟಪದ ಜ್ಞಾನಶಕ್ತಿಯಾಗಿ ಚಿನ್ಮಯಜ್ಞಾನಿ ಚನ್ನಬಸವಣ್ಣ, ಇಚ್ಛಾಶಕ್ತಿಯಾಗಿ ವೀರಮಾತೆ ಅಕ್ಕನಾಗಲಾಂಬಿಕೆ , ಕ್ರಿಯಾಶಕ್ತಿಯಾಗಿ ಬಸವಣ್ಣನವರ ಧರ್ಮಪತ್ನಿ ನೀಲಾಂಬಿಕೆ ಬಸವಣ್ಣನವರ ಮಹಾನ್ ಕಾರ್ಯದಲ್ಲಿ ಹೆಗಲು ಕೊಟ್ಟರು. ಹಡಪದ ಅಪ್ಪಣ್ಣ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಬ್ರಾಹ್ಮಣ ಮಧುವರಸ, ಸಮಗಾರ ಹರಳಯ್ಯ, ಕಿನ್ನರಿಯ ಬೊಮ್ಮಣ್ಣ ಮುಂತಾದ ಅಸಂಖ್ಯಾತ ಜಂಗಮ ಪುಂಗವರಿಂದ ಅನುಭವ ಮಂಟಪವು ವಿಜೃಂಭಿಸಿತು.

ಸಂಸ್ಕಾರ ಸಂಘಟನೆ, ಸಮಾನತೆ, ಸಹೋದರತ್ವ ಎಂಬ ನಾಲ್ಕು ಮಹಾನ್ ಸೂತ್ರಗಳೊಡನೆ ಕಾರ್ಯಪ್ರವೃತ್ತವಾದ ಅನುಭವ ಮಂಟಪವು, ಜಾತಿಗಳು ಮಾನವ ಕಲ್ಪಿತವೇ ವಿನಾ ದೇವ ನಿರ್ಮಿತವಲ್ಲ. ದೇವರನ್ನು ಆರಾಧಿಸುವ ಹಕ್ಕು ಎಲ್ಲರಿಗೂ ಇದೆ. ದೀಕ್ಷಾವಂತರಾದವರಲ್ಲಿ, ಉಂಬುವ-ಉಡುವ ಶಿವಾಚಾರ, ಕೊಂಬ ಕೊಡುವ ಕುಲಾಚಾರ

ಎರಡೂ ನಡೆಯಬೇಕು'' ಎಂಬ ಸೂತ್ರವನ್ನಾಧರಿಸಿ ಲಿಂಗವಂತ ಧರ್ಮವನ್ನು ಸ್ವೀಕಾರ ಮಾಡಿದ್ದ ಹುಟ್ಟಿನಿಂದ ಬ್ರಾಹ್ಮಣನಾಗಿದ್ದ ಮಂತ್ರಿ ಮಧುವರಸರ ಮಗಳು ಲಾವಣ್ಯವತಿಯನ್ನು ಹುಟ್ಟಿನಿಂದ ಅಂತ್ಯಜನೆನಿಸಿಕೊಂಡಿದ್ದ ಹರಳಯ್ಯನವರ ಮಗ ಶೀಲವಂತನಿಗೆ ಕೊಟ್ಟು ವಿವಾಹ ಮಾಡಿಸಿತು. ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ಅನುಭವ ಮಂಟಪವು ರಾಕ್ಷಸನಾಮ ಸಂವತ್ಸರದ ಫಾಲ್ಗುಣ ಮಾಸದ ಶುದ್ಧ ಏಕಾದಶಿ ಸೋಮವಾರದಂದು ನಡೆಸಿದ ಈ ವಿವಾಹವು ಸಂಪ್ರದಾಯವಾದಿಗಳನ್ನು ಕಂಗೆಡಿಸಿತು. ಬಸವಣ್ಣನವರ ಅಗಾಧ ಯೋಜನೆ. ಸಮಾಜದಲ್ಲಿ ತರುತ್ತಿದ್ದ ಅಪೂರ್ವ ಪರಿವರ್ತನೆಗಳನ್ನು ಕಂಡು ಒಳಗೇ ತಳಮಳಿಸುತ್ತಿದ್ದ ಸಂಪ್ರದಾಯವಾದಿಗಳು ವರ್ಣಾಂತರ ವಿವಾಹದ ನೆಪದಲ್ಲಿ ಸಿಡಿದೆದ್ದರು. ಶಾಸ್ತ್ರವಿರುದ್ಧವಾದ ವರ್ಣಸಂಕರವಿದೆಂದು ಆರೋಪಿಸಿದರು. ಸ್ವತಂತ್ರ ವಿಚಾರಿಯಲ್ಲದ ಬಿಜ್ಜಳನನ್ನು ಪ್ರಚೋದಿಸಿ, ಬಸವಣ್ಣನವರಿಗೆ ಗಡಿಪಾರಿನ ದಂಡವನ್ನು ವಿಧಿಸುವಂತೆ ಮಾಡಿದರು. 'ಹೊಕ್ಕರೆ ಆಣೆ' ಎಂದು ಎರಡು ಹದ್ದು ಗುರುತಿಸಲಾಯಿತು. ಅಂದು ರಾತ್ರಿ ಕಳೆದು ಬೆಳಗಾಗುವುದರೊಳಗಾಗಿ ಒಂದು ಗಡಿಯನ್ನು ದಾಟಬೇಕೆಂದು, ಹೊರ ಗಡಿಯನ್ನು ದಾಟಿ ಒಳಗೆ ಪ್ರವೇಶಿಸಬಾರದೆಂದು ಆಜ್ಞೆವಿಧಿಸಲಾಯಿತು. ರಾಜಾಜ್ಞೆಯನ್ನು ಸ್ವೀಕರಿಸಿ 'ದಂಡಗೊಂಡ ಬಸವಣ್ಣನವರು' ಫಾಲ್ಗುಣ ಮಾಸ ದ್ವಾದಶಿ ಮಂಗಳವಾರದಂದು ರಾಕ್ಷಸನಾಮ ಸಂವತ್ಸರದಲ್ಲಿ ಕಲ್ಯಾಣದಿಂದ ನಿರ್ಗಮಿಸಿದರು. ಮರುದಿವಸ ತ್ರಯೋದಶಿ; ಅಂದು ಹರಳಯ್ಯ-ಮಧುವರಸ-ಶೀಲವಂತರ ಬಂಧನ ಕ್ಷಿಪ್ರ ವಿಚಾರಣೆ ನಡೆಯಿತು. ಧರ್ಮಶಾಸ್ತ್ರಗಳು ದೇವರ ಕಣ್ಣುಗಳಂತೆ, ಅವನ್ನು ಉಲ್ಲಂಘಿಸಿದ್ದರಿಂದ ಕಣ್ಣುಗಳನ್ನು ಕೀಳಿಸಬೇಕೆಂದು ಘೋಷಿಸಿ, ಶಾಸ್ತ್ರವಿರೋಧಿ ವರ್ಣಾಂತರ ವಿವಾಹಕ್ಕಾಗಿ ಎಳೆಹೂಟೆ ಶಿಕ್ಷೆ ವಿಧಿಸಿ ಚತುರ್ದಶಿಯಂದು ದಿ.೧೪-೨-೧೧೯೬ ಮೂವರು ಶರಣರ ಕಣ್ಣುಗಳನ್ನು ಕೀಳಿಸಿ, ಆನೆಯ ಕಾಲಿಗೆ ಕಟ್ಟಿ ಎಳೆಸಲಾಯಿತು. ಈ ಕ್ರಾಂತಿಕಾರಿ ಘಟನೆಗೆ ಪ್ರೇರಣೆ ನೀಡಿದ ಸಹಸ್ರಾರು ಶರಣರ ವಧೆ ಮಾಡಲಾಯಿತು. ಬಿಜ್ಜಳನ ಅನ್ಯಾಯದ ವಿರುದ್ಧ ಸಿಡಿದೆದ್ದ ಶರಣರು, ಜನಸಾಮಾನ್ಯರು, ಸೈನಿಕರ ನಡುವೆ ಘರ್ಷಣೆಯನ್ನು ನಗರದಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬಿತು.

ಮಧುವಯ್ಯ ಹರಳಯ್ಯ ಹೋದ ದಿನ ಶಿವನಡಿಗೆ
ಬೀದಿಬೀದಿಗಳು ಕಿಡಿಕಾರಿ । ಕಲ್ಯಾಣ
ಗಾದಿ ಹೌಹಾರಿ ತಳವಳಿಸಿ ॥

ಚಾಲುಕ್ಯ ನಿಷ್ಠ ಸಾಮಂತರಾಗಿ ಬಿಜ್ಜಳನಿಂದ ಕಾರಾಗೃಹದಲ್ಲಿ ಬಂಧಿತರಾಗಿದ್ದ ಜಗದೇವ, ಮೊಲ್ಲೆಬೊಮ್ಮ ಎಂಬುವವರು ಇದೇ ಸಮಯದಲ್ಲಿ ತಪ್ಪಿಸಿಕೊಂಡು ಬಂದು ಬಿಜ್ಜಳನ ಅರಮನೆಯನ್ನು ದೀವಟಿಗೆಯವರ ವೇಷದಲ್ಲಿ ಹೊಕ್ಕು ಮತಿಭ್ರಾಂತಿನಾಗಿ ಕುಳಿತಿದ್ದ ಆತನನ್ನು ತಿವಿದುಕೊಂದರು. ಫಾಲ್ಗುಣ ಮಾಸದ ಹುಣ್ಣಿಮೆಯಂದು ಬಿಜ್ಜಳನ ವಧೆಯಾಗುತ್ತಲೇ ನಿಯಂತ್ರಿಸುವವರಿಲ್ಲದೆ ನಗರದಲ್ಲಿ ಅಸ್ತವ್ಯಸ್ತತೆಯುಂಟಾಗಿ ಸಂಪ್ರದಾಯವಾದಿಗಳು ಶರಣರ ಮೇಲೆ ಸೇಡು ತೀರಿಸಿಕೊಳ್ಳಲು ಸಿದ್ಧರಾದರು. ಶರಣರ ಜೀವಕ್ಕಿಂತಲೂ ವಚನ ಸಾಹಿತ್ಯನಾಶವು ಅವರ ಪ್ರಮುಖ ಗುರಿಯಾಗಿದ್ದಂತೆ ಶರಣರಿಗೆ ತಮ್ಮ

ಪ್ರಾಣರಕ್ಷಣೆಗಿಂತಲೂ ವಚನ ಸಾಹಿತ್ಯ ಸಂರಕ್ಷಣೆ ಮುಖ್ಯವಾಗಿತ್ತು. ಚನ್ನಬಸವಣ್ಣ- ಮಡಿವಾಳ ಮಾಚಿದೇವ - ಅಕ್ಕನಾಗಲಾಂಬಿಕೆ ಅವರ ನೇತೃತ್ವದಲ್ಲಿ ಶರಣರ ಬೃಹತ್ ಸಮೂಹವು ವಚನ ಸಾಹಿತ್ಯ ಹೊತ್ತು ಸಹ್ಯಾದ್ರಿಯತ್ತ ಮುನ್ನಡೆಯಿತು. ಈ ಶರಣ ಸಮೂಹವು ತಮ್ಮನ್ನು ಎದುರಿಸಿದ ಸೈನ್ಯವನ್ನು ಮೊದಲು ಕಾಳಗದಲ್ಲಿ ಬಳಿ, ನಂತರ ಮುರುಗೋಡದ ಬಳಿ ಎದುರಿಸಿತು. ಮೊದಲ ಕಾಳಗದಲ್ಲಿ ಶರಣರಿಗೆ ಬಹಳ ಕಷ್ಟ - ನಷ್ಟ ಉಂಟಾದವು. ನಂತರ ಸ್ಥಳೀಯ ಜನರು ಕ್ರೋಢೀಕರಣಗೊಳ್ಳುತ್ತ ಹೋದಂತೆ ಶರಣರ ಬಲವು ಹಿರಿದಾಗಿ ಮುರುಗೋಡದಲ್ಲಿ ನಡೆದ ಕಾಳಗದಲ್ಲಿ ಜಯವು ಶರಣರಿಗೆ ಒಲಿಯಿತು. ಚನ್ನಬಸವಣ್ಣನವರು ಉಳಿವೆಯಲ್ಲಿ ಪಾದವಿಟ್ಟು ಬೀಡುಬಿಟ್ಟುದು ವೈಶಾಖ ಬಹುಳ ಬಿದಿಗೆ ಬುಧವಾರ ರೋಹಿಣಿ ನಕ್ಷತ್ರದಲ್ಲಿ: ಅವರ ಜೊತೆಗೆ ಸುಮಾರು ೧೨೦೦೦ ಶರಣರ ಸಮೂಹವಿತ್ತು.

ಇತ್ತ 'ದಂಡಗೊಂಡ ಬಸವಣ್ಣನವರು' ಗುರುತಿಸಿದ್ದ ಗಡಿಯನ್ನು ದಾಟಿ ಕೂಡಲಸಂಗಮದತ್ತ ಬಂದು ಅಂತರ್ಮುಖಿಗಳಾಗಿ ತಪೋಮಗ್ನರಾದರು. ನಳನಾಮ ಸಂವತ್ಸರದ ಶ್ರಾವಣಶುದ್ಧ ಪಂಚಮಿಯಂದು ಸುಪ್ರಭಾತದ ಪೂಜೆಯಲ್ಲಿ ಧರ್ಮಪಿತರು ತನ್ಮಯರಾಗಿ ಇರುವಾಗಲೇ, "ಮರ್ತ್ಯಕ್ಕೆ ಬಂದ ಮಣಿಕ ಪೂರೈಸಿತು. ಇನ್ನು ನನ್ನಲ್ಲಿ ಒಂದಾಗು." ಎಂಬ ದೇವನ ಆದೇಶ ಕೇಳಿ ಬಂದಿತು. ಕಾಯ-ಜೀವಗಳ ಹೊಲಿಗೆಯನ್ನು ಬಿಚ್ಚಿಕೊಂಡು ಜೀವನ್ಮುಕ್ತ ಮನಃಸ್ಥಿತಿಯಲ್ಲಿದ್ದ ಬಸವಣ್ಣನವರು 'ಇಚ್ಛಾಮರಣ'ದ ಸಂಕಲ್ಪದೊಡನೆ ಯೋಗ ತಂತ್ರದ ಮೂಲಕ ದೇಹ - ಆತ್ಮಗಳನ್ನು ಬೇರ್ಪಡಿಸಲು ನಿರ್ಧರಿಸಿದರು. ಯೋಗದ ತಂತ್ರದ ಮೂಲಕ ಸುಪ್ರಭಾತದಲ್ಲಿ ಆರಂಭವಾದ ಈ ಕ್ರಿಯೆ ಸೂರ್ಯೋದಯವಾದ ೨೮ ಗಳಿಗೆಗೆ ಅಂದರೆ ಸೂರ್ಯಾಸ್ತಕ್ಕೂ ಸ್ವಲ್ಪ ಮೊದಲು ಪೂರ್ಣಗೊಂಡಿತು. ಅವರ ಮುಖ ದೇದಿಪ್ಯಮಾನವಾಗಿ ಬೆಳಗಲು ಪಶ್ಚಿಮಚಕ್ರದ ಕವಾಟ ತೆರೆದು ಆತ್ಮವನ್ನು ಬಿಡುಗಡೆ ಮಾಡಿ ಪರಮಾತ್ಮ ಚೈತನ್ಯದಲ್ಲಿ ವಿಲೀನಗೊಳಿಸಿದರು. ಉರಿಯುಂಡ ಕರ್ಪುರದಂತೆ ದೇವನಲ್ಲಿ ಒಂದಾದರು. ಬಯಲಲ್ಲಿ ಬಯಲಾದರು. ವಿಶ್ವಗುರು ಬಸವಣ್ಣನವರು ಇಳೆಯನ್ನಗಲಿದ ನೂರಾರು ವರ್ಷಗಳಿಂದಲೂ ಆ ದಿನವು 'ಬಸವ ಪಂಚಮಿ' ಎಂದು ಕೀರ್ತಿಯನ್ನು ಹೊಂದಿದೆ.

ಹೀಗೆ ಆನಂದನಾಮ ಸಂವತ್ಸರದ ವೈಶಾಖ ಶುದ್ಧ ಅಕ್ಷಯ ತೃತೀಯಾದಂದು ಜನ್ಮತಳೆದು ಬಂದ ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳವಾರದಂದು ೨-೭-೧೧೯೬ ಲಿಂಗೈಕ್ಯರಾದರು. ಸುಮಾರು ೬೨ ವರ್ಷ ೩ ತಿಂಗಳು ೨ದಿವಸಗಳ ಕಾಲ ಈ ಮರ್ತ್ಯಲೋಕದಲ್ಲಿ ಮೃಣ್ಮಯ ಶರೀರಧಾರಿಗಳಾಗಿ ಇದ್ದು, ಜಗ ಬದುಕುವ ಅಮೂಲ್ಯ ಸಂದೇಶಗಳನ್ನು ತಮ್ಮ ವಚನಗಳ ಮೂಲಕ ನೀಡಿ ಅಮರರಾಗಿದ್ದಾರೆ.

ನಮ್ಮ ಸಂಗನ ಬಸವಣ್ಣ ಬಂದು ಮರ್ತ್ಯದಲ್ಲಿ ಮಹಾಮನೆಯ ಕಟ್ಟದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು.

—ಶಿವಯೋಗಿ ಸಿದ್ಧರಾಮೇಶ್ವರ.

ಪಂಚಮಸಾಲಿಗಳು: ಪಂಚಾಚಾರ್ಯರು ಮತ್ತು ರಾಜಕಾರಣಿಗಳು

ಡಾ|| ಹಿರೇಮಲ್ಲೂರ ಈಶ್ವರನ್
ಕೆನಡಾ (ಅಮೇರಿಕಾ)

ಎರಡು ವಾರಗಳ ಹಿಂದೆ ನೂಲ್ವಿ ಗ್ರಾಮದಲ್ಲಿ ಪಂಚಾಚಾರ್ಯರ ಸಮಕ್ಷಮದಲ್ಲಿ ರಾಜಕಾರಣಿಗಳು ನೆರವೇರಿಸಿದ ದೊಡ್ಡ ಪ್ರಮಾಣದ ಸಭೆಯೊಂದು ಈ ರಾಜ್ಯ ಮಾತ್ರವೆ ಅಲ್ಲ, ರಾಷ್ಟ್ರದ ಉದ್ದಕ್ಕೂ ಚಾಲನೆಯಲ್ಲಿರುವ ವಿಭಜಿಸು ಮತ್ತು ಪ್ರಜೆಗಳನ್ನು ಆಳು ಎಂಬ ಬ್ರಿಟಿಷರ ಆಳ್ವಿಕೆಯ ನೀತಿಯನ್ನು ಮುಂದುವರೆಸಿಕೊಂಡು ಹೋಗುವುದೆ ಅಲ್ಲ, ಅದಕ್ಕೆ ಇನ್ನಿಲ್ಲದ ಸಂಜೀವಿನೀ ಶಕ್ತಿಯನ್ನು ತಂದುಕೊಟ್ಟಿದೆಯೆಂಬ ಮಾತಿಗೆ ಉತ್ತಮ ದೃಷ್ಟಾಂತವಾಗಿದೆ. ಭಾಷೆ, ಧರ್ಮ, ಜಾತಿ, ಮುಂತಾದವುಗಳಿಂದ ದೂರವಾದ ಕಲ್ಯಾಣ ರಾಜ್ಯವನ್ನು 47 ವರುಷಗಳ ಹಿಂದೆ ಉದ್ಘೋಷಿಸಿದ ನಂತರ ದೇಶದಲ್ಲಿ ಜಾತಿಗೆ ಸ್ಥಾನವಿಲ್ಲವೆಂದೂ ಅದು ಶೀಘ್ರಗತಿಯಲ್ಲಿ ನಿರ್ನಾಮವಾಗುತ್ತದೆಯೆಂದೂ ಅಂದಿನ ರಾಜಕಾರಣಿಗಳು ಉದ್ಘೋಷಿಸಿದುದುಂಟು. ಔದ್ಯೋಗಿಕರಣ, ಶಿಕ್ಷಣ ಪ್ರಸಾರ ಹೆಚ್ಚಾದಂತೆ ಜಾತೀಯ, ಜಾತೀಯತೆಯ ಬಂಧನಗಳು ನಶಿಸಿಹೋಗುವುದೆಂಬ ಸಮಾಜ ವಿಜ್ಞಾನಿಗಳ ನಂಬುಗೆ ಸುಳ್ಳಾಗಿರುವುದಷ್ಟೆ ಅಲ್ಲ. ಅವೆರಡೂ ಇನ್ನಷ್ಟು ಹೆಚ್ಚಿನ ಶಕ್ತಿಯನ್ನು ಪಡೆದುಕೊಂಡು ಈ ದೇಶವನ್ನು ಒಡೆದು, ಛಿದ್ರ ಛಿದ್ರವಾಗಿರಿಸಿ ಗುಂಪುಗಾರಿಕೆಯ ದುಷ್ಟನೀತಿಯ ಪ್ರಸಾರಕ್ಕೂ, ಪ್ರಾಬಲ್ಯಕ್ಕೂ ಅವಕಾಶವುಂಟು ಮಾಡಿಕೊಟ್ಟಿರುವುದನ್ನು ನೂಲ್ವಿಯಲ್ಲಿ ನಡೆದ ಜನಗಳ ಪ್ರದರ್ಶನದ ಮೂಲಕ ಪಂಚಾಚಾರ್ಯರೂ ಮತ್ತು ರಾಜಕಾರಣಿಗಳೂ ತೋರಿಸಿ ಕೊಟ್ಟಿದ್ದಾರೆ.

ಓತಿ - ಬೇಲಿಯ ಸಂಬಂಧ

ಪಂಚಮಸಾಲಿಗಳಿಗೂ, ಪಂಚಾಚಾರ್ಯ ಪಕ್ಷದ ಅಯ್ಯನವರಿಗೂ, ರಾಜಕಾರಣಿಗಳಿಗೂ ಏನು ಸಂಬಂಧವಿದೆ ಎಂದರೆ ಓತಿ ಮತ್ತು ಬೇಲಿಯ ನಡುವಿನ ಸಂಬಂಧವಲ್ಲದೆ ಇನ್ನೇನೂ ಇಲ್ಲವೆಂದು ಹೇಳಬೇಕಾಗುತ್ತದೆ. ತಮ್ಮ ಪ್ರಾಂತ್ಯದ ಸಾಧನೆಗೆ ಈ ಮೂವರು ಗುಂಪಿನವರು ಪರಸ್ಪರ ತಲೆಯಲ್ಲಾಡಿಸುತ್ತ ತಮ್ಮ ಕಾರ್ಯ ಸಾಧಿಸಿಕೊಂಡು ಹೋಗಬಯಸುವರೆಂದು ಮಾತ್ರ ಹೇಳಲು ಆಗುತ್ತದೆ.

ಪಂಚಮಸಾಲಿಗಳು ಯಾರು ಎಂದು ಕೇಳಿದರೆ ಅದಕ್ಕೆ ಸಮರ್ಪಕ ಉತ್ತರ ಕೊಡುವುದಕ್ಕೆ ಯಾವ ಆಧಾರಗಳೂ ದೊರೆಯುವುದಿಲ್ಲ. ಲಿಂಗಾಯತರಂತೆ ಪಂಚಮಸಾಲಿಯ ಪಂಗಡಕ್ಕೆ ಸೇರಿದ ಕುಟುಂಬಗಳು ಸಾಮಾನ್ಯವಾಗಿ ಎಲ್ಲ ವೃತ್ತಿಗಳಲ್ಲಿಯೂ ಪಂಚಮಸಾಲಿಗಳು ತೊಡಗಿರುವರು. ಇದು ಹೆಚ್ಚು ಸಂಖ್ಯೆ ಸಾಮಾನ್ಯವಾಗಿ ಧಾರವಾಡ ಜಿಲ್ಲೆಯಲ್ಲಿ ಮಾತ್ರ ಕಾಣಿಸಿಕೊಂಡಿದೆ. ವ್ಯಾಪಾರ ಮತ್ತು ಒಕ್ಕಲುತನವನ್ನು ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡಿರುವ ಪಂಚಮಸಾಲಿಯ ಜನತೆಗೂ ಲಿಂಗಾಯತರಲ್ಲಿರುವ ಇತರ ಗುಂಪಿನ ಜನತೆಗೂ ಏನೂ ವ್ಯತ್ಯಾಸವಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು.

ಪಂಚಾಚಾರ್ಯರು ಯಾರು; ಅವರಿಗೂ ಪಂಚಸಾಲೆಯ ಜನತೆಗೂ ಇರುವ ಸಂಬಂಧವೇನು? ಆವ ನಂಟು, ಯಾವ ಧಾರ್ಮಿಕ ಸಂಬಂಧ? ಎಂದು ಕೇಳುವ ಪ್ರಶ್ನೆಗಳಿಗೆ 'ಏನೂ ಇಲ್ಲ' ಎನ್ನುವ ನೇರ ಉತ್ತರ ಸಿಗುತ್ತದೆ.

ಲಿಂಗಾಯತರ ಧಾರ್ಮಿಕ ಸಾಹಿತ್ಯದಲ್ಲಿ ಪಂಚಾಚಾರ್ಯರ ಹೆಸರು ಕೇಳಿಬರುವುದಿಲ್ಲ. ಅವರು ಧರ್ಮಗ್ರಂಥಗಳನ್ನು ಬರೆದಿಲ್ಲ. ಶಾಸ್ತ್ರಗಳನ್ನು ರಚಿಸಿಲ್ಲ. ಸಮಾಜದ ಸೇವೆಯನ್ನು ಯಾವ ದೃಷ್ಟಿಯಿಂದಲೂ ಮಾಡಿಲ್ಲ. ಮಾಡಿದ್ದರೆ ಏನು ಮಾಡಿದರು ಎನ್ನುವುದಕ್ಕೆ ಒಂದಾದರೂ ಗುರುತಾಗಲಿ, ಉಲ್ಲೇಖವಾಗಲಿ ಅಪ್ಪಿ ತಪ್ಪಿಯಾದರೂ ಇದುವರೆಗೂ ಕಾಣಸಿಕೊಂಡಿಲ್ಲ. ಬಸವನೂ, ಅವನ ಶರಣರು ಬರುವ ಪೂರ್ವದಲ್ಲಿ ಆಗಲಿ, ಅನಂತರದಲ್ಲಿಯೇ ಆಗಲಿ ಅವರು ಕಾಣಸಿಕೊಂಡಿದ್ದರೆ ಆಗಲೂ ಅವರ ಧ್ಯೇಯ; ಸಾಧನೆ ಸಿದ್ಧಿಗಳ ಬಗೆಗೆ ಶರಣ ಸಾಹಿತ್ಯವು ಏನನ್ನೂ ಸೂಚಿಸುವುದಿಲ್ಲ. ಆದರೆ ಹರಿಹರ ಕವಿಯು ಬರೆದಿರುವ ರಗಳೆಯಲ್ಲಿ ರೇವಣಸಿದ್ಧನು ಆ ಕಾಲದ ಕಾಳಾಮುಖ ಆಚಾರ್ಯನಂತೆ ಕಾಣಸಿಕೊಂಡಿದ್ದಾನೆ. ಆತನು ಪಳಗಿಸಿಕೊಂಡಿದ್ದ ಮೋಡಿಯ ಐಂದ್ರಿಯಜಾಲ ಯೋಗಸಿದ್ಧಿ, ತಾಂತ್ರಿಕ ಶಕ್ತಿಗಳು ಲಿಂಗಾಯತ ಧರ್ಮಕ್ಕೆ ಆಗಲೂ ಬಾಹಿರವಾಗಿದ್ದಂತೆ ಈಗಲೂ ಆತನ ಧರ್ಮಕ್ಕೆ ನೀತಿಗೂ ಬಾಹಿರವಾಗಿವೆ. ಪಂಚಾಚಾರ್ಯರು ಎನ್ನುವವರು ಇದ್ದಿದ್ದರೆ ಅವರು ಕಾಳಾಮುಖರಾಗಿದ್ದರು. ತಂತ್ರ ವಿದ್ಯೆಯಲ್ಲಿ ನಿಷ್ಣಾತರು, ಯೋಗದ ಬಲದಿಂದ ಶಿವನನ್ನು ಹೆದರಿಸಿಕೊಳ್ಳುವವರೂ, ವರ್ಣಾಶ್ರಮದಲ್ಲಿ ಅತೀವ ನಿಷ್ಠೆಯುಳ್ಳವರೂ ಆಗಿದ್ದರು. ಮಹಿಳೆಯರನ್ನು, ಶೂದ್ರರನ್ನು ತಮ್ಮ ಧಾರ್ಮಿಕ ಕಕ್ಷೆಯ ಹೊರಗೆ ಇರಿಸಿದ್ದರು. ಅವರೊಡನೆ ಮಾತನಾಡುವುದೂ ಅವರಿಗೆ ಧರ್ಮವನ್ನು ಬೋಧಿಸುವುದೂ ಅವರಿಗೆ ನಿಷಿದ್ಧವಾಗಿದ್ದಿತು. ಅವರನ್ನು ಕಂಡರೆ ಮಾಲಿನ್ಯವುಂಟಾಗುತ್ತದೆಯೆಂದು ನಂಬಿದ ಅವರು ತಮ್ಮ ಕಾಲದ ಸಮಾಜದ ಅರ್ಧಕ್ಕಿಂತಲೂ ಹೆಚ್ಚಿನ ಜನಸಮುದಾಯದಲ್ಲಿದ್ದ ಮಹಿಳೆ ಮತ್ತು ಶೂದ್ರರನ್ನು ಹೊರಗಿರಿಸಿದ್ದರು.

ಅಂತಹ ಸಂಧಿಕಾಲದಲ್ಲಿ ಕಾಣಸಿಕೊಂಡು ಬಸವಣ್ಣ ಮತ್ತು ಆತನ ಪ್ರಭಾವಕ್ಕೆ ಒಳಗಾಗಿ ಬಂದ ಅಸಂಖ್ಯಾತ ಶರಣರು ನಡೆಸಿದ ಆಂದೋಲನದ ರಭಸಕ್ಕೆ ಸಿಕ್ಕ ಕಾಳಾಮುಖರು ಬಸವನಿಂದ ಸಂಸ್ಥಾಪಿತವಾದ ಲಿಂಗಾಯತ ಧರ್ಮದ ಪ್ರಚಂಡ ಶಕ್ತಿಗೆ ಗುರಿಯಾಗಿ ಅದರಲ್ಲಿ ಬಂದು ಸೇರಿಕೊಂಡರಲ್ಲದೆ ಮುಂದಿನ ಮೂರು ಶತಮಾನಗಳ ಅವಧಿಯಲ್ಲಿ ಕಾಳಾಮುಖರೂ, ಅವರ ಶೈವಧರ್ಮವೂ ಲಿಂಗಾಯತ ಧರ್ಮದಲ್ಲಿ ಸಂಪೂರ್ಣವಾಗಿ ಕರಗಿ ಹೋಗಿರುವುದನ್ನು ಆ ಧರ್ಮದ ಅಭ್ಯಾಸಿಗಳು ಬಲವತ್ತರವಾದ ಆಧಾರಗಳ ನೆರವಿನಿಂದ ಗುರುತಿಸಿದ್ದಾರೆ.

ಈ ಕಾಲದಲ್ಲಿ ಆರಾಧ್ಯರೂ, ಆಚಾರ್ಯರೂ, ಅಯ್ಯಗಳೂ ಎಂದೆನಿಸಿಕೊಂಡವರು ಇನ್ನೇನೂ ಅಲ್ಲದೆ ಕಾಳಾಮುಖರ ಮಾಸಿ ಹೋದ, ದುರ್ಬಲವಾದ ಗತಕಾಲದ ನಿರ್ಜೀವ ಗುರುತುಗಳೇ ಆಗಿರುವರು. ಉಸಿರು ಹಿಡಿದುಕೊಂಡು ಬದುಕಿರುವ ಪಂಚಾಚಾರ್ಯ ಮಠಗಳಲ್ಲಿ ಒಂದೆರಡು ಮಠಗಳು ಮಾತ್ರ ಕರ್ನಾಟಕದಲ್ಲಿ ಜೀವಂತವಾಗಿದ್ದು ಉಳಿದವುಗಳು ಜೀರ್ಣಾವಸ್ಥೆಯಲ್ಲಿ ಕಾಣಸಿಕೊಂಡಿವೆ.

ಲಿಂಗಾಯತನದು ಪ್ರಜಾಧರ್ಮವಾಗಿದೆ, ಹುಟ್ಟಿಗೆ ಅದರಲ್ಲಿ ಸ್ಥಾನವಿಲ್ಲ. ಗುಣಕ್ಕೆ ಸೇವಾಧರ್ಮಕ್ಕೆ ಪ್ರಾಶಸ್ತ್ಯವನ್ನಿತ್ತ ಆ ಧರ್ಮವು ಸಮಾಜವೇ ದೇವರೆಂದು ಬಗೆದು ಅದನ್ನು ಪೂಜಿಸುತ್ತ ಸಮಾಜದ ಕಲ್ಯಾಣದಲ್ಲಿ ಇಷ್ಟಲಿಂಗದೊಂದಿಗೆ ಒಂದಾಗುವ ಸಮಚ್ಚಾಯವಾದದಲ್ಲಿ ನಿಷ್ಠೆಯನ್ನಿರಿಸಿಕೊಂಡವರು ನಿಜವಾದ ಜಂಗಮರು. ಅವರು ಸಮಾಜದ ಸೇವಕರು. ಸಾಮಾಜಿಕ ಮೌಲ್ಯಗಳನ್ನು ದೇವತ್ವಕ್ಕೆರಿಸಿ ಅವುಗಳನ್ನು ಆಸ್ವಾಧಿಸಿಕೊಂಡು ಬಂದವರು. ಅವರಿಗೂ ಪಂಚಮಸಾಲಿಯ ಗುಂಪಿನಲ್ಲಿ ಕಾಣಸಿಕೊಂಡಿರುವ ಜನತೆಗೂ ಮತ್ತು ಪಂಚಾಚಾರ್ಯರಿಗೂ ಎತ್ತಣೆತ್ತಣ ಸಂಬಂಧ ?

ಪಂಚಾಚಾರ್ಯರೆಂದು ಹೇಳಿಕೊಳ್ಳುವ ಸಮಕಾಲೀನ ಈ ಆಚಾರ್ಯರು ಬಸವ ದ್ವೇಷಿಗಳೂ, ಲಿಂಗಾಯತನ ಸಮುಚ್ಚಯವಾದಕ್ಕೆ ಹೊರತಾಗಿರುವ ನಿಷಿದ್ಧವಾಗಿರುವ ಉತ್ಸವವಾದಿಗಳೂ ಆಗಿರುವುದನ್ನು ಅದಕ್ಕೆ ಎರಡೇ ದೃಷ್ಟಾಂತಗಳನ್ನು ಕೊಡಬಹುದಾಗಿದೆ. ತೀರ ಇತ್ತೀಚೆಗೆ ಒಂದು ವರುಷದ ಹಿಂದೆ, ಕೂಡಲಸಂಗಮ ಕ್ಷೇತ್ರದಲ್ಲಿ ಅವರು ತೋರಿದ ಬಸವ ದ್ವೇಷ, ಬೆಳಗಾವಿಯಲ್ಲಿ ನೆರವೇರಿದ ಲಿಂಗಾಯತರ ಸಭೆಯಲ್ಲಿ ತೋರಿದ ನಡತೆಗಳು ಲಿಂಗಾಯತನಿಗಷ್ಟೇ ಅಲ್ಲ, ನಾಗರಿಕ ನಡತೆಗೂ ಜಿಗುಪ್ಸೆಯನ್ನು ತರುವಂತೆ ಆಗಿದ್ದವು. ಅಂತಹ ಆಚಾರವುಳ್ಳ ಪಂಚಾಚಾರ್ಯರು ಈಗ ರಾಜಕಾರಣಿಗಳ ನೆರಳನ್ನು ಆಶ್ರಯಿಸಿ, ಪಂಚಮಸಾಲಿಯ ಜನತೆಯನ್ನು ತಮ್ಮ ಜೋಳಿಗೆಯಲ್ಲಿ ಹಾಕಿಕೊಂಡು, ಸಮಯವನ್ನು ತಕ್ಕಸಂದರ್ಭದ ದುರುಪಯೋಗವನ್ನೂ ಮಾಡಿಕೊಳ್ಳುವ ಪ್ರಯತ್ನವನ್ನು ನೂಲವಿಯ ಸಭೆಯಲ್ಲಿ ಮಾಡಿದ್ದು ಕಂಡುಬರುತ್ತದೆ.

ವಿಭಜಿಸು ಮತ್ತು ಆಳುವ ನೀತಿ:

ಕರ್ನಾಟಕ ರಾಜ್ಯದಲ್ಲಿ ದೇವರಾಜ ಅರಸರು ಮುಖ್ಯಮಂತ್ರಿಯಾದಂದಿನಿಂದ ಇದುವರೆಗೂ ಬಂದಿರುವ ಮುಖ್ಯಮಂತ್ರಿಳೆಲ್ಲರೂ ಬಸವಣ್ಣನ ಹೆಸರಿನಲ್ಲಿ ಒಂದು ಗೂಡುತ್ತ ಬಂದಿರುವ ಲಿಂಗಾಯತ ಸಮಾಜವನ್ನು ಗುಂಪು ಗುಂಪಾಗಿ ಒಡೆದು, ಒಂದು ಗುಂಪನ್ನು ಇನ್ನೊಂದು ಗುಂಪಿನಿಂದ ದೂರವಾಗಿಸುತ್ತ, ಅವರಲ್ಲಿ ಪರಸ್ಪರ ದ್ವೇಷದ ಬೀಜಗಳನ್ನು ಬಿತ್ತಿ ಅವರ ರಾಜಕೀಯ ಶಕ್ತಿಯನ್ನು ಹಾಳು ಮಾಡುವ ನೀತಿಯನ್ನು ಪಾಲಿಸಿಕೊಂಡು ಬಂದಂತಿದೆ. ಒಕ್ಕಲಿಗರಂತೂ ನಮ್ಮವರು ಇನ್ನೊಂದು ಪ್ರಬಲ ಧಾರ್ಮಿಕ ಗುಂಪಾಗಿರುವ ಲಿಂಗಾಯತರನ್ನು ಒಂದೊಂದಾಗಿ ವಿಭಜಿಸಿದರೆ ಅದು ದುರ್ಬಲ ಸಮಾಜವಾಗುವುದಲ್ಲದೆ, ರಾಜಕೀಯದಲ್ಲಿ ಪ್ರವೇಶಿಸುವ ರಾಜಕೀಯ ಸಾಮರ್ಥ್ಯವನ್ನು ಪಡೆಯುವ ಅರ್ಹತೆಯನ್ನು ಕಳೆದುಕೊಂಡು ರಾಜ್ಯದ ನಿರುಪಯೋಗಿಯಾದ ಸಮಾಜವಾಗುವುದೆಂಬ ಹಂಚಿಕೆಯನ್ನು ಕಾರ್ಯರೂಪಕ್ಕೆ ಇಳಿಸುವ ಪ್ರಯತ್ನಗಳು ಅರಸುಮನೆತನದಿಂದ ಮೊದಲುಗೊಂಡು ಗೌಡರ ಮನೆತನದವರೆಗೆ ನಡೆಯುತ್ತ ಬಂದಿವೆ. ಈ ಹಂಚಿಕೆಯಲ್ಲಿ ತಮಗೆ ಸಿಕ್ಕಷ್ಟು ಸಿಗಲಿ, ತಮ್ಮ ಅನುಯಾಯಿಗಳ ಸಂಖ್ಯೆ ಹೆಚ್ಚಾಗಿ, ರಾಜಕಾರಣಿಯೊಂದಿಗೆ ಒಂದಾಗಿ ಅವನೊಂದಿಗೆ ತಮ್ಮ ಬೇಳೆಯೂ ಬೇಯಲಿ ಎನ್ನುವ ದುರಾಸೆಯಿಂದ ಪಂಚಾಚಾರ್ಯರ ಹೆಸರಿನಲ್ಲಿ ನೂಲವಿಗೆ ಅವರು ಬಂದಿದ್ದು ಬುದ್ಧಿವಂತ ಲಿಂಗಾಯತರಿಗೆ ಸ್ಪಷ್ಟವಾಗಿ ತಿಳಿಯುತ್ತದೆ.

ಚುನಾವಣೆಯ ಕಾಲ ಸಮೀಪಿಸುತ್ತಲಿದೆ. ಪಂಚಾಚಾರ್ಯರನ್ನು ಹೆಸರಿಗೆ ಮುಂದುವರಿಸಿಕೊಂಡು ರಾಜಕೀಯ ಬಹುಮತವನ್ನು ಸಾಧಿಸಲಿಕ್ಕೆಂದು ನಡೆದ ಜನಗಳ ಪ್ರದರ್ಶನ ಹುಲಗೂರಿನ ಜಾತ್ರೆಯನ್ನು ನೆನಪಿಗೆ ತಂದು ಕೊಡುತ್ತದೆ. ದನಗಳ ಪ್ರದರ್ಶನ ಮತ್ತು ದನಗಳ ಮಾರಾಟಕ್ಕೆ ಹೆಸರಾಗಿರುವ ಹುಲಗೂರಿನ ಮಾದರಿಯಲ್ಲಿ ನೂಲವಿಯ ಪ್ರದರ್ಶನ ನಡೆದಂತಿದೆ.

ಎಂಟುನೂರು ವರುಷಗಳ ಹಿಂದೆ ಲೌಕಿಕ ಮೌಲ್ಯಗಳನ್ನು ಮಾನವೀಯ ಮೌಲ್ಯಗಳನ್ನು ಮೊತ್ತ ಮೊದಲಿಗೆ ಜಾಗತಿಕ ಮಟ್ಟದಲ್ಲಿ ನಡೆಸಿಕೊಟ್ಟ ಮಹಾಶಕ್ತಿ ಬಸವಣ್ಣನು. ಈ ಲಿಂಗಾಯತ ಸಮಾಜವು ಜೀವಂತವಾಗಿದ್ದರೆ ಕ್ರಿಯಾಶಕ್ತಿಯಿಂದ ಪ್ರಬಲವಾಗಿದ್ದರೆ ಅದಕ್ಕೆ ಕಾರಣನಾದವನು ಬಸವಣ್ಣ ಹಾಗೂ ಆತನ ಹೆಸರಿನಲ್ಲಿ ಹಾಕಿಕೊಟ್ಟ ದಾರಿಯಲ್ಲಿ ನಡೆದು ಬಂದವರು ಕರ್ನಾಟಕದ ವಿರಕ್ತ ಜಂಗಮರು. ಅವರಿಂದಾಗಿ ಲಿಂಗಾಯತನು ಈಗ ಜೀವಂತವಾಗಿರುವುದಲ್ಲದೆ, ಆತನ ಧರ್ಮವು ಪ್ರಬಲ ಪ್ರಜಾಶಕ್ತಿಯೂ ಆಗಿರುವುದಕ್ಕೆ ಸಾಧ್ಯವಾಗಿದೆ. ಆ ಶಕ್ತಿಸಾಮರ್ಥ್ಯಗಳಿಗೆ ಧಕ್ಕೆಯುಂಟಾಗದಂತೆ ನಡೆಕೊಡುವ ಬುದ್ಧಿಶಕ್ತಿ ವಿಮರ್ಶಕ ಭಾವನೆ ಪಂಚಮಸಾಲಿಯ ಜನತೆಗೆ ಬರಲಿ ಎನ್ನುವುದನ್ನು ಸಮರ್ಥಿಸುತ್ತ ಧರ್ಮದ ಹೆಸರಿನಲ್ಲಿ ಪೊಳ್ಳು ಯೋಜನೆಗಳನ್ನು ಮುಂದೆ ಮಾಡಿಕೊಂಡು ಬರುತ್ತಿರುವ ರಾಜಕಾರಣಿಗಳ ಯತ್ನಗಳನ್ನು ನಿರಾಕರಿಸಬೇಕೆಂದು ಈ ಮೂಲಕ ಜನತೆಗೆ ನಾನು ಕೇಳಿಕೊಳ್ಳುತ್ತೇನೆ.

(ಕೃಪೆ. ಪ್ರಪಂಚ 7-4-1996)

ವ್ಯಕ್ತಿಗಳ ಹೆಸರಿನಲ್ಲಿ ವಿಶ್ವವಿದ್ಯಾಲಯಗಳು

ವಿಶ್ವವಿದ್ಯಾಲಯಗಳು ಜ್ಞಾನದ ಕೇಂದ್ರಗಳು, ಜಾತಿ, ಮತ, ಪಂಥ, ಧರ್ಮಭೇದವಿಲ್ಲದೆ ಎಲ್ಲರಿಗೂ ವಿದ್ಯೆಯನ್ನು ಕೊಡುವಂತಹವು. ನಾಡು-ನುಡಿ, ಧರ್ಮ-ಸಾಹಿತ್ಯ ಮುಂತಾದವುಗಳಿಗೆ ಒಳ್ಳೆಯ ಕೊಡುಗೆ ನೀಡಿದ ಮಹಾತ್ಮರನ್ನು, ರಾಷ್ಟ್ರವೀರರನ್ನು, ಸುಧಾರಕರನ್ನು, ರಾಜಕೀಯ ನೇತಾರರನ್ನು ಗೌರವಿಸಲು, ಅವರು ಕೊಟ್ಟ ಕೊಡುಗೆ, ಸಾಧನೆ ಸಂದೇಶಗಳಿಗಾಗಿ ಕೃತಜ್ಞತೆ ಅರ್ಪಿಸಲು ವಿಶ್ವವಿದ್ಯಾಲಯಗಳಿಗೆ, ನಗರಗಳಿಗೆ, ಬಡಾವಣೆಗಳಿಗೆ, ಭವನಗಳಿಗೆ, ಬೀದಿಗಳಿಗೆ ಹೆಸರುಗಳನ್ನು ಇಡಲಾಗುವುದು. ನಾಡಿನ ಪರಂಪರೆ-ಸಂಸ್ಕೃತಿ ಉಳಿಸಲು ಇದು ಅತ್ಯಂತ ಉತ್ತಮ ಮಾರ್ಗ. ತಮಿಳುನಾಡು ಮಹಾರಾಷ್ಟ್ರ ಈ ದಿಶೆಯಲ್ಲಿ ಬಹು ಮುಂದಿವೆ. ತಮಿಳುನಾಡು ಸರಕಾರ ಮದ್ರಾಸಿನ ಸಮುದ್ರ ದಂಡೆಯಲ್ಲಿ ತನ್ನ ನಾಡಿನ ಪರಂಪರೆಯನ್ನು ಬಿಂಬಿಸುವ ಅನೇಕ ಮಹಾಪುರುಷರ ಮೂರ್ತಿಗಳನ್ನು ಮಾಡಿಸಿಟ್ಟು ಪ್ರವಾಸಿಕರಿಗೆ ತಮ್ಮ ರಾಜ್ಯದ ಸಾಂಸ್ಕೃತಿಕ ಪರಂಪರೆಯ ಪರಿಚಯ ಮಾಡಿಕೊಡುತ್ತಿದೆ. ಕರ್ನಾಟಕ ಸರಕಾರ ಅಂಥ ಯಾವುದೇ ಮಹತ್ವಪೂರ್ಣ ಕೆಲಸವನ್ನು ಇಂದಿನವರೆಗೂ ಮಾಡಿಲ್ಲ.

ಕಲ್ಯಾಣ ಕರ್ನಾಟಕ ಎಂಬ ಅನ್ವರ್ಥಕ ನಾಮವನ್ನು ಹೊಂದಿರುವ ಗುಲಬರ್ಗಾ

ವಿಭಾಗದ ಶೈಕ್ಷಣಿಕ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರನ್ನಿಡಿ ಎಂಬ ಬೇಡಿಕೆ ಇಂದು ನಿನ್ನೆಯದಲ್ಲ. ವಿಶ್ವವಿದ್ಯಾಲಯ ಆರಂಭವಾದಂದಿನಿಂದ ಸಾಗಿಬಂದಿದೆ. ಸ್ವತಃ ಅಭಿಮಾನದ ಕೊರತೆಯು ಸರ್ಕಾರಕ್ಕೆ ಇಂಥ ಬೇಡಿಕೆ ಪೂರೈಸಲು ಅಡ್ಡಿಯಾಗಿದೆ. ಜೊತೆಗೆ ಬಸವಣ್ಣನವರ ಕಾರ್ಯಕ್ಷೇತ್ರವಾದ ಈ ವಿಭಾಗದ ವಿಶ್ವವಿದ್ಯಾಲಯಕ್ಕೂ ಡಾ॥ ಬಾಬಾ ಸಾಹೇಬ ಅಂಬೇಡ್ಕರರ ಹೆಸರನ್ನಿಡಬೇಕೆಂಬ ದಲಿತರ ಒಂದು ಗುಂಪಿನ ಹಠಮಾರಿತನ. ವಿಶ್ವವಿದ್ಯಾಲಯಗಳಿಗೆ ಆಯಾ ಊರು ಅಥವಾ ಪ್ರದೇಶಗಳ ಹೆಸರೇ ಸಾಕು; ಯಾವ ಮಹಾಪುರುಷರ ಹೆಸರೂ ಬೇಡ ಎಂದು ಕೆಲವರ ವಾದ. ಈ ಗೋಜಲಿನ ನಡುವೆ ಕೆಟ್ಟ ರಾಜಕೀಯದ ಸೋಂಕು ಬೇರೆ. ಈ ಎಲ್ಲವುಗಳ ಬಗ್ಗೆ ವಿಮರ್ಶಿಸುವ ಮುನ್ನ ಸದ್ಯ ಭಾರತದಲ್ಲಿರುವ ವ್ಯಕ್ತಿಗಳು, ಸಂಸ್ಥಾನಿಕರು, ಸಂಸ್ಥಾನ ಈ ಹೆಸರಿನ ವಿಶ್ವವಿದ್ಯಾಲಯಗಳ ಪಟ್ಟಿ ಕೊಡುತ್ತೇನೆ. ಗಮನಿಸಿರಿ.

1. ತಮಿಳುನಾಡು :-

1. ಅವನಾಶಿ ಲಿಂಗಮ್ ಇನ್ಸ್‌ಟಿಟ್ಯೂಟ್ ಆಫ್ ಹೋಮ್ ಸೈನ್ಸ್(ಶಾರದಾಲಯ) ಆಂಡ್ ಹೈಯರ್ ಎಜುಕೇಷನ್ ಫಾರ್ ವುಮೆನ್, ಕೋಯಮತ್ತೂರು.
2. ಅಣ್ಣಾಮಲೈ ಯೂನಿವರ್ಸಿಟಿ, ಅಣ್ಣಾಮಲೈನಗರ, ಚಿದಂಬರಮ್
3. ಅಳಗಪ್ಪ ಯೂನಿವರ್ಸಿಟಿ, ಕಾರೈಕುಡಿ,
4. ಅಣ್ಣಾ ಯೂನಿವರ್ಸಿಟಿ, ಗುಯಿಂಡಿ, ಮದ್ರಾಸ್
5. ಭಾರತೀಯಾರ್ ಯೂನಿವರ್ಸಿಟಿ, ಕೊಯಮತ್ತೂರ್
6. ಭಾರತೀಸದನ್ ಯೂನಿವರ್ಸಿಟಿ , ತಿರುಚಿರಾಪಳ್ಳಿ
7. ಮಧುರೈ ಕಾಮರಾಜ ಯೂನಿವರ್ಸಿಟಿ, ಮಧುರೈ.
8. ಮದರ್ ತೆರೇಸಾ ವುಮೆನ್ ಯೂನಿವರ್ಸಿಟಿ, ಕೊಡೈಕೆನಾಲ್-624 102
9. ಡಾ॥ ಎಂ. ಜಿ. ಆರ್. ಮೆಡಿಕಲ್ ಯೂನಿವರ್ಸಿಟಿ, ಮದ್ರಾಸ್
10. ಜಿ.ಡಿ.ನಾಯ್ಡು ಕೃಷಿ ವಿಶ್ವವಿದ್ಯಾಲಯ, ಕೋಯಮತ್ತೂರು.

2. ಆಂಧ್ರಪ್ರದೇಶ :-

1. ಉಸ್ಮೇನಿಯಾ ಯೂನಿವರ್ಸಿಟಿ, ಹೈದರಾಬಾದ್
2. ಶ್ರೀ ವೆಂಕಟೇಶ್ವರ ಯೂನಿವರ್ಸಿಟಿ, ತಿರುಪತಿ
3. ಶ್ರೀ ಪದ್ಮಾವತಿ ಮಹಿಳಾ ವಿಶ್ವವಿದ್ಯಾಲಯ, ತಿರುಪತಿ.
4. ಶ್ರೀ ಕೃಷ್ಣದೇವರಾಯ ಯೂನಿವರ್ಸಿಟಿ, ಅನಂತಪುರ
5. ಕಾಕತೀಯ ಯೂನಿವರ್ಸಿಟಿ, ವಾರಂಗಲ್
6. ಜವಾಹರಲಾಲ್ ಟೆಕ್ನೊಲಾಜಿಕಲ್ ಯೂನಿವರ್ಸಿಟಿ, ಹೈದರಾಬಾದ್
7. ಶ್ರೀ ಸತ್ಯಸಾಯಿ ಇನ್ಸ್‌ಟಿಟ್ಯೂಟ್ ಫಾರ ಹೈಯರ್ ಲರ್ನಿಂಗ್, ಪುಟ್ಟಪರ್ತಿ

8. ನಿಜಾಮ್ಸ್ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ, ಹೈದರಾಬಾದ್
9. ಡಾ|| ಬಿ.ಆರ್.ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯ, ಹೈದರಾಬಾದ್
10. ರಾಜೀವ ಗಾಂಧಿ ಯೂನಿವರ್ಸಿಟಿ ಆಫ್ ಕಂಪ್ಯೂಟರ್ ಸೈನ್ಸ್, ಹೈದರಾಬಾದ್

3. ಕೇರಳ :-

1. ಮಹಾತ್ಮಾ ಗಾಂಧಿ ಯೂನಿವರ್ಸಿಟಿ, ಕೊಟ್ಟಾಯಮ್-686562
2. ಶ್ರೀ ಚಿತ್ರ ತಿರುನಾಳ್ ಇನ್ಸ್‌ಟಿಟ್ಯೂಟ್ ಫಾರ್ ಮೆಡಿಕಲ್ ಸೈನ್ಸಸ್ ಆಂಡ್ ಟೆಕ್ನಾಲಜಿ, ತಿರುವನಂತಪುರಂ.

4. ಕರ್ನಾಟಕ :-

1. ಕುವೆಂಪು ಯೂನಿವರ್ಸಿಟಿ, ಬಿ.ಆರ್.ಪ್ರಾಜೆಕ್ಟ್, ಶಿವಮೊಗ್ಗ ಜಿಲ್ಲೆ
2. ರಾಜೀವ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ, ಬೆಂಗಳೂರು.

5. ಮಹಾರಾಷ್ಟ್ರ :-

1. ಶ್ರೀಮತಿ ನಾಥೀಬಾಯಿ ದಾಮೋದರ್ ಥ್ಯಾಕರ್‌ಸೇ, ವುಮೆನ್ಸ ಯೂನಿವರ್ಸಿಟಿ, ಬಾಂಬೆ
2. ಶಿವಾಜಿ ಯೂನಿವರ್ಸಿಟಿ, ಕೊಲ್ಹಾಪುರ
3. ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ಸ್, ಬಾಂಬೆ
4. ತಿಲಕ್ ಮಹಾರಾಷ್ಟ್ರ ವಿದ್ಯಾಪೀಠ, ಪುಣೆ
5. ಮಹಾತ್ಮಾ ಪುಲೆ ಕೃಷಿ ವಿದ್ಯಾಪೀಠ, ರಾಹುರಿ - 413772
6. ಪಂಜಾಬ್ ರಾವ ಕೃಷಿ ವಿದ್ಯಾಪೀಠ, ಆಕೋಲಾ-444104
7. ಡಾ|| ಬಾಬಾ ಸಾಹೇಬ ಅಂಬೇಡ್ಕರ್ ತಾಂತ್ರಿಕ ವಿಶ್ವವಿದ್ಯಾಲಯ, ಲೋನಿರೆ, ಜಿ.ರಾಯಘಡ
8. ಯಶವಂತರಾವ ಚವ್ಹಾಣ ಮಹಾರಾಷ್ಟ್ರ ಮುಕ್ತ ವಿಶ್ವವಿದ್ಯಾಲಯ
9. ಡಾ|| ಬಾಬಾ ಸಾಹೇಬ ಅಂಬೇಡ್ಕರ್ ಯೂನಿವರ್ಸಿಟಿ, ಔರಂಗಾಬಾದ್.

6. ಗುಜರಾತ್ :-

1. ಮಹಾರಾಜಾ ಸಯ್ಯಾಜಿರಾವ್ ಯೂನಿವರ್ಸಿಟಿ, ಬರೋಡ.
2. ಸರ್ದಾರ್ ಪಟೇಲ್ ಯೂನಿವರ್ಸಿಟಿ, ವಲ್ಲಭನಗರ
3. ಡಾ|| ಬಿ.ಆರ್.ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯ, ಅಹಮದಾಬಾದ್

7. ರಾಜಸ್ಥಾನ

1. ಮೋಹನ್‌ಲಾಲ್ ಸುಖಾಡಿಯಾ ಯೂನಿವರ್ಸಿಟಿ, ಉದಯಪುರ
2. ಬಿರ್ಲಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಪಿಲಾನಿ.

8. ನವದೆಹಲಿ :-

1. ಜವಾಹರಲಾಲ್ ನೆಹರೂ ಯೂನಿವರ್ಸಿಟಿ, ನ್ಯೂಡೆಲ್ಲಿ
2. ಇಂದಿರಾಗಾಂಧಿ ನ್ಯಾಶನಲ್ ಮುಕ್ತ ವಿಶ್ವವಿದ್ಯಾಲಯ, ನ್ಯೂಡೆಲ್ಲಿ
3. ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ನ್ಯೂಡೆಲ್ಲಿ

9. ಹರ್ಯಾಣ :-

1. ಮಹರ್ಷಿ ದಯಾನಂದ ಯೂನಿವರ್ಸಿಟಿ, ರೋಹಟಕ್
2. ಚೌಧುರಿ ಚರಣಸಿಂಗ್ ಹರ್ಯಾನಾ ಅಗ್ರಿಕಲ್ಚರ್ ಯೂನಿವರ್ಸಿಟಿ ಹಿಸ್ಸಾರ್

10. ಪಂಜಾಬ್:-

1. ಗುರುನಾನಕ ಯೂನಿವರ್ಸಿಟಿ, ಅಮೃತಸರ
2. ದಾಪರ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಪಾಟಿಯಾಲಾ-147001

11. ಹಿಮಾಚಲ ಪ್ರದೇಶ್:-

1. ಡಾ|| ವೈ.ಎಸ್.ಪಾರ್‌ಮಾರ್ ಯೂನಿವರ್ಸಿಟಿ ಆಫ್ ಹಾರ್ಟಿಕಲ್ಚರ್ ಆಂಡ್ ಫಾರೆಸ್ಟ್ರಿ, ಸೋಲಾನ

12. ಬಿಹಾರ :-

1. ರಾಜೇಂದ್ರ ಅಗ್ರಿಕಲ್ಚರಲ್ ಯೂನಿವರ್ಸಿಟಿ, ಪೂಸಾ, ಸಮಷ್ಟಿಪುರ.
2. ಕಾಮೇಶ್ವರ ಸಿಂಗ್ ದರ್ಭಾಂಗ ಸಂಸ್ಕೃತ್ ವಿಶ್ವವಿದ್ಯಾಲಯ, ದರ್ಭಾಂಗ್
3. ಲಲಿತನಾರಾಯಣ ಮಿಥಿಲಾ ಯೂನಿವರ್ಸಿಟಿ, ದರ್ಭಾಂಗ.
4. ಡಾ|| ಬಿ.ಆರ್.ಅಂಬೇಡ್ಕರ್ ಮುಕ್ತವಿಶ್ವವಿದ್ಯಾಲಯ, ಮುಸಾಫರಪುರ.

13. ಉತ್ತರ ಪ್ರದೇಶ

1. ಡಾ|| ಬಾಬಾ ಸಾಹೇಬ ಅಂಬೇಡ್ಕರ್ ಟೆಕ್ನೊಲಾಜಿಕಲ್ ಯೂನಿವರ್ಸಿಟಿ, ಲಕ್ನೋ
2. ಚಂದ್ರಶೇಖರ್ ಆಜಾದ್ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರ್ ಆಂಡ್ ಟೆಕ್ನಾಲಜಿ, ಕಾನಪುರ - 208002
3. ಗೋವಿಂದ ವಲ್ಲಭಪಂತ್ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರ್ ಆಂಡ್ ಟೆಕ್ನಾಲಜಿ, ಪಾಟ್ನಾಗರ್, ಜಿ.ನೈನಿತಾಲ್
4. ಹೇಮಾವತಿ ನಂದನ್ ಬಹುಗುಣ ಗರವಾಲ್ ಯೂನಿವರ್ಸಿಟಿ, ಗರವಾಲ್
5. ನರೇಂದ್ರ ದೇವ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರ್ ಆಂಡ್ ಟೆಕ್ನಾಲಜಿ, ನರೇಂದ್ರನಗರ, ಫೈಜಾಬಾದ್-224229
6. ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ-221002
7. ಸಂಜಯಗಾಂಧಿ ಪೋಸ್ಟ್ ಗ್ರಾಜುಯೇಟ್ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಲಕ್ನೋ - 226001

14. ಮಧ್ಯ ಪ್ರದೇಶ.

1. ಅವದೇಶ ಪ್ರತಾಪಸಿಂಗ್ ಯೂನಿವರ್ಸಿಟಿ, ರೇವ - 486003
2. ದೇವಿ ಅಹಲ್ಯಾ ವಿಶ್ವವಿದ್ಯಾಲಯ, ಇಂದೋರ್-452001
3. ಡಾ॥ ಹರಿಸಿಂಗ್ ಗೌರ್ ವಿಶ್ವವಿದ್ಯಾಲಯ, ಸಾಗರ್
4. ಇಂದಿರಾ ಗಾಂಧಿ ಕೃಷಿ ವಿಶ್ವವಿದ್ಯಾಲಯ, ರಾಯಪುರ-492 010
5. ಜವಾಹರಲಾಲ್ ಅಗ್ರಿಕಲ್ ಚರಲ್ ಯೂನಿವರ್ಸಿಟಿ, ಜಬ್ಬಲ್‌ಪುರ
6. ಜಿವಾಜಿ ವಿಶ್ವವಿದ್ಯಾಲಯ, ಗ್ವಾಲಿಯರ್-474 011
7. ರಾಣಿ ದುರ್ಗಾವತಿ ವಿಶ್ವವಿದ್ಯಾಲಯ, ಜಬ್ಬಲ್‌ಪುರ
8. ರವಿಶಂಕರ್ ವಿಶ್ವವಿದ್ಯಾಲಯ, ರಾಯಪುರ - 492 010
9. ವಿಕ್ರಮ್ ಯೂನಿವರ್ಸಿಟಿ ಉಜ್ಜೈನ್- 456010

15 ಪಶ್ಚಿಮ ಬಂಗಾಲ :-

1. ರಬೀಂದ್ರ ಭಾರತಿ ವಿಶ್ವವಿದ್ಯಾಲಯ, ಕಲಕತ್ತಾ
2. ವಿದ್ಯಾಸಾಗರ್ ವಿಶ್ವವಿದ್ಯಾಲಯ, ಮಿಡ್ನಾಪುರ
3. ಬಿದನ ಚಂದ್ರ ಕೃಷಿ ವಿಶ್ವವಿದ್ಯಾಲಯ, ಹರಿಘಂಟಾ

ರಾಷ್ಟ್ರಪಿತ ಮಹಾತ್ಮಾಗಾಂಧಿ-1, ಜವಾಹರಲಾಲ್ ನೆಹರು-3, ಇಂದಿರಾಜಿ-2, ರಾಜೀವ ಗಾಂಧಿ-2, ಸಂಜಯಗಾಂಧಿ-1, ಹೀಗಲ್ಲದೆ ಇನ್ನಿತರ ಎಲ್ಲ ಮಹಾಪುರುಷರ ಹೆಸರಿನಲ್ಲಿ ಒಂದೊಂದು ಇವೆ. ಡಾ॥ ಬಾಬಾ ಸಾಹೇಬ ಅಂಬೇಡ್ಕರರ ಹೆಸರಿನಲ್ಲಿ 6 ಇವೆ.

ಶುದ್ಧ ಧಾರ್ಮಿಕ ಪುರುಷರಾದ ಗುರುನಾನಕ, ಮಹರ್ಷಿ ದಯಾನಂದರ ಹೆಸರಿನಲ್ಲಿವೆ. ಸಮಾಜ ಸುಧಾರಕರಾದ ವಿದ್ಯಾಸಾಗರರ ಹೆಸರಿನಲ್ಲಿದೆ. ಇತ್ತೀಚೆಗೆ ಆಗಿಹೋದ ರಾಜಕಾರಣಿಗಳಾದ ಚೌಧರಿ ಚರಣಸಿಂಗ್, ಮೋಹನ್‌ಲಾಲ್ ಸುಖಾಡಿಯಾ, ಡಾ॥ ಎಂ.ಜಿ.ಆರ್ ಮುಂತಾದವರ ಹೆಸರಿನಲ್ಲಿ ಇವೆ. ಗುರುನಾನಕ, ಮಹರ್ಷಿ ದಯಾನಂದ, ವಿಶ್ವಗುರು ಬಸವಣ್ಣನವರು ಧಾರ್ಮಿಕ ವ್ಯಕ್ತಿಗಳು; ಇದನ್ನು ಕಡೆಗಣಿಸಿದರೂ ವಿದ್ಯಾಸಾಗರ, ಮಹಾತ್ಮಾ ಫುಲೆ, ಮಹಾತ್ಮಾ ಗಾಂಧಿಯಂತೆ ಸಮಾಜ ಸುಧಾರಕರು, ರವೀಂದ್ರನಾಥ ಟಾಗೋರರಂತೆ ದಾರ್ಶನಿಕ ಸಾಹಿತಿಗಳು, ಒಬ್ಬ ಆದರ್ಶ ರಾಜಕೀಯ ನೇತಾರರು, ರಾಜಕಾರಣ ಮುತ್ಸದ್ಧಿಗಳು, ಬಸವಣ್ಣನವರ ಸಮಗ್ರ ವ್ಯಕ್ತಿತ್ವಕ್ಕೆ ಹೋಲಿಸಿ ಮಾತನಾಡಲು ಬೇರೆ ಮಹಾಪುರುಷರು ಈ ಪ್ರಕಟಿತ ಯಾದಿಯಲ್ಲಿಲ್ಲ.

ದಲಿತೋದ್ಧಾರಕರು

ಪ್ರಜಾಪ್ರಭುತ್ವದ, ಸ್ವಾತಂತ್ರ್ಯದ ತಂಗಾಳಿಯಲ್ಲಿ ಡಾ॥ ಬಾಬಾ ಸಾಹೇಬ ಅಂಬೇಡ್ಕರರು ಸಂವಿಧಾನ ರಚಿಸಿ ದಲಿತರ ಉದ್ಧಾರಕ್ಕೆ ಯತ್ನಿಸಿದರು. ವಿಶ್ವಗುರು ಬಸವಣ್ಣನವರು 800 ವರ್ಷಗಳ ಪೂರ್ವದಲ್ಲಿ ರಾಜಶಾಹಿ-ಪುರೋಹಿತಶಾಹಿಗಳ ಅಷ್ಟಪದಿ ಹಿಡಿತದ ಉಸಿರು

ಕಟ್ಟಿಸುವ ವಾತಾವರಣದ ಮಧ್ಯದಲ್ಲೂ ದೀನ ದಲಿತರ ಉದ್ಧಾರಕ್ಕೆ ಶ್ರಮಿಸಿ, ಸಮಾನತೆ ಸಾರುವ ವಚನ ಸಾಹಿತ್ಯ ಸಂವಿಧಾನ ಕೊಟ್ಟರು. ಡಾ॥ ಅಂಬೇಡ್ಕರರು ದಲಿತರಾಗಿ ಹುಟ್ಟಿ ಆ ನೋವು ಅನುಭವಿಸಿದರು. ಬಸವಣ್ಣನವರು ಬ್ರಾಹ್ಮಣ ಕುಲದಲ್ಲಿ ಹುಟ್ಟಿ, ಆದರಿಂದಾಗಿ ಸ್ವತಃ ಆ ಅಸ್ಪೃಶ್ಯತೆಯ ನೋವು ಅನುಭವಿಸದಿದ್ದರೂ, ಆ ನೋವನ್ನು ಅರಿತು ಸ್ಪಂದಿಸಿದರು. ಡಾ॥ ಅಂಬೇಡ್ಕರ್ (ಜಾತಿಯಿಂದ) ದಲಿತರ ನಾಯಕರಾದರೂ ತಮ್ಮ ಮಟ್ಟಕ್ಕೆ ಏರುವ ಅನುಯಾಯಿಗಳನ್ನು ತಯಾರು ಮಾಡಲಿಲ್ಲ. ಬಸವಣ್ಣನವರು ತಮ್ಮ ಮಟ್ಟಕ್ಕೆ ಏರಿಸಿಕೊಳ್ಳಲು ಪ್ರಯತ್ನಿಸಿ ಅಸಂಖ್ಯಾತ ದಲಿತರನ್ನು ಪ್ರಾತಃಸ್ಮರಣೀಯರನ್ನಾಗಿ, ಪೂಜ್ಯರನ್ನಾಗಿ ಮಾಡಿ ಶರಣ-ಮಾಲೆಯ ಪುಷ್ಪಗಳನ್ನಾಗಿ ಮಾಡಿದರು.

1. ಸರ್ಕಾರವು ಇಂಥ ಓರ್ವ ಮಹಾಪುರುಷನನ್ನು ವಿಶ್ವವಿದ್ಯಾಲಯಕ್ಕೆ ಹೆಸರಿಟ್ಟು ಗೌರವಿಸಲು ಹಿಂಜರಿಯುತ್ತಿರುವುದು, ವಿಳಂಬ ನೀತಿ ಅನುಸರಿಸುತ್ತಿರುವುದು ಕರ್ತವ್ಯ ಚ್ಯುತಿ ಮಾಡಿದಂತಲ್ಲವೆ?

2. ವಿಶ್ವಗುರು ಬಸವಣ್ಣನವರು ಸಮತಾವಾದಿ, ಮಾನವತಾವಾದಿ, ವಿಶ್ವಮಾನವ ಎಂದು ಅರಿಯದ ವ್ಯಕ್ತಿಯೇ ಇಲ್ಲ. ಇಂಥವರನ್ನು ಯಾವುದಾದರೊಂದು ಜಾತಿಮತಪಂಥಗಳಿಗೆ ಸೀಮಿತಗೊಳಿಸುವ ಪ್ರಯತ್ನ ಅಕ್ಷಮ್ಯ ಅಪರಾಧ.

3. ಡಾ॥ ಅಂಬೇಡ್ಕರರ ಹೆಸರಿನಲ್ಲಿ ಈಗಾಗಲೇ 6 ವಿಶ್ವವಿದ್ಯಾಲಯಗಳಿದ್ದು ಇನ್ನೂ ಅವರ ಹೆಸರನ್ನೆ ಗುಲಬರ್ಗಾ ವಿಶ್ವವಿದ್ಯಾಲಯಕ್ಕೂ ಬೇಡುವುದು, ಹಠಮಾಡುವುದು ದಲಿತರ ಆಕ್ರಮಣಕಾರಿ ಪ್ರವೃತ್ತಿ ಎನಿಸದೆ?

4. ಆಯಾ ಪ್ರದೇಶಗಳ ಮಹಾಪುರುಷರ ಹೆಸರನ್ನು ಐತಿಹಾಸಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಲ್ಲಲ್ಲಿಯ ವಿಶ್ವವಿದ್ಯಾಲಯಗಳಿಗೆ ಇಡುವುದು ಸೂಕ್ತ ಎನ್ನಿಸುವಾಗ ಅಂಥಲ್ಲೆಲ್ಲ ಅಡ್ಡಗಾಲು ಹಾಕುತ್ತ ಡಾ॥ ಅಂಬೇಡ್ಕರರ ಹೆಸರನ್ನು ಇಡಿ ಎನ್ನುವುದು ಯಾರಿಗೇ ಆದರೂ ಬೇಸರ ಅಸಹನೆ ಹುಟ್ಟಿಸದೆ? ದಲಿತರಿಗೆ ಡಾ॥ ಅಂಬೇಡ್ಕರರು ಅಷ್ಟೇ ಮಾನ್ಯರೇ? ಬೇರಾರೂ ಅವರ ದೃಷ್ಟಿಯಲ್ಲಿ ಗೌರವಾರ್ಹರಲ್ಲವೆ?

ಸತ್ಯ ನ್ಯಾಯಗಳ ಪರಿಚಯ ಮಾಡಿಕೊಡಲು ಸರ್ಕಾರಗಳಿಗೆ ವಿವೇಕ ಜ್ಞಾನ ಉಂಟು ಮಾಡಲು, ನ್ಯಾಯದ ಪರವಾಗಿ ನಿಲ್ಲುವಂತೆ ಮಾಡಲು ಜನಜಾಗೃತಿಯ ಚಳುವಳಿ ಅತ್ಯಗತ್ಯವಾಗಿದೆ. ನ್ಯಾಯಯುತ ಬೇಡಿಕೆಯಾದ ಬಸವೇಶ್ವರ ವಿಶ್ವವಿದ್ಯಾಲಯವೆಂದು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಹೆಸರಿಡಲು ಚಳುವಳಿ ಮಾಡುವುದು ಸಾಮಾಜಿಕ ನ್ಯಾಯಕ್ಕಾಗಿ ಮಾಡುವ ಹೋರಾಟ ಎಂಬುದನ್ನಿಂದು ಎಲ್ಲರೂ ಅರಿಯಬೇಕಿದೆ.

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ
ಬಸವೇಶ್ವರ ವಿಶ್ವವಿದ್ಯಾಲಯ ಎಂದು ನಾಮಕರಣ
ಮಾಡಲು ಆಗ್ರಹಿಸಿ
ಸರತಿ ಉಪವಾಸ ಸತ್ಯಾಗ್ರಹ ಮತ್ತು ಜೇಲ ಭರೋ
ಜನ ಜಾಗೃತಿಗಾಗಿ ಪ್ರವಾಸ

ಶರಣ ಬಂಧುಗಳೇ,

1996ರ ಜನವರಿ 14 ರಂದು ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಅಸಂಖ್ಯಾತರ ಸನ್ನಿಧಿಯಲ್ಲಿ ಸಂಕಲ್ಪ ಕೈಗೊಂಡು, ದಿ.21-1-96ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿ, ದಿ. 13-2-96ರಿಂದ ಹೋರಾಟ ಪ್ರಾರಂಭಿಸಲಾಯಿತು. ಈ ದಿಶೆಯಲ್ಲಿ ಸರ್ಕಾರವು ಸೂಕ್ತ ನಿರ್ಧಾರ ಕೈಗೊಳ್ಳದ್ದರಿಂದ ದಿ. 8-7-1996 ರಂದು ಜೇಲಭರೋ ಕಾರ್ಯಕ್ರಮ ಹಮ್ಮಿಕೊಂಡು 25000 ರಿಂದ 30000 ಜನರು ಎಲ್ಲೆಡೆಯಲ್ಲಿ ಜೇಲು ತುಂಬಬೇಕು ಎಂದೂ ನಿರ್ಧರಿಸಲಾಯಿತು.

ನಿಜ ಭಕ್ತಿವಂತರೂ, ಸಾತ್ವಿಕರು, ಸಜ್ಜನರು ಆದ ಶರಣ ಬಂಧುಗಳು ಜೇಲಾಧಿಕಾರಿಗಳು, ಜೇಲು ಎಂದರೆ ಶರಣರು ಆತಂಕಪಡುವ ಕಾರಣವಿಲ್ಲ. ಗಣಾಚಾರಿಗಳಾಗಿ, ಬಂಧನಕ್ಕೊಳಗಾಗುವುದು ಪರಮ ಪವಿತ್ರವಾದ ಗುರುಸೇವೆ; ನಮ್ಮದು ಅಹಿಂಸಾತ್ಮಕ ಹೋರಾಟ. ಪೂಜ್ಯ ಬಾಪೂಜಿ ಬ್ರಿಟಿಷರನ್ನು ಮಣಿಸಿದ್ದೇ ಈ ಅಹಿಂಸಾತ್ಮಕ ಮಾರ್ಗದಿಂದ. ನಮ್ಮ ಚಳುವಳಿಯಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮೊಡನೆ ಇರುವುದರಿಂದ ಜೇಲಿನ ಬಂಧನಕ್ಕೆ ತಂಡ ತಂಡವಾಗಿ ಒಳಗಾಗಿ ಒಟ್ಟಾಗಿ ಇರುವುದರಿಂದ ಯಾವುದೇ ಭಯ ಆತಂಕ ಇರಿಸಿಕೊಳ್ಳಬಾರದೆಂದು ಮನವರಿಕೆ ಮಾಡಿಕೊಡಲು ಸ್ವತಃ ನಾನೂ ಸಹ ಶರಣ ಬಂಧುಗಳೊಡನೆ ಜೇಲ್ ಭರೋದಲ್ಲಿ ಭಾಗವಹಿಸುತ್ತಿದ್ದೇನೆಂದು ತಿಳಿಸಲು ಕೆಳಕಂಡಂತೆ ಧರ್ಮಜಾಗೃತಿ ಪ್ರವಾಸ ಹಾಕಿಕೊಳ್ಳಲಾಗಿತ್ತು.

ಕ್ರ.ಸಂ.	ಊರು	ದಿನಾಂಕ
1.	ಬೆಂಗಳೂರು	13-7-1996
2.	ನೆಲಮಂಗಲ	14-7-1996
3.	ತುಮಕೂರು	15-7-1996
4.	ಹಿರಿಯೂರು	16-7-1996
5.	ಚಳ್ಳಕೆರೆ	17-7-1996
6.	ಚಿತ್ರದುರ್ಗ	18-7-1996
7.	ಚಿಕ್ಕಮಗಳೂರು	19-7-1996
8.	ಭದ್ರಾವತಿ	20-7-1996

ಕ್ರ.ಸಂ.	ಊರು	ದಿನಾಂಕ
9.	ಶಿವಮೊಗ್ಗ	21-7-1996
10.	ಹುಬ್ಬಳ್ಳಿ	22-7-1996
11.	ಧಾರವಾಡ	23-7-1996
12.	ಗೋಕಾಕ	24-7-1996
13.	ಸಂಕೇಶ್ವರ	25-7-1996
14.	ನಿಪ್ಪಾಣಿ	26-7-1996
15.	ಹೇರವಾಡ	27-7-1996
16.	ಕೂಡಲಸಂಗಮ	28-7-1996
17.	ಗಂಗಾವತಿ	29-7-1996
18.	ಬಳ್ಳಾರಿ	30-7-1996
19.	ಲಿಂಗಸೂಗೂರು	31-7-1996
20.	ಬಸವನ ಬಾಗೇವಾಡಿ	1-8-1996
21.	ಬಿಜಾಪುರ	2-8-1996
22.	ಸಿಂದಗಿ	3-8-1996
23.	ಶಹಾಪುರ	4-8-1996
24.	ಸುರಪುರ	5-8-1996
25.	ದೇವದುರ್ಗ	6-8-1996
26.	ರಾಯಚೂರು	7-8-1996
27.	ಜೇವರ್ಗಿ	8-8-1996
28.	ಅಫಜಲಪುರ	9-8-1996
29.	ಆಳಂದ	10-8-1996
30.	ಚಿತಾಪುರ	11-8-1996
31.	ಸೇಡಂ	12-8-1996
32.	ಚಿಂಚೋಳಿ	13-8-1996
33.	ಬೀದರ್	14-8-1996
34.	ಔರಾದ್	15-8-1996
35.	ಭಾಲ್ಕಿ	16-8-1996
36.	ಹುಮನಾಬಾದ	17-8-1996
37.	ಗುಲಬರ್ಗಾ	18-8-1996

ದಿ: 18-8-1996 ರಂದು ಗುಲಬರ್ಗಾದಲ್ಲಿ ಬಹಿರಂಗ ಸಭೆ ಮಾಡಿ ದಿ. 19-8-1996 ಬಸವ ಪಂಚಮಿಯಂದು ಜೇಲ್‌ಭರೋ ಕಾರ್ಯಕ್ರಮ ಹಾಕಿಕೊಳ್ಳಲಾಗಿತ್ತು.

ಈ ವೇಳಾಪಟ್ಟಿ ಮತ್ತು ಪ್ರವಾಸದಲ್ಲಿ ಬದಲಾವಣೆಯಾಯಿತು. ದಿ.5-7-1996ರಂದು ರಾಷ್ಟ್ರೀಯ ಬಸವ ದಳದ ಕೆಲವರು ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಜೆ.ಹೆಚ್.ಪಟೇಲ್ ಅವರನ್ನು ಕಂಡಾಗ ಅವರು ವಿಧಾನಸಭಾ ಅಧಿವೇಶನ ಮುಗಿಯುವವರೆಗೆ ಚಳುವಳಿಯನ್ನು ತೀವ್ರಗೊಳಿಸಬಾರದೆಂದು ವಿನಂತಿಸುತ್ತ ನಂತರ ವಿವಿಧ ಸಂಘಟನೆಗಳವರನ್ನು ಕರೆಸಿ ಮಾತನಾಡಿ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸುವುದಾಗಿಯೂ ವಿವರಿಸಿದರಲ್ಲದೆ, ದಿ.7-7-1996 ರಂದು ರೇಡಿಯೋ ದೂರದರ್ಶನದ ಮೂಲಕ ಮನವಿಯನ್ನು ಸಹ ಮಾಡಿಕೊಂಡಿದ್ದಾರೆ ಮತ್ತು ದಿ.8-7-1996ರಂದು ಪತ್ರಿಕೆಗಳಲ್ಲೂ ಪ್ರಕಟಿಸಿದ್ದಾರೆ. ಹೀಗಾಗಿ ದಿ.8-7-1996ರಿಂದ ಆರಂಭವಾಗಲು ನಿರ್ಧರಿಸಿದ್ದ ಧರಣಿಯನ್ನು ಮತ್ತು 19-8-1996ರಂದು ಯೋಜಿಸಲಾಗಿದ್ದ ಜೇಲ್‌ಭರೋವನ್ನು ಮುಂದೂಡಲಾಗಿದೆ.

800ನೆಯ ಬಸವ ಲಿಂಗೈಕ್ಯ ಪಂಚಮಿಯನ್ನು ಎಲ್ಲೆಡೆಯಲ್ಲಿ ಬಸವ ತತ್ವಾನುಯಾಯಿಗಳೂ ಲಿಂಗಾಯತ ಧರ್ಮಿಯರು ಭಕ್ತಿಪೂರ್ವಕವಾಗಿ ಆಚರಿಸಲಿ, ಈ ಹೋರಾಟ ನಡೆದಿದ್ದುದರಿಂದ ಎಪ್ರಿಲ್‌ನಲ್ಲಿ ಒದಗಿ ಬಂದ ಬಸವ ಜಯಂತಿಯಂದು ಎಷ್ಟೋ ಕಡೆ ಶರಣ ಬಂಧುಗಳು ಮೆರವಣಿಗೆ ಏರ್ಪಡಿಸಿರಲಿಲ್ಲ. ಆದರೆ ಲಿಂಗೈಕ್ಯದಿನದಂದು ಪೂಜಾವ್ರತದ ಜೊತೆಗೆ ಮೆರವಣಿಗೆ ಮಾಡುವುದು ಕಡ್ಡಾಯ ಕರ್ತವ್ಯವಾಗಿದೆ.

ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲರು ಮತ್ತು ಅವರ ಸಚಿವ ಸಂಪುಟದ ಸಹೋದ್ಯೋಗಿಗಳು ವಿವೇಕೋದಯವಾಗಿ ನ್ಯಾಯಾನ್ಯಾಯಗಳ ವಿಮರ್ಶೆ ಮಾಡುವ ಸದ್ಬುದ್ಧಿ ಬಂದು ಕರ್ನಾಟಕ ಸರಕಾರದ ಕೊಡುಗೆಯನ್ನಾಗಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವ ಪಂಚಮಿ (19-8-1996)ಯ ಒಳಗೆ ಬಸವೇಶ್ವರರ ಹೆಸರನ್ನು ಘೋಷಿಸಿ ಕೀರ್ತಿವಿಶೇಷಿತರಾಗುವರೆಂದು ನಿರೀಕ್ಷಿಸೋಣ. ಅಷ್ಟರವರೆಗೂ ಆಗದೆ ಇದ್ದರೆ ಅಂದು ಒಂದು ನಿರ್ದಿಷ್ಟ ದಿನಾಂಕವನ್ನು ಘೋಷಿಸಲಾಗುವುದು; ಧರಣಿ ಸತ್ಯಾಗ್ರಹ ಪ್ರಾರಂಭವಾದ ಒಂದು ವಾರದಲ್ಲಿ ಜೇಲ್‌ಭರೋ ಕಾರ್ಯಕ್ರಮವಿರುವುದು. ಆಗ ಈಗಾಗಲೇ ಉಲ್ಲೇಖಿಸಲಾಗಿರುವ 37 ಊರುಗಳನ್ನು ಸಂದರ್ಶಿಸಲು ಸಮಯಾವಕಾಶಕ್ಕೆ ತಕ್ಕಂತೆ ಆಯ್ದು ಸಂದರ್ಶಿಸಲಾಗುವುದು. ಮಾಹಿತಿಯುಳ್ಳ ಕರಪತ್ರಗಳನ್ನು ರಾಷ್ಟ್ರೀಯ ಬಸವ ದಳಗಳಿಗೆ ಕಳಿಸಲಾಗುವುದು. ಅವರೇ ಪ್ರಚಾರ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗುತ್ತದೆ. ಈಗಲಾಗಿದ್ದರೆ ಸಂಜೆಯ ವೇಳೆ 37 ಊರುಗಳನ್ನು, ಬೆಳಗಿನ ವೇಳೆ ಸಮೀಪದ ಗ್ರಾಮಗಳನ್ನು ಸಂದರ್ಶಿಸಲು ವಿಪುಲ ಅವಕಾಶವಿತ್ತು. ಮುಖ್ಯಮಂತ್ರಿಗಳು ಕಳಕಳಿಯಿಂದ ಅಧಿವೇಶನ ಮುಗಿಯುವವರೆಗೂ ಸಮಾಯಾವಕಾಶ ಕೇಳಿರುವುದರಿಂದ ಅನಿವಾರ್ಯವಾಗಿ ಈ ಪ್ರಚಾರ ಕಾರ್ಯಕ್ರಮ ಕೈಬಿಡಲಾಗಿದೆ.

ಆದರೆ, ಶರಣ ಬಂಧುಗಳೇ ಈಗ ತಮ್ಮ ಹೊಣೆಗಾರಿಕೆ ಬಹಳವಿದೆ. ಸರ್ಕಾರದ ನೇತಾರರು ನೀಡುವ ಹುಸಿಭರವಸೆಗಳನ್ನು ನಂಬಿ ಚಳುವಳಿ ಶಕ್ತಿಯುತವಾಗಿದ್ದಾಗ ನಾವು ಹಿಂತೆಗೆದುಕೊಳ್ಳುತ್ತಿದ್ದೇವೆ ಎಂದು ಅನೇಕರು ಆಕ್ಷೇಪಿಸುತ್ತಿದ್ದಾರೆ ಮತ್ತು ದಿ.27-5-1996 ರಂದು ಮಾತು ಕೊಟ್ಟದಿನ ಮುಖ್ಯಮಂತ್ರಿ ಶ್ರೀ ದೇವೇಗೌಡರು ಅಂದಿನಿಂದ 15 ದಿವಸಗಳೊಳಗಾಗಿ ಮಾಡುತ್ತೇವೆ ಎಂದಿದ್ದರು. 15 ದಿವಸಗಳೇನು ತಿಂಗಳ ಮೇಲೆ ಆಗಲೇ 10-12 ದಿನ ಸರಿದು ಹೋದವು, ನೀವೇಕೆ ಚಳುವಳಿ ನಿಲ್ಲಿಸಿಬಿಟ್ಟಿರಿ ಎಂದು ಕೆಲವರು? ಮತ್ತೆ ಏಕೆ ತೀವ್ರಗೊಳಿಸಿಲ್ಲ ಎಂದು ಮತ್ತೆ ಕೆಲವರು ಕೇಳುತ್ತಿದ್ದಾರೆ.

"ನಾವು ಚಳುವಳಿಯನ್ನು ಪೂರ್ತಿ ನಿಲ್ಲಿಸಿಲ್ಲ. ಗುಲ್ಬರ್ಗಾ-ಬೀದರ ನಗರಗಳಲ್ಲಿ ಅವ್ಯಾಹತವಾಗಿ ನಡೆಯುತ್ತಲೇ ಇದೆ. ತೀವ್ರ ಸ್ವರೂಪ ನೀಡದೆ ಇರಲು ಕಾರಣ

ಸರ್ಕಾರದ ನೇತಾರರು ಕೇವಲ ವಿನಂತಿಸುತ್ತಿರುವುದಷ್ಟೆ ಅಲ್ಲದೆ ವಿವಿಧ ಸಂಘಟನೆಗಳವರೊಡನೆ ಅವರು ಚರ್ಚಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅಲ್ಲದೆ ಸರ್ಕಾರದ ರಾಜಕೀಯ ಸಮಸ್ಯೆಗಳು ಕ್ಷಣಕ್ಕೊಮ್ಮೆ ಏರಿಳಿತ ಕಾಣುತ್ತಿರುವುದು ಎಲ್ಲರಿಗೆ ಸ್ಪಷ್ಟವಿದೆ. ನಾವು ಪತ್ರಿಕಾ ಹೇಳಿಕೆಗಳನ್ನು ಕೊಡುತ್ತಿಲ್ಲವಾದ್ದರಿಂದ ಚಳುವಳಿ ನಿಲ್ಲಿಸಿದ್ದೇವೆಂದು ಯಾರೂ ತಪ್ಪು ಭಾವಿಸಬಾರದು. ಗುರಿ ಸಾಧನೆಯಾಗುವವರೆಗೆ ಚಳುವಳಿ ನಿಲ್ಲಿಸುವ ಅಥವಾ ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಉದ್ಭವಿಸದು.

ಬಸವ ಪಂಚಮಿ (ದಿ. 19-8-1996)ಯೊಳಗೆ ಬಸವೇಶ್ವರರ ಹೆಸರು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಘೋಷಣೆಯಾಗದಿದ್ದರೆ ಸರತಿ ಉಪವಾಸ ಸತ್ಯಾಗ್ರಹ ಮತ್ತು ಜೇಲ್ ಭರೋದ ದಿನಾಂಕಗಳನ್ನು ಘೋಷಿಸಲಾಗುವುದು. ಆ ದಿನಾಂಕಗಳನ್ನು ತಾವು ಉತ್ಸಾಹದಿಂದ ಎದುರು ನೋಡುವುದೇ ಅಲ್ಲದೆ, ಯಶಸ್ವಿ ಜೇಲ್‌ಭರೋ ಆಂದೋಲನಕ್ಕಾಗಿ ಸಿದ್ಧತೆ ಮಾಡಿಕೊಳ್ಳಿರಿ, ಪ್ರಚಾರ ಮಾಡಿರಿ, ಸಂಘಟನೆ ಮಾಡಿರಿ.

ಸಂಘಟನೆಯಲ್ಲಿ ಶಕ್ತಿ ಇದೆ.

ಶಕ್ತಿ ಇರುವುದು ಸಂಖ್ಯಾಬಲದಲ್ಲಿ ಅಲ್ಲ, ಸಂಘಟನೆಯಲ್ಲಿ !

- ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ.

ಶರಣ ಸಂಸ್ಕೃತಿಗೆ ಸಂಬಂಧಪಟ್ಟಂತೆ ಆಗಸ್ಟ-ಸೆಪ್ಟಂಬರ್-ಅಕ್ಟೋಬರ್ ತಿಂಗಳಲ್ಲಿ ಬರುವ ಹಬ್ಬ-ಹುಣ್ಣಿಮೆ-ಉತ್ಸವ

೧. ಸ್ವಾತಂತ್ರ್ಯೋತ್ಸವ	ಆಗಸ್ಟ ೧೫
೨. ೮೦೦ನೆಯ ಬಸವ ಲಿಂಗೈಕ್ಯ ದಿನಾಚರಣೆ	ಆಗಸ್ಟ ೧೯
೩. ೮೦೦ನೆಯ ನೀಲಾಂಬಿಕಾ ಲಿಂಗೈಕ್ಯ ದಿನಾಚರಣೆ	ಆಗಸ್ಟ ೨೦
೪. ಲಿಂ|| ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ೬೬ನೆಯ ಜಯಂತಿ	ಸೆಪ್ಟಂಬರ್ ೧೬
೫. ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ	ಸೆಪ್ಟಂಬರ್ ೧೬
೬. ಪೂಜ್ಯಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ವರ್ಧಂತಿ	ಸೆಪ್ಟಂಬರ್ ೧೬
೭. ಅಕ್ಕನಾಗಲಾಂಬಿಕಾ ಸಂಸ್ಮರಣೆ ಬಸವ ಧರ್ಮ ವಿಜಯೋತ್ಸವ	ಅಕ್ಟೋಬರ್ ೨೧

॥ ಓಂ ಶ್ರೀ ಗುರು ಬಸವಲಿಂಗಾಯನಮಃ ॥

ಬಸವ ಕಿರಣ

ಪಾಕ್ಷಿಕ ಪತ್ರಿಕೆಯ ಪುನರಾರಂಭ
"ಬಸವ ಪಂಚಮಿ "ಗೆ
ವಿಶೇಷ ಸಂಚಿಕೆ

ಶರಣ ಬಂಧುಗಳೇ

ಶಿವಮೊಗ್ಗಾದಿಂದ ಶರಣ. ಡಿ.ಎಸ್. ವಿಜಯಕುಮಾರ್ ಅವರು "ಬಸವ-ಕಿರಣ" ಎಂಬ ಪಾಕ್ಷಿಕ ಪತ್ರಿಕೆಯನ್ನು ರಾಷ್ಟ್ರೀಯ ಬಸವ ದಳಗಳ ಸುದ್ದಿಗೆ ಹೆಚ್ಚಿನ ಮಹತ್ವ ನೀಡಿ ಪ್ರಕಟಿಸುತ್ತಿದ್ದರಷ್ಟೆ, ಆರ್ಥಿಕ ಅನಾನುಕೂಲತೆ ಮತ್ತಿತರ ಕಾರಣದಿಂದ ಪತ್ರಿಕೆಯು ನಿಂತುಹೋಗಿತ್ತು. ಇದೀಗ ಆ ಪತ್ರಿಕೆಯನ್ನು ಬಸವ ಧರ್ಮ ಪೀಠವು ವಹಿಸಿಕೊಂಡಿದ್ದು ೧/೨ ಕ್ರೌನ್ ಆಕಾರದ ೪ ಪುಟಗಳೊಡನೆ ಹೊರ ತರಲು ಯೋಚಿಸಿದೆ.

ವಿಶೇಷ ಸಂಚಿಕೆಯೊಂದನ್ನು ಬಸವ ಪಂಚಮಿಯಂದು, ಬೆಂಗಳೂರಿನಲ್ಲಿ ನಡೆಯಲಿರುವ ವಿಶೇಷ ಸಮಾರಂಭವೊಂದರಲ್ಲಿ ಬಿಡುಗಡೆ ಮಾಡಲಾಗುವುದು. ವರ್ಷಕ್ಕೊಂದು ವಿಶೇಷ ಸಂಚಿಕೆಯೂ ಸೇರಿ ವಾರ್ಷಿಕ ಚಂದಾ ೪೦ ರೂ. ಎರಡು ವರ್ಷದ್ದು ೭೫ ರೂ. ಬಸವ ಧರ್ಮಪೀಠ, ರಾಷ್ಟ್ರೀಯ ಬಸವ ದಳ, ವಿಶ್ವಧರ್ಮ ಪ್ರವಚನ ಇವಕ್ಕೆ ಸಂಬಂಧಿಸಿ ತ್ವರಿತವಾಗಿ ಓದುಗರಿಗೆ ಸುದ್ದಿ ಮುಟ್ಟಿಸಲು ಪಾಕ್ಷಿಕ ಪತ್ರಿಕೆಯೊಂದರ ಅಗತ್ಯವಿರುವ ಕಾರಣ, ವಾರ್ಷಿಕ ಚಂದಾ ೪೦ ರೂ. ಎರಡು ವರ್ಷದ್ದು ೭೫ ರೂ ಹಣವನ್ನು ಎಂ.ಓ. ಅಥವಾ ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಿರಿ.

ಸಂಪಾದಕ ಮಂಡಳಿ

ಮಾರ್ಗದರ್ಶನ:
ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ

ಪ್ರಧಾನ ಸಂಪಾದಕರು:
ಶರಣ. ವಿಜಯಾನಂದರು, ಬಿ.ಎಸ್.ಸಿ

ಕಾರ್ಯನಿರ್ವಾಹಕ ಸಂಪಾದಕರು
ಶರಣ. ಶಿವಕುಮಾರ ಡಾಕುಳಗೆ, ಎಂ.ಎ

ಉಪ ಸಂಪಾದಕರು
ಶರಣ. ಕರಿಬಸಪ್ಪ ಕೋರಿಶೆಟ್ಟರು. ಬಿ.ಎ.

ಸಾರ್ವಜನಿಕ ಸಂಪರ್ಕಾಧಿಕಾರಿ:
ಶರಣ. ಜಗದೀಶ ಐಹೊಳ್ಳಿ, ಡಿ.ಟಿ.ಡಿ.ಎಂ
ಶರಣ. ಮಹಾಂತೇಶ ಹಂಪನ್ನವರ್, ಬಿ.ಇ.

ಧರ್ಮ ಜಾಗೃತಿ, ತ್ವರಿತಗತಿಯಲ್ಲಿ ಸುದ್ದಿಯನ್ನು, ಆದೇಶವನ್ನೂ ಪಡೆಯುವ ದಿಶೆಯಲ್ಲಿ ಅನುಕೂಲಕರವಾಗುವ "ಬಸವ-ಕಿರಣ"ಪಾಕ್ಷಿಕ ಪತ್ರಿಕೆಗೆ ಚಂದಾದಾರರಾಗಿರಿ. ಪತ್ರಿಕೆಯನ್ನು ಪೋಷಿಸುವ ಸಲುವಾಗಿ ಉದಾರವಾದ ದೇಣಿಗೆಯನ್ನು ನೀಡಬಹುದು.

ಬಸವ-ಕಿರಣ ಪಾಕ್ಷಿಕ ಪತ್ರಿಕೆ
ಬಸವ ಮಂಟಪ, ೨೦೩೫, ೨೦ನೆಯ ಮೆಯಿನ್
೨ನೆಯ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦೦೧೦
ದೂರವಾಣಿ : ೩೩೨೫೩೩೫

ಬಸವ ಕಿರಣ ಪಾಕ್ಷಿಕ ಪತ್ರಿಕೆಗೆ ಜಾಹಿರಾತು ವಿವರ

ಆಫ್‌ಸೆಟ್ ಮುದ್ರಣ, ೧/೨ ಕ್ರೌನ್ ಆಕಾರದ ಆರಂಭದಲ್ಲಿ ನಾಲ್ಕು ಪುಟಗಳು, ಸಿಂಗಲ್ ಕಲರ್, ಪ್ರತಿ ಸಂಚಿಕೆಗೆ

ಪೂರ್ಣಪುಟ	೨೦೦೦ ರೂ
ಅರ್ಧಪುಟ	೧೦೦೦ ರೂ
೧೦ ಸೆಂ.ಮಿ x ೧೮ ಸೆಂ.ಮಿ	೫೦೦ ರೂ
೧೦ ಸೆಂ.ಮಿ x ೯ ಸೆಂ.ಮಿ	೨೭೫ ರೂ

ಪ್ರಚಾರ ದೃಷ್ಟಿಯಿಂದ ಕೊಡುವವರು, ಬಸವ-ಕಿರಣವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕೊಡುವವರು ಮಾತ್ರವಲ್ಲದೆ ದಾನಿಗಳು ಸಹ ಜಾಹಿರಾತು ನೀಡಬಹುದು. ವ್ಯಾಪಾರ, ವಾಣಿಜ್ಯ ಉದ್ಯಮ ಇಲ್ಲದಿದ್ದರೂ ದಾನಿಗಳು ದೇಣಿಗೆ ನೀಡಿದರೆ ವಚನ ಸಾಹಿತ್ಯದ ಸಂದೇಶವನ್ನು ಅವರ ಹೆಸರಿನಲ್ಲಿ ಪ್ರಚಾರ ಮಾಡಲಾಗುವುದು.

ಶರಣರ ಜಯಂತಿ, ಲಿಂಗೈಕ್ಯ ದಿನ, ಸಂಸ್ಮರಣಾ ಕಾರ್ಯಕ್ರಮ, ವಿವಾಹ ವಾರ್ಷಿಕೋತ್ಸವ, ಜನ್ಮ ದಿನೋತ್ಸವ ಇತ್ಯಾದಿ ವಿಶೇಷ ವಿಷಯ ಕುರಿತು ಜಾಹಿರಾತು ನೀಡಬಹುದು.

ವಿಶೇಷ ಸೂಚನೆ

ವಿಶೇಷ ಸಂಚಿಕೆ ಹೊರತರುವಾಗ ಬಹುವರ್ಣ ಸಹಿತ ಹೊದ್ದಿಕೆಗಳನ್ನು ಮಾಡಲಾಗುವುದು. ವಿಶೇಷ ವಿನ್ಯಾಸ ಹೊಂದಿರುವ ಅಂಥ ಸಂಚಿಕೆಗಳ ಸಂಖ್ಯೆಯೂ ಹೆಚ್ಚಾಗಿರುವುದರಿಂದ ಜಾಹಿರಾತು ದರಗಳನ್ನು ಬದಲಿಸುವ ಸಾಧ್ಯತೆ ಇರುವುದು. ವಿವರಗಳನ್ನು ನೇರವಾಗಿ ಪಡೆಯಬಹುದು.

೨. ಕ್ರಾಂತಿ ಯೋಗಿ

ಮಠದ ಸಂಪ್ರದಾಯಗಳಿಂದ ಸಿಡಿದು
ಬಸವ ತತ್ವಕ್ಕೆ ಮನವ ಸೆಳೆದು
ಕಾಲೇಜು ಓದುವ ವಿದ್ಯಾರ್ಥಿ
ನೀವಾದಿರಿ ಧರ್ಮದ ಸಾರಥಿ
ಜಾತಿ ಮತ ಪಂಥದೆಲ್ಲೆಗಳ ಮೀರಿ
ವಿಶ್ವಧರ್ಮದತ್ತ ಏರಿ
ಮೂಢ ಸಂಕೋಲೆಗಳ ಹರಿದು
ತತ್ವದಾಳಕ್ಕೆ ಇಳಿದು
ಅನುಭವದಮೃತ ಹೊತ್ತು ತಂದು
ಜಗಕೆ ಇತ್ತಿರಿ ಹರುಷತುಂಬಿ
ಮಹಿಳಾ ಗುರುವ ಮಾಡಿ
ಪೂಜ್ಯರಾದಿರಿ ಹೆಣ್ಣು ಕುಲಕೆ
ಸರಳ ತತ್ವವ ಸುರಳಿತವಾಗಿ
ಸುರಿದಿರಿ ಸರ್ವರ ಹೃದಯಕೆ
ಆವರಿವರೆನ್ನದೆ ಬಸವ ಬೆಳಕ
ಚೆಲ್ಲವರಿದಿರಿ ಮನೆ-ಮನಗಳತನಕ
ದೇಹ ಮರೆಯಾಯಿತು ವರುಷದ ಹಿಂದೆ
ಪ್ರವಚನ ಉಳಿಯಿತು ಧ್ವನಿ ಸುರುಳಿಯಲ್ಲೂ ಮುಂದೆ

ವಚನ ಮೌಕ್ತಿಕ

೧. ಅರಿತು ಮಾತನಾಡುವುದು
ದುಡುಕಿ ನೋಯುವುದು ಬೇಡ ಆಡಿ ಚಿಂತಿಸುವುದು ಬೇಡ
ಆಡುವ ಮುನ್ನ ಯೋಚನೆ
ಮಾಡುವ ಚಿಂತನ ಶಕ್ತಿಯ ಕರುಣಿಸಾ
ಮಾತಾ ಪ್ರಿಯ ಸಚ್ಚಿದಾನಂದಾ

೨. ದೀಕ್ಷೆ, ಶಿಕ್ಷೆಗಳ ನೀಡಿದರು ಪೂಜ್ಯ ಮಾತಾಜಿ
ಜ್ಞಾನವ ಧಾರೆಯೆರೆದರು ಶ್ರೀ ಗುರು ಅಪ್ಪಾಜಿ
ಗುರು ಬಸವ ಪಥದಲಿ ಮುನ್ನಡೆಸುತ್ತಾ, ಶರಣರ ಸತ್ಸಂಗದಲ್ಲಿರಿಸಿ,
ಅರಿವಿನ ಮಾರ್ಗವ ತೋರಿದ ಪೂಜ್ಯ ಗುರುದ್ವಯರಿಗೆ
ನಮೋ ನಮೋ ಎಂಬೆನಯ್ಯಾ ಮಾತಾ ಪ್ರಿಯ ಸಚ್ಚಿದಾನಂದಾ

- ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ
ಕೂಡಲಸಂಗಮ

ಬಸವ ಪಂಚಮಿ ಆಚರಣೆ

ಕಡ್ಡಾಯ ಕರ್ತವ್ಯ

ಜಯ ಬಸವರಾಜ ಭಕ್ತಜನ ಸುರಭೂಜ
ಜಯತು ಮಹಕಾರಣಿಕ ಪರಶಿವನ ನಿಜ ತೇಜ
ಜಯತು ಕರುಣಾಸಿಂಧು ಭಜಕ ಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀ ಗುರು ಬಸವಾ॥

ವಿಶ್ವಗುರು ಬಸವಣ್ಣನವರು ಆನಂದ ನಾಮ ಸಂವತ್ಸರದಲ್ಲಿ (ಕ್ರಿ.ಶ.೧೧೩೪) ಜನಿಸಿ, ೬೨ ವರ್ಷ ೩ ತಿಂಗಳು ೨ ದಿನಗಳ ಕಾಲ ಇಳೆಯ ಮೇಲಿದ್ದು ನಳ ನಾಮ ಸಂವತ್ಸರದ ಶ್ರಾವಣಶುದ್ಧ ಪಂಚಮಿ ಮಂಗಳವಾರದಂದು (೨-೭-೧೧೯೬) ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆದ ನದಿಯಂತೆ ಪರಮಾತ್ಮನಲ್ಲಿ ಬಯಲಾದರು. ಅವರು ಲಿಂಗೈಕ್ಯರಾದ ದಿನ ಬಸವ ಪಂಚಮಿ ಎಂದು ಖ್ಯಾತಿವೆತ್ತಿದೆ. ಇದೇ ವರ್ಷದ ಬಸವ ಪಂಚಮಿಯು ಸೋಮವಾರ ದಿ. ೧೯-೮-೧೯೯೬ರಂದು ಒದಗಿ ಬಂದಿದೆ. ಅಂದಿಗೆ **ಪೂಜ್ಯ ಧರ್ಮಪಿತ ಬಸವಣ್ಣನವರು** ಲಿಂಗೈಕ್ಯರಾಗಿ ಸರಿಯಾಗಿ ೮೦೦ ವರ್ಷಗಳು ಪೂರೈಸುತ್ತಿವೆ. ಈ ಮಹತ್ವಪೂರ್ಣ **ಲಿಂಗೈಕ್ಯ ಸಂಸ್ಮರಣಾ ಅಷ್ಟ ಶತಮಾನೋತ್ಸವವನ್ನು** ಪ್ರತಿಯೊಬ್ಬರೂ ಆಚರಿಸಬೇಕಾದುದು ಕರ್ತವ್ಯವಾಗಿದೆ.

ಬೆಂಗಳೂರು ನಗರದ ಕೆ.ಆರ್. ರಸ್ತೆಯಲ್ಲಿರುವ **ಕುವೆಂಪು ಕಲಾಕ್ಷೇತ್ರ** (ಪೋರ್ಟ ಹೈಸ್ಕೂಲ್ ಸರ್ಕಲ್ ಬಳಿ)ದಲ್ಲಿ ದಿ. ೧೯-೮-೧೯೯೬ರಂದು ವಿಶೇಷ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿದೆ. ಬಸವ ಧರ್ಮದ ಮಹಾಜಗದ್ಗುರು ಪೀಠಾದ್ಯಕ್ಷೆ **ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ**ಯವರ ದಿವ್ಯ ಸನ್ನಿಧಿ ಮತ್ತು ಮಾರ್ಗದರ್ಶನದಲ್ಲಿ ಬೆಳಿಗ್ಗೆ ೧೦ ಗಂಟೆಗೆ ಶರಣ ಸಮಾಗಮ ಎಂಬ ಗಣ ಸಮ್ಮೇಳನ, ವಚನ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ. ಸಮಾರಂಭದ ನಂತರ ಪ್ರಸಾದ ದಾಸೋಹವಿದೆ. ಪ್ರಸಾದಾನಂತರ **ಶ್ರೀ ಗುರು ಬಸವಣ್ಣನವರ** ಭಾವಚಿತ್ರದೊಡನೆ ಮೆರವಣಿಗೆ ಮತ್ತು ಪಥ ಸಂಚಲನ ಕಾರ್ಯಕ್ರಮವಿದೆ.

ಆದ್ದರಿಂದ ಬೆಂಗಳೂರು ನಗರ ಮತ್ತು ಜಿಲ್ಲೆಯ, ಸಮೀಪದ ಊರುಗಳವರು ಈ ಸಮಾರಂಭದಲ್ಲಿ ಮತ್ತು ಮೆರವಣಿಗೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ. ಪೂಜ್ಯ ಗುರು ಬಸವಣ್ಣನವರು ಲಿಂಗೈಕ್ಯರಾಗಿ ೮೦೦ ವರ್ಷ ತುಂಬುವ ದಿನವಾದುದರಿಂದ ನಮ್ಮ ಭಕ್ತಿ, ಶ್ರದ್ಧೆ, ಕೃತಜ್ಞತೆಗಳನ್ನು ಸಮರ್ಪಿಸುವುದು ಅತ್ಯಂತ ಅಗತ್ಯ. ವ್ಯಾಪಾರಸ್ಥರು ತಮ್ಮ ಅಂಗಡಿ ವ್ಯವಹಾರವನ್ನು ನಿಲ್ಲಿಸಿ, ಸರ್ಕಾರಿ ಮತ್ತು ಖಾಸಗಿ ಉದ್ಯೋಗಿಗಳು ರಜೆ ಹಾಕಿ ಬರಬೇಕು. ನಾಗರ ಪಂಚಮಿ ಎಂದು ಹುತ್ತ ಮತ್ತು ಕಲ್ಲುನಾಗರಕ್ಕೆ ಹಾಲೆರೆಯುವ ಮೂಢ ಭಕ್ತರು ಪ್ರಾಣಿಪೂಜೆಯು ಅತ್ಯಂತ ಕನಿಷ್ಠವಾದ ಉಪಾಸನೆ ಎಂದು ಶ್ರೇಷ್ಠ ಸುಧಾರಕ

ಬಸವಣ್ಣನವರು ೮ ಶತಮಾನಗಳ ಹಿಂದೆ ಬೋಧಿಸಿರುವುದರಿಂದ ನಾಗರ ಪಂಚಮಿ ಆಚರಿಸುವ ಬದಲು ಬಸವ ಪಂಚಮಿ ಆಚರಿಸಬೇಕು, ಬಸವ ಪಂಚಮಿಯಂದು ಶ್ರೀ ಬಸವೇಶ್ವರ ಪೂಜಾವ್ರತ ನೆರವೇರಿಸುವ ಧಾರ್ಮಿಕ ಸಂಪ್ರದಾಯವಿರುವುದರಿಂದ, ಬೆಳಿಗ್ಗೆ ಬೇಗನೇ ಮನೆಯಲ್ಲಿ ಪೂಜಾವ್ರತ ಪೂರೈಸಿ ಶರಣ ಬಂಧುಗಳು ಸಮಾರಂಭಕ್ಕೆ ಆಗಮಿಸಬೇಕು ಅಥವಾ ಹಿಂದಿನ ದಿನ ೧೮-೮-೧೯೯೬ ಭಾನುವಾರ ಇರುವುದರಿಂದ ಅಂದೇ ಸವಿವರವಾದ ಬಸವೇಶ್ವರ ಪೂಜಾವ್ರತ ಪೂರೈಸಿ, ಸೋಮವಾರ ಸಂಕ್ಷಿಪ್ತ ಪೂಜೆ ಮಾಡಿರಿ. ಶಾಲೆ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳೂ ಅಂದು ರಜೆ ಪಡೆದು ಸಮಾರಂಭದಲ್ಲಿ ಭಾಗವಹಿಸಬೇಕು.

ಧರ್ಮಗುರು ನಿಷ್ಠೆ - ಏಕಗುರೂಪಾಸನೆ

ಸ್ವಾತಂತ್ರ- ಸಮಾನತೆ- ಸೋದರತ್ವಗಳೆಂಬ ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆಯುಳ್ಳ ಯಾರೇ ಆದರೂ ಶ್ರೀ ಗುರು ಬಸವಣ್ಣನವರನ್ನು ಗೌರವಿಸಬೇಕು. ಏಕೆಂದರೆ ಜಗತ್ತಿನಲ್ಲಿ ಪ್ರಜಾಪ್ರಭುತ್ವವು ಇನ್ನೂ ಆಲೋಚಿಸಲ್ಪಡದ ಪರಿಸ್ಥಿತಿಯಲ್ಲಿ ಇದ್ದಾಗಲೇ ಬಸವಣ್ಣನವರು ಪ್ರಜಾಪ್ರಭುತ್ವದ ರೂಪುರೇಷೆ ಹಾಕಿಕೊಟ್ಟಿದ್ದಾರೆ. ಅವರ ಪರಿಕಲ್ಪನೆಯ 'ಶರಣ ಸಮಾಜ' ರಚನೆಯಂತೂ ಜಾತಿ ವರ್ಣ ವರ್ಗ ಲಿಂಗಭೇದ ರಹಿತವಾದುದು. ಇಷ್ಟಲಿಂಗ ಎಂಬ ದೇವ ಸೂಚಕ ಗಣಲಾಂಛನವನ್ನು ನೀಡಿ ಒಂದು ಆದರ್ಶ ಸಮುದಾಯವನ್ನು ಮಾನವ ಜನಾಂಗದ ಒಳಗಿನಿಂದ ಎಬ್ಬಿಸಲು ಯತ್ನಿಸಿದರು. ಲಿಂಗಾಯತ ಧರ್ಮದ ಆದ್ಯರು, ಆತ್ಮ ಸ್ವರೂಪರೂ ಆದ ಬಸವಣ್ಣನವರನ್ನು ಧರ್ಮಗುರುವೆಂದು ನಂಬಿ ಏಕ ಗುರು ನಿಷ್ಠೆಯನ್ನು ಬೆಳೆಸಿಕೊಳ್ಳುವುದು ಲಿಂಗಾಯತರ ಕರ್ತವ್ಯವಾಗಿದೆ. ಮನೆದೈವ, ಕುಲದೈವ. ಜಾತಿದೈವ, ಗ್ರಾಮದೈವಗಳ ಮೂಢನಂಬಿಕೆಯ ಹಾವಳಿಯಲ್ಲಿ ಸೃಷ್ಟಿಕರ್ತ ಪರಮಾತ್ಮನ ಸ್ಥಾನವು ಕಡೆಗಣಿಸಲ್ಪಟ್ಟಂತೆ, ಮನೆಗುರು, ಕುಲಗುರು, ದೀಕ್ಷಾಗುರು, ಜಾತಿಗುರುಗಳ ಗೊಂದಲದಲ್ಲಿ ಧರ್ಮಗುರುವಿನ ಸ್ಥಾನವು ಕಡೆಗಣಿಸಲ್ಪಟ್ಟಿದೆ. ಈ ಬಹುಗುರುಗಳ ಸಮುದಾಯವೇ ಲಿಂಗಾಯತ ಸಮಾಜದ ಅನೈಕ್ಯತೆಗೆ ಕಾರಣವಾಗಿದೆ: ಸಂಘಟನೆಗೊಳ್ಳದಂತೆ ಸಮಾಜವನ್ನು ದುರ್ಬಲಗೊಳಿಸುತ್ತಿದೆ. ಕಾಲು ನಡಿಗೆ, ಸೈಕಲ್, ಸ್ಕೂಟರ್, ಆಟೋ ಕಾರುಗಳಲ್ಲಿ ವಿದೇಶ ಪ್ರಯಾಣ ಸಾಧ್ಯವಾಗದು. ವಿಮಾನದ ನೆರವಿನಿಂದಲೇ ದೂರ ಪ್ರಯಾಣ ಸಾಧ್ಯ. ಹಾಗೆಯೇ ಕುಲಗುರು, ಜಾತಿಗುರು, ದೀಕ್ಷಾಗುರುವಿಗಿಂತಲೂ ಧರ್ಮ ಗುರುವಿನಲ್ಲಿ (ಮುಸ್ಲೀಮ್, ಕ್ರೈಸ್ತರು ಹೊಂದಿರುವಂತೆ) ಏಕನಿಷ್ಠೆ ಬೆಳೆಸಿಕೊಂಡಾಗಲೇ ಸುಭದ್ರ ಸಮಾಜ ರಚನೆ, ಭಾವೈಕ್ಯತೆ ಸಾಧ್ಯ.

ಆದ್ದರಿಂದ ಪ್ರಥಮ ಸಮತಾವಾದಿ, ಪ್ರಗತಿಪರ ಚಿಂತಕರಾದ, ಪರಮಾತ್ಮನ ಪ್ರತಿನಿಧಿ, ಕಾರಣಿಕ ಗುರುವಾದ ಬಸವಣ್ಣನವರಲ್ಲಿ ಅಖಂಡ ಭಕ್ತಿ ಶ್ರದ್ಧೆಇಟ್ಟು ಅವರ ಆದೇಶದಂತೆ ನಡೆಯುವ ಸಂಕಲ್ಪವನ್ನು ಮಾಡೋಣವೆಂದು.

ವಿಶೇಷ ಸಾಮೂಹಿಕ ಪ್ರಾರ್ಥನೆ

ರಾಜಾಜಿನಗರದ ಬಸವ ಮಂಟಪದಲ್ಲಿ ಬಸವ ಪಂಚಮಿ ನಿಮಿತ್ತ ಶ್ರಾವಣ ಪ್ರತಿಪದೆ ದಿ.೧೫-೮-೧೯೯೬ ರಿಂದ ಪ್ರತಿದಿನ ವಿಶೇಷ ಪೂಜಾವ್ರತವು ಬೆಳಿಗ್ಗೆ ೭-೩೦ರಿಂದ ಇರುವುದು. ಸದ್ಭಕ್ತರು ತಮ್ಮ ತಮ್ಮ ಹೆಸರಿನಲ್ಲಿ ಪೂಜಾವ್ರತ ಮಾಡಿಸಬಹುದು.

ಭಾನುವಾರ ದಿ. ೧೮-೮-೧೯೯೬ ರಂದು ಬೆಳಿಗ್ಗೆ ೧೧ ರಿಂದ ೧ ಗಂಟೆಯವರೆಗೆ ಸಾಮೂಹಿಕ ಪ್ರಾರ್ಥನೆ ಮತ್ತು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ ''ವಿಶೇಷ ಪ್ರವಚನ'' ವಿರುತ್ತದೆ.

ಧನ ದಾಸೋಹಿಗಳಲ್ಲಿ ಕೋರಿಕೆ

ಸೋಮವಾರ, ದಿ.೧೯-೮-೧೯೯೬ ರಂದು ಏರ್ಪಡಿಸಲಾದ ೮೦೦ ನೆಯ ''ಬಸವ ಲಿಂಗೈಕ್ಯ ದಿನಾಚರಣೆ'' ಯ ನಿರ್ವಹಣೆಗಾಗಿ ದಾನಿಗಳಿಂದ ಉದಾರವಾದ ದೇಣಿಗೆ ನಿರೀಕ್ಷಿಸಲಾಗಿದೆ. ಕಾರ್ಯಕ್ರಮದ ನಂತರ ''ಪ್ರಸಾದ ದಾಸೋಹ'' ದ ವ್ಯವಸ್ಥೆ ಇರುತ್ತದೆ. ಮೆರವಣಿಗೆ ಮತ್ತು ಪಥ ಸಂಚಲನವನ್ನೂ ಏರ್ಪಡಿಸಲಾಗುವುದು.

೧. ಪೋಷಕರು	೫೦೦೦ ರೂ
೨. ದಾನಿಗಳು	೩೦೦೦ ರೂ
೩. ಹಿತೈಷಿಗಳು	೧೦೦೦ ರೂ
೪. ಅಭಿಮಾನಿಗಳು	೫೦೦ ರೂ
೫. ಸದ್ಭಕ್ತರು	೨೫೦ ರೂ

ಸಹೃದಯರು ತಮ್ಮ ಶಕ್ತ್ಯಾನುಸಾರ ಧನ ಸಹಾಯ ಮಾಡಬಹುದು

ಕಾರ್ಯಕ್ರಮ ನಿರ್ವಹಣೆ, ಪ್ರಸಾದ ದಾಸೋಹ ಮುಂತಾದ ಎಲ್ಲ ಖರ್ಚುವೆಚ್ಚ ನಿಭಾಯಿಸಿ, ಹಣ ಉಳಿದರೆ ಅದನ್ನು ಬೆಂಗಳೂರು-ಮೈಸೂರು ಹೆದ್ದಾರಿಯ ೨೧ ಕಿ.ಮೀ ದೂರದಲ್ಲಿರುವ ಬಸವ ಗಂಗೋತ್ರಿಯಲ್ಲಿ ನಿರ್ಮಿಸಲಾಗುತ್ತಿರುವ ಬಸವಾಲಯ ಮತ್ತು ಬೃಹತ್ ಬಸವ ಪುತ್ಥಳಿ ಯೋಜನೆಗೆ ವಿನಿಯೋಗಿಸಲಾಗುವುದು. 80G ಇನ್ ಕಮ್ ಟ್ಯಾಕ್ಸ್ ರಿಯಾಯಿತಿ ಬೇಕಾದವರು ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು.

ಬಸವ ಧರ್ಮ ಪೀಠ (ರಿ)
ಬಸವ ಮಂಟಪ, ೨೦೩೫
೨೦ನೆಯ ಮೇನ್, ೨ನೇ ಬ್ಲಾಕು
ರಾಜಾಜಿನಗರ, ಬೆಂಗಳೂರು-೫೬೦ ೦೧೦
ದೂರವಾಣಿ - ೩೩೨ ೫೨೩೫

ಕೇಂದ್ರ ಸಂಸ್ಥೆ: ಬಸವ ಧರ್ಮ ಪೀಠ (ರಿ)
ಮಹಾಮನೆ ಮಹಾಮಠ,
ಕೂಡಲ ಸಂಗಮ ೫೮೭ ೧೧೫
ತಾ-ಹುನಗುಂದ, ಜಿಲ್ಲೆ-ಬಿಜಾಪುರ
ದೂರವಾಣಿ: ೦೮೩೫೧ - ೭೪೮೩೮

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ ''ಕಲ್ಯಾಣ ನಗರ'' ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ ''ಬಸವ ಗಂಗೋತ್ರಿ'' ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ತರಹ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ, ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. ''ಬಸವ ಗಂಗೋತ್ರಿ ನಗರ'' ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' x ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' x ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದ ತೆಂಗಿನಮರಗಳು ಬರುವಂತೆ ಯೋಜಿಸಲಾಗುವುದರಿಂದ ಅಳತೆಯು ಹೆಚ್ಚಿಗೆಯೂ ಆಗಬಹುದು.

ಭೂಮಿಯ ಆಕಾರಕ್ಕನುಗುಣವಾಗಿ ನಿವೇಶನಗಳು ಇನ್ನೂ ಕಡಿಮೆ ಅಳತೆಯುಳ್ಳವುಗಳೂ ಆಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ಅಭಿವೃದ್ಧಿಪಡಿಸಿದ ಸ್ಥಿತಿಯಲ್ಲಿರುವ ನಿವೇಶನಗಳನ್ನು ವಿತರಿಸಲಾಗುವುದು.

೩. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ೧೦೦೦-೦೦ (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೪. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ''ವಿಶ್ವಕಲ್ಯಾಣ ಮಿಷನ್, ಬೆಂಗಳೂರು'' ಹೆಸರಿಗೆ ೧೦೦-೦೦ (ಒಂದುನೂರು) ರೂಗಳನ್ನು ಎಂ.ಓ.ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂರವಾಣಿ : ೮೪೩೭೨೩೪

ಸೋದರಿ ಕಸ್ತೂರಿ, ವಿಶ್ವಕಲ್ಯಾಣ ಮಿಷನ್,
ಬಸವ ಗಂಗೋತ್ರಿ ನಗರ, ಕುಂಬಳಗೋಡು-೫೬೦೦೭೪
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ.

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ. ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.


ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡಾಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿ ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

ಗುರು ಚರಣಕ್ಕೆ ನುಡಿ ನಮನ

ಓ ಬಸವ ಚೇತನ
ನಿಮ್ಮ ಕಾರ್ಯ ವಿನೂತನ॥
ತ್ಯಾಗ ವಿರಕ್ತಿಗಳ ಸಂಗಮ
ಆದಿರಿ ಆದರ್ಶ ಜಂಗಮ॥
ಹರಿದು ವ್ಯಾಮೋಹದ ಸಂಕೋಲೆಯ
ಪಡೆದಿರಿ ವಿಶ್ವಬಂಧುತ್ವವ
ಹೊತ್ತು ಬಸವ ತತ್ತ್ವವ
ಚೆಲ್ವರಿದಿರಿ ಅದರರರ್ಥವ॥
ಮನೆ-ಮನ ಮುಟ್ಟುವಂತೆ
ಪಾದಯಾತ್ರೆಗೈದಿರಿ ದಣಿಯದಂತೆ
ನಾಡು-ನುಡಿ ಧರ್ಮಕೆ
ಸಲ್ಲಿಸಿದಿರಿ ಅಮರ ಸೇವೆಯ॥
ಮನ ಉಸಿರು ಪ್ರಾಣವಾಗಿತ್ತು
ಪ್ರವಚನದ ಕಾಯಕ
ಕಾಯಕವೇ ಕೈಲಾಸವೆಂಬ ನುಡಿಯ
ಕೃತಿಗಿಳಿಸಿ ಉಸಿರ ನಿಲಿಸಿದಿರಿ ॥
ನೀಡಿದಿರಿ ನಿಮ್ಮ ಜ್ಞಾನ ಸುಧೆಯ
ಸಾವಿರಾರು ಚೇತನಗಳಿಗೆ ನಿತ್ಯವು
ಆ ಚೇತನಗಳಿಂದ ಬೆಳಗುತಿದೆ ಜಗದಿ
ನೀವಿತ್ತ ಜ್ಞಾನ ಜ್ಯೋತಿ ನಿರಂತರ ॥
ವರುಷ ತುಂಬಿತಿಂದಿಗೆ ಹರುಷದಿಂದ
ನಗಿಸುತ್ತ ನಮ್ಮೆಲ್ಲರನಗಲಿ
ದೇಹ ಒಂದೂಗೂಡಿದರೂ ಪಂಚಭೂತಗಳಲ್ಲಿ
ಜ್ಞಾನ ಚೇತನವಾಗಿ ಉಳಿದಿರೆಲ್ಲರ ಮನ-ಮನದಲ್ಲಿ॥

ವಚನ ಮೌಕ್ತಿಕ

ಬಯಸಿ ಬಯಸಿ ಬಳಲಿದೆ, ಬೇಡಿ ಬೇಡಿ ತೊಳಲಿದೆ
ನಾ ಬಯಸಿದರಾಗುವುದು ಬೇರೊಂದು, ಬೇಡಿದರೆ ಸಿಕ್ಕುವುದು ಮತ್ತೊಂದು
ಬಯಸುವ ಬೇಡುವವದನತಿಗಳೆದು
ನೀ ನೀಡಿದುದ ಸ್ವೀಕರಿಸುವ, ಸಮತೆಯನಳವಡಿಸಯ್ಯಾ
ಮಾತಾ ಪ್ರಿಯ ಸಚ್ಚಿದಾನಂದಾ — ಪೂಜ್ಯ ಮಾತೆ ಅಕ್ಕಮಹಾದೇವಿ



ನೀಲಾಂಬಿಕೆ ತಾಯಿಯವರು

